ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

ಸಂಪುಟ ೬೧

ಸಂಚಿಕೆ ೧

ಜೂನ್ ೧೯೭೬



ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ, ಬೆಂಗಳೂರು–೧೮

KANNADA SAHITYA PARISHATPATRIKE. Kannada Half-Yearly of the Kannada Sahitya Parishat, Bangalore. Volume 61, No. 1, June 1976. Edited by R. S. Rama Rao, M.A.
Annual Subscription Rs. 2-50

ವಾರ್ಷಿಕ ಚಂದಾ : ರೂ. ೨-೫೦

ಮುದ್ರಕರು :

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೧೮

ಸಂಪಾದಕೀಯ

ಕನ್ನಡ ಸಾಹಿತ್ಯ ಪರಿಷತ್ತಿಗೆ ೧೯೭೫ಕ್ಕೆ ಅರವತ್ತು ವರ್ಷಗಳು ತುಂಬಿದವು. ಅದರ ವಜ್ರಮಹೋತ್ಸವ ನಡೆಯಬೇಕು. ಈ ಉತ್ಸವವನ್ನು ೧೯೭೭ನೆಯ ಏಪ್ರಿಲ್ ಕಡೆಯ ವಾರದಲ್ಲಿ ನಡೆಸಬೇಕೆಂದು ನಿಶ್ಚಯಮಾಡಲಾಗಿದೆ. ಒಂದು ಸಂಸ್ಥೆಯ ಅರವತ್ತು ವರ್ಷಗಳ ಬದುಕಿನಲ್ಲಿ ಅದು ನಡೆದ ದಾರಿ, ಸಲ್ಲಿಸಿದ ಸೇವೆ, ಗಳಿಸಿದ ಕೀರ್ತಿ, ಸಂಪಾದಿಸಿದ ಪ್ರೀತಿ ಇವು ಮಹತ್ತರವಾದುವು. ಅವುಗಳನ್ನು ಕುರಿತ ಒಂದು ಸಿಂಹಾವಲೋಕನ ಸಂಸ್ಥೆಯ ದೃಷ್ಟಿಯಿಂದ ಅವಶ್ಯಕ. ಮುಂದೆ ಅದು ನಡೆಯುವ ದಾರಿಗೆ, ಕಾಣುವ ಕಣ್ಣಿಗೆ, ಹಾಕಿಕೊಳ್ಳುವ ಯೋಜನೆಗೆ ಅಂಥ ಅವಲೋಕನ ಅನಿವಾರ್ಯ. ಅಲ್ಲದೆ ಪರಿಷತ್ತು ಆರಂಭವಾದಾಗ ಇದ್ದ ಸ್ಥಿತಿಗೂ ಇಂದಿನ ಸ್ಥಿತಿಗೂ ತುಂಬ ಬದಲಾವಣೆಯಾಗಿದೆ. ಕನ್ನಡನಾಡು ಹರಿದು ಬೇರೆ ಬೇರೆ ಆಡಳಿತದಲ್ಲಿ ಹಂಚಿಹೋಗಿತ್ತು. ಈಗ ಹೆಚ್ಚು ಕಡಮೆ ನೃಪತುಂಗ ಕಂಡ ವಿಶಾಲ ಕರ್ನಾಟಕ ಒಂದಾಗಿ ಒಂದು ಆಡಳಿತಕ್ಕೆ ಒಳಪಟ್ಟಿದೆ. ರಾಜ್ಯಕ್ಕೆ ಸ್ವಾತಂತ್ರ್ಯವೂ ದೊರಕಿದೆ. ಕೇಂದ್ರ ಸರ್ಕಾರ ಕನ್ನಡವನ್ನು ಭಾರತದ ಅಧಿಕೃತ ಹದಿನಾಲ್ಕು ಭಾಷೆಗಳಲ್ಲಿ ಒಂದನ್ನಾಗಿ ಪರಿಗಣಿಸಿದೆ.

ಭಾರತೀಯ ಇತರ ಭಾಷೆಗಳ ಜೊತೆಗೆ ಕನ್ನಡ ಸ್ಪರ್ಧಿಸಿ ಬೆಳೆದು ಎತ್ತರಕ್ಕೆ ಕೈ ಚಾಚುವುದರ ಜೊತೆಗೆ, ತನ್ನ ಸಂಪತ್ತನ್ನು ಅಧಿಕಗೊಳಿಸಿ, ಇತರ ಸೋದರೀ ಭಾಷೆಗಳೊಡನೆ ಸಮ ಸಮನಾಗಿ ನಿಲ್ಲಬೇಕಾಗಿದೆ ಅವುಗಳ ಸೌಹಾರ್ದಸಂಪತ್ತನ್ನು ಗಳಿಸಿಕೊಳ್ಳಬೇಕಾಗಿದೆ.

ಪರಿಷತ್ತು ಕನ್ನಡ ಸಾಹಿತ್ಯ ಸಂಸ್ಕೃತಿಗಳ ಪುರೋಭಿವೃದ್ಧಿಯ ಧ್ಯೇಯವನ್ನು ಹೊಂದಿರುವುದು ಸರಿಯಷ್ಟೆ. ಕನ್ನಡ ಪ್ರದೇಶ, ಕನ್ನಡ ಜನ ಬೇರೆ ಬೇರೆ ಪ್ರಾಂತಗಳಲ್ಲಿ ಸಿಕ್ಕಿಕೊಂಡಿದ್ದಾಗ, ಕನ್ನಡ ಸಂಸ್ಕೃತಿಯನ್ನು ಉಳಿಸಿ ಕಾಪಾಡಿಕೊಂಡು ಬರುವುದರ ಜೊತೆಜೊತೆಯಾಗಿ ಕನ್ನಡಿಗರು, ಅವರು ಯಾವುದೇ ಆಡಳಿತದಲ್ಲಿರಲಿ, ಅವರೆಲ್ಲ ಒಂದು ಎಂಬ ಭಾವನೆಯನ್ನು ಅವರಲ್ಲಿ ಮೂಡಿಸಿ ಬೆಳೆಸಬೇಕಾಗಿತ್ತು. ಆದರೆ ಈಗ, ಎಂದರೆ, ಕನ್ನಡನಾಡು ಒಂದಾದಮೇಲೆ, ಪ್ರತಿಯೊಬ್ಬ ಕನ್ನಡಿಗನೂ ಅವನು ನಗರದಲ್ಲಿರಲಿ, ಊರಿನಲ್ಲಿರಲಿ, ಪರಊರಿನಲ್ಲಿರಲಿ, ನಾಡಿನಲ್ಲಿರಲಿ, ಹೊರನಾಡಿನಲ್ಲಿರಲಿ, ತಾನು ಕನ್ನಡಿಗ, ತನ್ನ ನಾಡು ಕರ್ನಾಟಕ, ತನ್ನ ನುಡಿ ಕನ್ನಡ ಎಂಬ

ಅಭಿಮಾನ ತಾಳಿ ಅವುಗಳ ಅಭ್ಯುದಯಕ್ಕಾಗಿ ದುಡಿಯಬೇಕಾಗಿದೆ. ಈ ನಿಟ್ಟಿನಲ್ಲಿ ಪರಿಷತ್ತಿನ ಕೆಲಸ ಬಹು ವ್ಯಾಪಕವಾದುದು.

ಪರಿಷತ್ತು ಮುಂದಿನ ವರ್ಷ ನಡೆಸುವ ವಜ್ರಮಹೋತ್ಸವದ ಸಂದರ್ಭದಲ್ಲಿ ಈ ವಿಚಾರಗಳ ಪರಿಶೀಲನೆಗಾಗಿ ವೇದಿಕೆಗಳನ್ನು ಏರ್ಪಡಿಸಲಿದೆ. ಭಾರತದ ವಿವಿಧ ಭಾಷೆಗಳ ಶ್ರೇಷ್ಠ ವರ್ಗದ ಸಾಹಿತಿಗಳ ಸಭೆ, ಭಾರತದಲ್ಲಿ ಭಾಷೆಗಾಗಿ ದುಡಿಯುತ್ತಿರುವ ಸಾಹಿತ್ಯ ಅಕಡವಿುಗಳ ಪ್ರತಿನಿಧಿಗಳ ವಿಚಾರಗೋಷ್ಠಿ, ನಾಡಿನ ಪ್ರಸಿದ್ಧ ಸಾಹಿತಿಗಳ ಸಮಾಲೋಚನ ಸಭೆಗಳು ಅಗ ಸೇರಲಿವೆ. ಕನ್ನಡಿಗರೆಲ್ಲರಿಗೆ ಹಳಗನ್ನಡ ಕಾವ್ಯಗಳು ಮತ್ತು ಅವುಗಳ ಹೊಸಗನ್ನಡ ಅನುವಾದ ಸುಲಭ ಬೆಲೆಗೆ ದೊರಕುವಂತೆ ಪುಸ್ತಕಗಳನ್ನು ಹೊರತರುವ ಬಹು ಮುಖ್ಯವಾದ ಒಂದು ಕಾರ್ಯಕ್ರಮವೂ ನಡೆಯಲಿದೆ.

ವಜ್ರಮಹೋತ್ಸವವನ್ನು ತುಂಬ ವಿಜೃಂಭಣೆಯಿಂದ ನಡಸಬೇಕೆಂಬ ಯತ್ನ ನಡೆದಿದೆ. ಉತ್ಸವಕ್ಕೆ ಸುಮಾರು ೨೦ ಲಕ್ಷ ರೂ. ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಹೆಚ್ಚಿನ ಭಾಗ ಪರಿಷತ್ತಿನ ಪ್ರಕಟಣೆಗಳಿಗೆ ಮತ್ತು ಪರಿಷತ್ತಿನ ವಜ್ರಮಹೋತ್ಸವವನ್ನು ಶಾಶ್ವತವಾಗಿ ನೆನಪಿಗೆ ತರುವ ಒಂದು ಕಟ್ಟಡಕ್ಕೆ ಮೀಸಲಾಗಿಡುತ್ತದೆ.

ಕನ್ನಡಿಗರ ಅಭಿಮಾನದ ಏಕೈಕ ಸಾಹಿತ್ಯ ಸಂಸ್ಥೆಯಾದ ಪರಿಷತ್ತಿನ ಈ ಉತ್ಸವ ಸರ್ವಜನಾದರಣೀಯವಾಗಿ ನಡೆಯುವುದರಲ್ಲಿ ಸಂಶಯವಿಲ್ಲ; ಅತಿಶಯೋಕ್ತಿಯೂ ಇಲ್ಲ.

ಉತ್ಸವ ಪರಿಷತ್ತಿನ ಅಭೀಷ್ಟದಂತೆ ಯಶಸ್ವಿಯಾಗಿ ನಡೆಯಲು ಕನ್ನಡಿಗರೆಲ್ಲರ ಸಹಾಯ ಸಹಕಾರಗಳ ಅಗತ್ಯವನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಪರಿವಿಡಿ

೧. ಮಹಾಕಾವ್ಯಗಳಲ್ಲಿ ಸಂಗ್ರಹ ಕುಶಲತೆ ಮತ್ತು ವಿಸ್ತಾರವೈಭವ . . ೧
—ಎ. ಎಸ್. ವೇಣುಗೋಪಾಲರಾವ್

೨. ಗ್ರಂಥ ಸಂಪಾದನೆ . . ೧೩
—ಡಾ. ಎಂ. ಚಿದಾನಂದಮೂರ್ತಿ

೩. ಮುಂಡರಗಿ ತಹಸೀಲಿನ ಪ್ರಾಚೀನ ಚರಿತ್ರೆ (ಮುಂದುವರೆದದ್ದು) . . ೨೫
—ಎ. ಎಂ. ಅಣ್ಣೀಗೇರಿ

೪. ಷಡಕ್ಷರ ದೇವನ ಸ್ತೋತ್ರ ಸಾಹಿತ್ಯ . . ೩೬
—ಚನ್ನಪ್ಪ ಎರೇಸೀಮೆ

೫. ಭಾರತೀಯ ತರ್ಕಶಾಸ್ತ್ರದ ರೂಪುರೇಖೆಗಳು . . ೫೪
—ಡಾ. ಎಂ. ಎನ್. ನರಸಿಂಹನ್

೬. ದೇವರ ದಾಸಿಮಯ್ಯನ ಸಾಮಾಜಿಕ ಕ್ರಾಂತಿ . . ೬೯
—ಡಿ. ಲಿಂಗಯ್ಯ

೭. ಪವಣಂಜಯ : ಜಾಗತಿಕ ಪಂದ್ಯಾಳು . . ೭೬
—ಭುಜೇಂದ್ರ ಮಹೀಶವಾಡಿ

೮. ಪರ್ವತ ಶಿವಯೋಗಿ : ಕಾಲವಿಚಾರ ಮತ್ತು ಕವಿಚರಿತೆಯ ಕೆಲವು ಅನುಕ್ತ ಕೃತಿಗಳು . . ೮೬
—ಎಸ್. ಶಿವಣ್ಣ

HALF-YEARLY JOURNAL
OF THE
KANNADA LITERARY ACADEMY, BANGALORE

Vol. 61 **JUNE 1976** **No. 1**

CONTENTS IN BRIEF

1. MAHA KAVYAGALALLI SANGRAHA KUSHALATE MATTU VISTARA VAIBHAVA 1
—Sri A. S. Venugopala Rao

Cleverness of epitomy and magnificence of expansion in Great Poetical Works, explained with illustrations from the two great Poets Pampa and Kumaravyasa.

2. GRANTHA SAMPADANE 13
—Dr. M. Chidananda Murthi

Briefly explains the problems of editing old classics.

3. MUNDARGI TAHASEELINA PRACHINA CHARITRE 25
—Sri A. M. Annigeri

Continued from the previous issue and concluded. Traces the history of Mundargi, a taluk in Dharwar District.

4. SHADAKSHARA DEVANA STOTRA SAHITYA 36
—Sri Channappa Yereseeme

Explains the different Sanskrit hymns of divinity written by the Kannada Poet Sadakshara deva.

5. BHARATEEYA TARKA SASTRADA ROOPA REKHEGALU 54

—Dr. M. N. Narasimhan

Indicates the history of logic prior to Gautama and explains the theory of logic of Astavakra and Medathithi Gautama.

6. DEVARA DASIMAYYANA SAMAJIKA KRANTI 69

—Sri D. Lingaiah

Quoting the Vachanas (Sayings) of Devara Dasimayya, his contribution to the social revolution of his time is explaincd.

7. PAVANANJAYA - JAGATIKA PANDYALU 76

—Sri Bhujendra Maheesavadi

An appreciation of a Lavani by Dwarapala narrating the valourous adventure of an olympic winner of Belgaum.

8. PARVATA SHIVAYOGI : KALA VICHARA MATTU KAVICHARITEYA KELAVU ANUKTA KRITIGALU 86

—Sri S. Shivanna

Discusses the date of Parvatashivayogi indicating his unnamed other works.

ಮಹಾಕಾವ್ಯಗಳಲ್ಲಿ ಸಂಗ್ರಹ ಕುಶಲತೆ ಮತ್ತು ವಿಸ್ತಾರ ವೈಭವ

—ಎ. ಎಸ್. ವೇಣುಗೋಪಾಲರಾವ್

ಮಾರ್ಗಕಾರನ ಅಭಿಪ್ರಾಯದಲ್ಲಿ ಶಬ್ದ ಸಂಪತ್ತು-ಅದರಿಂದ ಸಿದ್ಧಿಸುವ ವಾಚಾಳತನ, ಮಹಾಕವಿಯ ಪ್ರಾಥಮಿಕ ಅವಶ್ಯಕತೆಗಳಲ್ಲಿ ಒಂದು. ಆದರೆ ತನಗೆ ಹಸ್ತಗತವಾದ ಈ ಸಂಪತ್ತನ್ನು ಪೋಲು ಮಾಡದೆ, ಔಚಿತ್ಯಪೂರ್ಣವಾಗಿ ಬಳಸಿ ಕೊಳ್ಳುವ "ಸಂಗ್ರಹ ಕುಶಲತೆ" ಅವನು ಸಾಧಿಸಿಕೊಳ್ಳಬೇಕಾದ ಗುಣ. ಶಬ್ದ ಸಂಪತ್ತು ಇಲ್ಲದ ಬಡಕವಿಯ ಕಾವ್ಯ ಪೇಲವವಾಗುತ್ತದೆ. ಆದರೆ ಹದಮೀರಿದ ಶಬ್ದಗಳ ಚೆಲ್ಲಾಟದಿಂದ ಕಾವ್ಯ, ದೊಂಬರಾಟವಾಗುತ್ತದೆ. ಸಂಗ್ರಹ ಕುಶಲತೆ, "ಕಿರಿದರೊಳ್ ಪಿರಿದರ್ಥಮಂ" ಸಾಧಿಸುವ ಕಡೆ ಹೆಜ್ಜೆ ಹಾಕುತ್ತದೆ. ಆದರೆ ಈ ಸಂಗ್ರಹವೂ ಮಿತಿಮೀರಿ, ಸನ್ನಿವೇಶದ ಅವಶ್ಯಕತೆಯನ್ನು ಧಿಕ್ಕರಿಸಿದರೆ, ಕಾವ್ಯ ಉಸಿರು ಕಟ್ಟಿಸಿ, ಗಂಟಲು ಹಿಸುಕಿ ಕೊಲ್ಲುವಂತಹ ಅನುಭವವಾಗುತ್ತದೆ. ಶಬ್ದ ಸಂಪತ್ತು (ವಾಚಾಳತನ) ಮತ್ತು ಸಂಗ್ರಹ ಕುಶಲತೆ ಎರಡೂ ಮಹಾಕವಿಯ ಅಪೂರ್ವ ಸಾಧನಗಳೇ ಆದರೂ ಯಾವುದು ಎಲ್ಲಿ ಹದಮೀರುತ್ತದೆ—ರಸಾಭಾಸ ಅಥವಾ ರಸಭಂಗವನ್ನು ಉಂಟುಮಾಡುತ್ತದೆ, ಎಂಬುದಕ್ಕೆ ಸಹೃದಯನ ಅನುಭವವೇ ಪರಮ ಪ್ರಮಾಣ. ಮಹಾಕವಿಗಳ ಪ್ರತಿಭೆಗೂ ಸವಾಲಾಗಿ ನಿಲ್ಲುವ ಇಂತಹ ಸನ್ನಿವೇಶಗಳು ಪ್ರಾಚೀನ-ಅರ್ವಾಚೀನ ಕಾವ್ಯಗಳಲ್ಲಿ ಕಡಿಮೆ ಏನಿಲ್ಲ.

ಕನ್ನಡ ಸಾಹಿತ್ಯದ ಇರ್ವರು ಸೀಮಾಪುರುಷರು—ಪಂಪ ಹಾಗೂ ಕುಮಾರ ವ್ಯಾಸ. ಒಂದೇ ಕಾವ್ಯವಸ್ತುವನ್ನು ಆಧರಿಸಿ ಬರೆದ ಅವರ ಕಾವ್ಯಗಳ ಕೆಲವು ಪ್ರಸಂಗಗಳನ್ನು ಪರಿಶೀಲನೆಗೆ ಆರಿಸಿಕೊಂಡು, ಮೇಲಿನ ಗುಣಗಳನ್ನು ವಿವೇಚಿಸುವ ಪ್ರಯತ್ನವನ್ನು ಇಲ್ಲಿ ಮಾಡಿದೆ.

"ವಿಕ್ರಮಾರ್ಜುನ ವಿಜಯ"ದ ಕವಿ, ಪ್ರಧಾನವಾಗಿ "ಸಂಗ್ರಹ ಕುಶಲಿ". ವ್ಯಾಸಮುನೀಂದ್ರರ ವಚನಾಮೃತ ವಾರ್ಧಿಯನ್ನು ಈಸಿಬಿಟ್ಟರೆ ಅವನು ಕೃತಾರ್ಥ. ಈ ಮಾತು ಕವಿಯ ವಿಷಯವನ್ನು ಸೂಚಿಸುವುದಲ್ಲದೆ, ಕೃತಿಯ ಪರಿಮಿತಿಯನ್ನೂ ಸೂಚಿಸುವಂತಿದೆ. "ಕತೆಯ ಮೆಯ್ಯ್ ಕೆಡಲೀಯದೆ" ಸಮಸ್ತ ಭಾರತವನ್ನು

ಸಾಹಸ ಕಥಾಶ್ರವಣ ಕುತೂಹಲಿಯಾದ ಗುಣಾರ್ಣವನಿಗೆ ನಿರೂಪಿಸುವ ಕಾರ್ಯದಲ್ಲಿಯೇ ಕವಿಗೆ ಆಸಕ್ತಿ. ಆದುದರಿಂದ ಆದಿಪುರಾಣದಲ್ಲಿ ಕಾಣುವ ಬಿಡುಬೀಸು ಬರವಣಿಗೆ, ವಿಸ್ತಾರ ವೈಭವ, ಅಪೂರ್ವ ದರ್ಶನ ವಿಲಾಸ, ಈ ಕಾವ್ಯದಲ್ಲಿ ದೊರಕುವುದಿಲ್ಲ. ಜಿನಾಗಮವನ್ನು ಬೆಳಗುವ ಉದ್ದೇಶವನ್ನೇ ಪ್ರಧಾನವಾಗಿಟ್ಟುಕೊಂಡರೂ ಮಾನವನು ಏರಬಹುದಾದ ಎತ್ತರ, ಜೀವ ಹಾದುಬರುವ ವಿಚಿತ್ರವಿಲಾಸದ ಭವವೀಥಿಗಳನ್ನು ಕಾಣಬೇಕಾದರೆ, ಆದಿಪುರಾಣಕ್ಕೇ ಹೋಗಬೇಕು. ಎಲ್ಲ ಅರ್ಥದಲ್ಲೂ ಅದು ಪಂಪನ ಭವ್ಯ ಕಾವ್ಯ.

ಆದರೆ ಇಲ್ಲಿ ಕವಿಯ ಸಂಗ್ರಹ ಕುಶಲತೆ-ಅದರಲ್ಲಿ ಸಾಧಿಸಲಾದ ಯಶಸ್ಸು, ಜಾರುದಾಣಗಳು-ಇವು ಪರಿಶೀಲನೆಯ ವಸ್ತುವಾದುದರಿಂದ ಭಾರತ ಕತೆಯ ಕಡೆ ತಿರುಗೋಣ.

"ರಾಜಸೂಯ ಯಾಗ" ಪ್ರಸಂಗ ಮಹಾಭಾರತದ ರೋಮಾಂಚಕರ ಅಧ್ಯಾಯಗಳಲ್ಲಿ ಒಂದಷ್ಟೆ. ಅಪೂರ್ವ ರಾಜಕೀಯ ಘಟನೆಗಳಿಂದ ಗಿಡಿದ ಪ್ರಸಂಗ ಅದು. ಪಾಂಡವರ ಮಹಿಮಾವೃದ್ಧಿ, ಅದರ ಪರಿಣಾಮವಾದ ವಿದ್ವೇಷ, ಅಂದಿನ ರಾಜ ಮಹಾರಾಜರು ಪಕ್ಷ ಪ್ರತಿಪಕ್ಷವಾಗಿ ಒಡೆದುದು, ಏರೇರಿ ಹೋಗುತ್ತಿದ್ದ ಶ್ರೀಕೃಷ್ಣ ಮಹಿಮಾ ವಿಲಾಸ, ಇವೆಲ್ಲಕ್ಕೆ ಸಾಕ್ಷಿಯಾದ ಯಾಗವದು. ಶಿಶುಪಾಲ ವಧೆಯ ಸನ್ನಿವೇಶ ಅಂದಿನ ರಾಜಕೀಯ ಪರಿಸರದ ಕೈಗನ್ನಡಿ ಎಂದರೂ ಸರಿಯೇ. ಈ ಸನ್ನಿವೇಶದ ವರ್ಣನೆಯಲ್ಲಿ ಪಂಪನ ಕಾವ್ಯಶಕ್ತಿ—ಮುಖ್ಯವಾಗಿ ಸಂಗ್ರಹ ಕುಶಲತೆ ಮಡುಗಟ್ಟಿ ನಿಂತಿರುವುದನ್ನು ಕಾಣಬಹುದು. "ಅದೇಂ ಪೆಂಪೋ ಮಹಾಯಜ್ಞದಾ" ಎಂದು ಲೋಕ ಬೆರಗಾಯಿತು, ಆ ಯಾಗ ವೈಭವವನ್ನು ಕಂಡು. ಯಾಗದ ಕಡೆಯ ಭಾಗ ಅಗ್ರಪೂಜೆ. ತುಂಬಿದ ರಾಜಸಭೆಯಲ್ಲಿ, ಹಿರಿಯರು, ಉದ್ಧಟ ಪರಾಕ್ರಮಿಗಳು, ಬಂಧು ಬಾಂಧವರು ತುಂಬಿರುವಾಗ ಅಗ್ರಪೂಜೆ ಯಾರಿಗೆ?—ಈ ಸೂಕ್ಷ್ಮ ಪ್ರಶ್ನೆಗೆ ಉತ್ತರಿಸುವ ಜವಾಬ್ದಾರಿ ಕುರುಕುಲ ವೃದ್ಧ ಪಿತಾಮಹನಾದ ಗಾಂಗೇಯನ ಬೆನ್ನಿಗೆ ಬಿದ್ದುದು ಸಹಜವೇ. ಆ ಮಹಿಮಾರ್ಣವನ ಉತ್ತರ ಖಚಿತ—ಖಂಡಿತ. ಕಡ್ಡಿ ಮುರಿದಂತೆ ಮಾತು. ಹಲವು ಅವತಾರಗಳಲ್ಲಿ ಲೋಕವನ್ನುದ್ಧರಿಸಿರುವ ಶ್ರೀಹರಿಯಿರುವಾಗ—"ಆತನೆ ವಲಂ ಪೆರಂಗ್ ಅಕ್ಕರೆ?" ಎಂಬ ನಿರ್ದಿಷ್ಟ ತೀರ್ಮಾನ ಆತನದು. ಧರ್ಮಜನಿಗೆ ಮನಸಾ ಪ್ರಿಯವಾಗಿದ್ದ ಮಾತು ಅದು. ಅಗ್ರಪೂಜೆಯ ಸಿದ್ಧತೆಗಳು ಮಿಂಚಿನ ವೇಗದಲ್ಲಿ ಮುಗಿದವು. ಧರ್ಮಜನು ಅರ್ಘ್ಯವನ್ನು ನೀಡಲು ಸಿದ್ಧವಾಗುತ್ತಿದ್ದಂತೆ ಸಭೆಯಲ್ಲಿ ಸಿಡಿಲು ಮಸಗಿತು. ಚೇದಿರಾಜ ಶಿಶುಪಾಲನು ಸಿಡಿಮಿಡಿಗೊಂಡು ಕೋಪದ ಕಿಡಿಗಳನ್ನು ಕಾರಿದನು. ಸಂಸ್ಕೃತ ಭೂಯಿಷ್ಠವಾದ ಪಾಂಡಿತ್ಯದ ಭಾರದಿಂದ ಜಗ್ಗುವ ಹತ್ತನೆಯ ಶತಮಾನದ ಮಾರ್ಗಕಾವ್ಯದ ನಡುವೆ, ಶಿಶುಪಾಲನ ಶುದ್ಧ ದೇಶೀ

ಬಯ್ಗುಳದ ಲವಲವಿಕೆಯನ್ನು ಓದಿಯೇ ಅನುಭವಿಸಬೇಕು! ಮಾತಿನಲ್ಲಿ ಕ್ರೋಧದ ಕೆಂಡವನ್ನು ಹಿಡುವ ಅಪೂರ್ವ ತೇಜಸ್ಸು! "ಕಳೆ ಕಳೆ ಹರಿಗೆತ್ತಿದರ್ಘ್ಯಮಂ" ಸಭೆ ಚಕಿತವಾಗಿರಬೇಕು. ಕ್ರಮವಾಗಿ ಭೀಷ್ಮ, ಧರ್ಮಜ, ಕೃಷ್ಣರನ್ನು ದೈತ್ಯನು ತರಾಟೆಗೆ ತೆಗೆದುಕೊಂಡನು. ತಲೆ ನೆರೆತ ಡೊಳ್ಳು ಹೊಟ್ಟೆಯ ಭೀಷ್ಮನನ್ನು ಕ್ರೂರವ್ಯಂಗ್ಯದಿಂದ ನಿಂದಿಸಿದನು. ಕೃಷ್ಣನಾದರೋ ಮನುಜಾಧೀಶರ ಸಭೆಯಲ್ಲಿ ಕುಳಿತಿರಲು ಅರ್ಹನೆ ಅಲ್ಲ. ಅವನಿಗೆ ಅಗ್ರಪೂಜೆಯೇ? ಅಮೃತವನ್ನುಂಡು ಗೋಮೂತ್ರದಿಂದ ಬಾಯಿ ತೊಳೆದಂತೆ ಯಾಗವೇ ಭ್ರಷ್ಟವಾಯಿತು. ಆತ ಅಯೋಗ್ಯ—ಪಚ್ಚ ಪಸಿಯ ತುರುಕಾರ—ನಂದಗೋಪಾಲನ ಮನೆಯೇ ಮನೆ, ತುರುಗಾರ್ತಿಯೇ ಪೆಂಡತಿ, ರಾಜರ ಸಭೆಯಲ್ಲಿ ಸಮಕಟ್ಟುರಿಯಬಾರದೆ? ಧರ್ಮಜ, "ಮನದೊಲವರಮುಳ್ಳೊಡೆ ಕುಡುಮನೆಯೊಳ್ ಹರಿಗಗ್ರಪೂಜೆಯಂ....ಮನುಜಾಧೀಶ್ವರ ಸಭೆಯೊಳ್ ನೆನೆಯಲುಂ ಆಗದು ದುರಾತ್ಮನಂ"....ಎಲವೋ ನಂದಗೋಪಾಲಸುತಾ ನಿನ್ನಳವಿಯನರಿಯದೆ ನೆಗಳ್ದೈ, ನಾನು ಹುಟ್ಟುವ ಮೊದಲು ಪಡೆದದ್ದು ದನುಜಾಂತಕ ಎಂಬ ನಿನ್ನ ಹೆಸರು, ಇನ್ನು ಮುಂದಲ್ಲ. ಮೀನು, ಆಮೆ, ಹಂದಿಯಾಗಿ ನೀನಾಡಿದ ದೊಂಬರ ವಿದ್ಯೆ ಇನ್ನು ನಡೆಯದು. "ಆಸಿರ್ದ ಸಭೆಯೊಳ್ ಅರ್ಘ್ಯಮನು ಆನಲ್ಕೆ ಆಟಿಸಿದ ನಿನ್ನ ಬಿಸುನೆತ್ತರಿಂ ಈ ನೆರವಿ ನೋಡೆ ಕುಡಿಯದೊಡೇನೋ...." ನಂಜಿನ ಹನಿಗಳನ್ನು ಒಸರಿಸುವ ಈ ನುಡಿಗಳನ್ನು ಕೇಳ ಕೇಳುತ್ತ ಸಭಾಸದರೆಲ್ಲ ಮಿಡುಕದೆ ಪಂದೆಯಂ ಪಾವಡರ್ದವೋಲ್ ಉಸಿರದೆ ಇರ್ದರಂತೆ. ಆದರೆ ನಾರಾಯಣನದು ಅಲ್ಲಿಯೂ ಶ್ರೀಮದ್ಗಾಂಭೀರ್ಯ—ಅನುಪಮ ಸಹನೆ. ಶಿಶುಪಾಲನ ಮಿತಿ ಮೀರುವವರೆಗೂ ತಾಳಿಕೊಂಡ ಅವನು, ಕಾಲವನ್ನು ಕಾದು, ಅತಿ ಸಂಕ್ಷೇಪವಾಗಿ ಹಿಂದಿನ ಕತೆಯನ್ನು ಸಭಿಕರಿಗೆ ಅರುಹಿದನು. "ನಿನ್ನ ಮೃತ್ಯು ಎನ್ನಯ ಕಯ್ಯೊಳ್" ಎಂದು ದೈತ್ಯನಿಗೆ ಸೂಚಿಸಿಬಿಟ್ಟನು. ದೀರ್ಘವಾದ ಪುರಾಣ ಕಥನಕ್ಕೆ ಪಂಪನಿಗೆ ಅವಕಾಶವೇ ಇಲ್ಲ. ಕೃಷ್ಣನ ಮಾತುಗಳಾದರೋ ಎಷ್ಟು ಔಚಿತ್ಯಪೂರ್ಣವಾಗಿದೆ. "ಆಗ ಗಾಂಗೇಯನಿರ್ದಂ ಘಟೋದ್ಭವಂ ನೆಗಳ್ದ ಪೃಥಾ ತನಯರ್ ಇರ್ದರ್ ದುರ್ಯೋಧನ ನಿರ್ದನ್ ಕೇಳೆ ಪೇಳ್ವರ್ ಆ ಬಲ್ಲವರುಂ" ಹೀಗೆ ಈ ಎಲ್ಲರ ಸಮ್ಮುಖದಲ್ಲಿಯೇ ಶಿಶುಪಾಲನ ತಾಯಿ ಸಾತ್ವತಿಗೆ ಮಾತು ಕೊಟ್ಟಿರುವಾಗ ಮತ್ತೇಕೆ ವಿಸ್ತಾರದ ಕಥನ? ಪುರಾಣ ಚಾಪಲ್ಯ? "ಬೇಕಾದರೆ ಕೇಳಿ ತಿಳಿದವರು ಹೇಳುತ್ತಾರೆ" ಎನ್ನುತ್ತಾನೆ ಕವಿ! ಮುಂದೆ ದೈತ್ಯನ ಹದ್ದು ಮೀರಿದಾಗ "ಮುಳಿದು ತನಗರ್ಘ್ಯಮನೆತ್ತಿದ ತಳಿಗೆಯೊಳಿಡೆ ತಿರಿದ ತೆರದಿ ತಲೆ ಪರಿಯಿತು....ತಳಿಗೆಯ ಮೇಲೆ ಅಸುರನ ತಲೆ ಕಳಕಳಿಸಿ ನಗುತಮಿರ್ದುದು....ಅಸುರನ ಅದಟು ಏನಚ್ಚರಿಯೋ!"....ಈ ಮಹಾ ಪ್ರಘಟ್ಟದ ನಿರೂಪಣೆಯಲ್ಲಿ ಕವಿಯ ಸಂಯಮ, ಔಚಿತ್ಯ ಪ್ರಜ್ಞೆ ಬೆರಗುಗೊಳಿಸುತ್ತದೆ. ಉಸಿರು ಹಿಡಿದು,

ಅತ್ತಿತ್ತ ಅಲುಗಲು ಅವಕಾಶವೀಯದೆ ಶರವೇಗದಲ್ಲಿ ಕತೆ ಧಾವಿಸುತ್ತದೆ. “ಅಪೂರ್ವಮಾಗೆ ಸಲೆ ಪೇಳ್ವೊಡೆ ಪಂಪನೆ ಪೇಳ್ಗುಂ” ಎಂಬ ಮಾತು ಇಲ್ಲಿ ಸಾರ್ಥಕವಾಗುತ್ತದೆ.

ಪಂಪಭಾರತದ ಈ ಪ್ರಸಂಗವನ್ನು ಕುಮಾರವ್ಯಾಸ ಭಾರತದ ನಿರೂಪಣೆಯೊಡನೆ ಹೋಲಿಸಿದರೆ ಗದುಗಿನ ಭಾರತವೇ ತೀರ ಪೇಲವವಾಗಿ ತೋರಿಬಂದರೆ ಆಶ್ಚರ್ಯವಲ್ಲ. ಈ ಪೇಲವತೆಗೆ ಕಾರಣ, ಗದುಗಿನ ಭಾರತದ ನಿರೂಪಣೆಯ ಅತಿ ದೀರ್ಘತೆ ಹಾಗೂ ಕವಿಯ ಪುರಾಣಪ್ರಿಯತೆ—ಅತಿ ವಾಚಾಳತನ ಕೃಷ್ಣನ ಮಹಿಮಾ ವಿಲಾಸವನ್ನು ಅತಿಶಯವಾಗಿ ಬಣ್ಣಿಸುವ ಚಾಪಲ್ಯ. ಹೇಳಿ ಕೇಳಿ ಗದುಗಿನ ಭಾರತ “ಕೃಷ್ಣ ಕಥಾಮೃತ”. ಶಿಶುಪಾಲ ವಧೆ ಪ್ರಸಂಗವಂತೂ ಮುರಾರಿಯ ಮಹಿಮಾ ವಿಸ್ತರಕ್ಕೆ ನೇರವಾಗಿ ಸಂಬಂಧಪಟ್ಟುದು ಕೇಳಬೇಕೆ? ಕವಿಯ ವಚೋವಿಲಾಸ ಕಂಠಸತ್ರದ ಉಲುಹುಗೆಡದಂತೆ ನಿನದಿಸುತ್ತದೆ!

ಪಂಪ ಭಾರತದಲ್ಲಿ ಅಚ್ಚುಕಟ್ಟಾದ ಕಂದಪದ್ಯಗಳಲ್ಲಿ ಬಿಗಿಯಾಗಿ ನಿರೂಪಿತವಾದ ಕತೆ ಇಲ್ಲಿ ನಾಲ್ಕು ಸಂಧಿಗಳಷ್ಟು ವಿಸ್ತಾರವಾಗಿ ಹರಡಿದೆ. ಧರ್ಮಜನ ಪ್ರಶ್ನೆಗೆ ಗಾಂಗೇಯನ ಉತ್ತರ ಸಾಕಷ್ಟು ದೀರ್ಘವಾಗಿಯೇ ಇದೆ. ಅದಕ್ಕೆ ಸಕಲ ಮುನಿಗಣದ ಒಪ್ಪಿಗೆಯೂ ಇದೆ—“ಈ ಸಮಸ್ತ ಚರಾಚರದೊಳು ವಾಸುದೇವನೆ ವಂದ್ಯ”. ಮುಂದೆ ಅಗ್ರಪೂಜೆಯ ಸಿದ್ಧತೆ, ಸಹದೇವನ ಮಿಂಚುವ ಮೋಹಕ ಪಾತ್ರದಲ್ಲಿ ಗಜಗಮನ ನಿರೂಪಣೆಯೂ ಗಂಭೀರವಾಗಿದೆ. ಅಲ್ಲಿನ ಸಭಿಕರ ವಿವಿಧ ಭಾವಭಂಗಿಗಳನ್ನು ಚಿತ್ರಿಸುವುದರಲ್ಲೂ ಕವಿಯ ಕುಶಲ ಕುಂಚ ಸಮರ್ಥವಾಗಿ ಆಡಿದೆ. ಆಗ ಖಳಶಿರೋಮಣಿ ಶಿಶುಪಾಲನ ವಚನಮಯ ಖಡ್ಗ ಹೊದರೆತ್ತಿತು. ರಕ್ಕಸನ ವೀರಾವೇಶಕ್ಕೆ ರೂಪಕ ಸಾಮ್ರಾಜ್ಯ ಚಕ್ರವರ್ತಿಯ ಕಿರೀಟಧಾರಣೆಯೂ ಕಾಂತಿಯುಕ್ತವೇ ಆಗಿದೆ. ಇದೆಲ್ಲ ಸರಿಯೇ. ದೈತ್ಯನ ವಚೋವಿಲಾಸವೂ ನಿರರ್ಗಳ. ಇಪ್ಪತ್ತೆರಡು ಪದ್ಯಗಳಿಗೂ ಮೀರಿದ ಈ ಬಯ್ಗಳ ಪರಂಪರೆಯಲ್ಲಿ ನೂರರ ಲೆಕ್ಕವಿಟ್ಟವರಾರು! ಆಸ್ಥಾನ ಕದಡಿ ಭೀಷ್ಮ, ಸಹದೇವ ಇವರಲ್ಲದೆ ಉಳಿದವರ ಗೊಂದಲದಲ್ಲಿ ಮುಳುಗಿ ಹೋಯಿತು. ಭೀಷ್ಮನ ಬಾಯಿಂದ ಶಿಶುಪಾಲನ ನಿಂದನೆ ಪ್ರಾರಂಭಿಸಿತು. ಅವನ ಅವಿವೇಕವನ್ನು ಹೀಯಾಳಿಸಿಯೂ ಆಯಿತು. ಅನಂತರ ಕೃಷ್ಣ ಮಹಿಮೆಯ ಪುನರ್ನಿರೂಪಣೆ! ಇಷ್ಟೇ ಸಾಲದು ಎಂಬಂತೆ, “ಕರುಣಿಸೈ ಗಾಂಗೇಯ ಕೃಷ್ಣನ ಚರಿತೆಯನು....ದುರುಳ ಶಿಶುಪಾಲನ ದುರುಕ್ತಿಗಳ ಕೇಳ್ದರಿಗೆ ಪ್ರಾಯಶ್ಚಿತ್ತವಿದು.... ವಿಸ್ತರಿಸಬೇಹುದು ಸಕಲ ಜನಮತ” ಎಂದು ಧರ್ಮರಾಜ ಕೈಮುಗಿದು ಕೇಳಿದನಂತೆ. ವಾಸ್ತವವಾಗಿ ಎಂತಹ ರಸಾಭಾಸ! ಕ್ರಿಯೆ ಕಾಲು ಕೆರೆದು ಪುಟಿಯುತ್ತಿರುವಾಗ

ಪುರಾಣಕಥನದ ಚಾಪಲ್ಯ ನಮ್ಮ ಕವಿಗೆ! ಈಗಾಗಲೇ ಕೃಷ್ಣನ ಮಹಿಮೆಯ ನಿರೂಪಣೆ ಸಾಕಷ್ಟು ಆಗಿಲ್ಲವೆ? ಈಗ ಸಭಾಪರ್ವದ ಒಂದು ದೀರ್ಘ ಸಂಧಿಯನ್ನೇ ರಾಜೀವಪೀಠನ ಪಿತನ ಅಭಿವರ್ಣನೆಗೆ ಕವಿ ಮೀಸಲಿಟ್ಟಿದ್ದಾನೆ.

ಆಚಾರ್ಯ ಭೀಷ್ಮ "ವಿರಚಿತ ಪದಯುಗ ಪ್ರಕ್ಷಾಲನಾಚಮನ (ಅಂಗನ್ಯಾಸ ಕರನ್ಯಾಸಗಳೂ ಮುಗಿದಿರಬೇಕು) ವಿಲಸತ್ ಪರಿಶುದ್ಧಭಾವದಿಂದ", ಪುರಾಣ ಕಥನಕ್ಕೆ ತೊಡಗಿಯೇಬಿಟ್ಟನು. ೬೩ ಷಟ್ಪದಿಗಳ ವಿಸ್ತಾರದಲ್ಲಿ ವೇದೋಪನಿಷತ್ತು ನಿಗಮಾವಳಿಗಳಿಗೆ ಅತೀತನಾದ, "ಕೃಷ್ಣ ವಚೋಭಿಪ್ರಾಯ ಪೀಯೂಷ"ವನ್ನು ಅಜ್ಜನು ಹರಿಯಿಸಿದನು. "ಈ ಗೋಪಾಲನೆ ಎಮಗಾಚಾರ್ಯ, ಎಮ್ಮಯ ತಂದೆ ಗುರು" ಎಂದು ಸಹದೇವ ಕೃತಿ ಹಾಡಿದನು. ಲೇಸು ಲೇಸು ಎಂದು ಸಭಧ್ವನಿಯೂ ಆಗಿ ಮಲ್ಲಿಗೆಯ ಮೊಗ್ಗೆಗಳ ಮಳೆಯೂ ಆಯಿತು ಸಹದೇವನ ಶಿರದಮೇಲೆ. ಈ ಮಹಿಮಾ ವಿಸ್ತರಕ್ಕೆ ಕೃಷ್ಣನೇ ನಾಚಿರಬೇಕು! ಮುಂದೆ ಶಿಶುಪಾಲನ ಪ್ರತ್ಯುತ್ತರ, ಭೀಮ ಕೋಪ, ಭೀಷ್ಮನ ಸಮಾಧಾನ, "ಇವ ಪೂರ್ವದಲ್ಲಿ ಹಿರಣ್ಯಾಕ್ಷ ಕಣಾ ಮರುಭವದಲಿವ ದಶವದನ, ಅವ ಸಂಭವಿಸಿಹ ಶಿಶುಪಾಲನೆಸರಿನಲಿ" ಎಂಬ ಭೂತ ಪುರಾಣ, ಜನ್ಮ ವೃತ್ತಾಂತ, "ಇವನ ಮರಣ ಹೋಮ ಮುರಾರಿಯಿಂದ" ಎಂಬ ಭವಿಷ್ಯೋತ್ತರ ಪುರಾಣ ಕಥನ ಹೀಗೆ ಕಥೆ ಮುಂದೆ ಸಾಗುತ್ತದೆ. ಪಂಪ ಭಾರತದ ಭೀಷ್ಮ ಗಾಂಭೀರ್ಯಕ್ಕೆ ಪ್ರತಿಯಾಗಿ ಇಲ್ಲಿ ಪೌರಾಣಿಕ ಪಿತಾಮಹ ವಚೋವಿಲಾಸಿ ಭೀಷ್ಮರ ಪರಿಚಯವಾಗುತ್ತದೆ. ಶಿಶುಪಾಲನಲ್ಲಿಯೂ "ಕುಡುವೇಳ್ವನ, ಕುಡುಪನ, ಕುಡೆ ಪಡೆವನ ಪೆಂಪು ಏಂ ನೆಗಳ್ತೆ ವಡೆಗುಮೋ ಪೇಳ್ವಂ! ಕುಡುವೇಳ್ಗೆಮ, ಕುಡುವಣ್ಣಂ ಕುಡುಗೆಮ, ಕುಡೆ ಕೊಳ್ವ ಕಲಿಯಂ ಅರಿಯಲಕ್ಕುಂ" ಎಂಬ ಕಲಿಯ ಕಾರ್ಯೋತ್ಸಾಹದ ಉಕ್ತಿಗೆ ಬದಲಾಗಿ, ನಾಲಗೆಯ ತೀಟೆಯೇ ಅತಿಯಾಗಿ ತೋರಿ ಬರುತ್ತದೆ. ಭೀಮಕೋಪವನ್ನು ಕಂಡಮೇಲೂ ಅವನ ನಾಲಗೆ ನಿಲ್ಲುವುದೇ ಇಲ್ಲ. ಪುನಃ ಮೂದಲಿಕೆ ನಿಂದನೆ. ಮತ್ತೆ ಹನ್ನೆರಡು ಷಟ್ಪದಿಗಳ ವೈಭವ. ಅದಕ್ಕೆ ಅಷ್ಟೇ ವಿಸ್ತರದ ಪ್ರತ್ಯುತ್ತರ. ಅನಂತರ ಯುದ್ಧ ಸಿದ್ಧತೆ. ಶಿಶುಪಾಲನ ಯುದ್ಧ ಕೌಶಲ. ಅದನ್ನು "ನುಡಿದ ಕವಿಯಾರ್ಶೈ ಬರಿಯ ಬಾಯ್ಬಡಿಕನೇ ಶಿಶುಪಾಲ"! ಶಸ್ತ್ರಾಸ್ತ್ರ ಪ್ರಹರಣ, ಲೋಕವನ್ನು ಮುಸುಗಿದ ಅಪಶಕುನ ಪರಂಪರೆ, ಋಷಿಮುನಿಗಳ ಭವಿಷ್ಯ ಕಥನ, ಕಡೆಗೂ "ದಯಾಂಬುಧಿ ತುಡುಕಿದನು ಮಹಾ ಸುದರ್ಶನವ!" ಸಭಸ್ಥ ಆಕ್ಷೆ ಹಾರಿ ಪುನಃ ಮುರಾರಿಯಂಘ್ರಿಯೊಳೆರಗಿ ಬಂದು ನಿಜನೆಲೆಗೆ ಸಂದಿತು ಶಿಶುಪಾಲನ ಶಿರಸ್ಸು. ಶಿಶುಪಾಲನ ತನುಜರನ್ನು ಹರಿಯು ಕರುಣೆಯಿಂದ ಹಿಡಿದೆತ್ತಿದ ನಂತರ ಕಥೆಗೆ ಮಂಗಳ. ಪಂಪ ಭಾರತದ ಗಂಭೀರ ರಾಜಸಭೆಯಲ್ಲಿ, ಸಂತೆಯ ಕೋಲಾಹಲದ ಈ ಗೊಂದಲವೆಲ್ಲಿ ಎನ್ನಿಸಿಬಿಡುತ್ತದೆ. ಅತಿ ವಿಸ್ತರಣದಿಂದ ಮನಸ್ಸಿನ ಮೇಲೆ ಅಚ್ಚೊತ್ತಿ ನಿಲ್ಲುವ ವೈತ್ಯನ ಚಿತ್ರಕ್ಕೆ ಬದಲು ಅಬ್ಬಾ ಅಂತೂ ಕಳವಳ ಮುಗಿಯಿತಲ್ಲ

ಎಂಬ ನಿಟ್ಟುಸಿರು ಮಾತ್ರ ಇದರ ಫಲವಾಗುತ್ತದೆ. "ಅತ್ಯುನ್ನತಿಯೊಳ್ ಅಮರ ಸಿಂಘೂದ್ಭವಂ" ಎಂಬ ಗಾಂಭೀರ್ಯದ ಪರಮ ಸೀಮೆಯಾದ ಭೀಷ್ಮನೂ ಇಲ್ಲಿ ಅತಿ ವಾಚಾಳಿಯೇ ಆಗಿಬಿಟ್ಟಿದ್ದಾನೆ. ಸಿಡಿಲಮರಿಯಂತಹ, ಅತೀವ ಚಟುವಟಿಕೆಯ ಸಹದೇವನೊಬ್ಬನು ಮನಸ್ಸನ್ನು ತುಂಬುತ್ತಾನೆ. ತೈಲಧಾರೆಯಂತೆ ಹರಿಯ ಬೇಕಾದ ರಸಸ್ರೋತ ಕಡಿದು ಕಡಿದಾಗಿ ಹೋಗುತ್ತದೆ.

ಹಾಗೆಂದರೆ, ವಿಸ್ತಾರ ಕಥನವೇ ಮಹಾಕಾವ್ಯದ ದೋಷ ಎಂಬ ಅವಸರದ ತೀರ್ಮಾನ ಸಲ್ಲದು. ನಿಜವಾಗಿ ಮಹಾಕಾವ್ಯ ಪದ್ಧತಿಯೇ ವಿಸ್ತಾರ ವೈಭವದಿಂದ ಕೂಡಿದುದು. ಆದರೆ ಅದು ಪ್ರತಿಪಾದಿತ ರಸದ ಉತ್ಕರ್ಷಕ್ಕೆ ಕಾರಣವಾದರೆ ಮಾತ್ರ ಅಪೇಕ್ಷಣೀಯ. ಕೃಷ್ಣಮಹಿಮಾ ವಿಸ್ತಾರವೇ ಕಾವ್ಯದಲ್ಲಿ ಕುಂದಲ್ಲ. ಆದರೆ ಯಾವ ಸನ್ನಿವೇಶದಲ್ಲಿ ಹೇಗೆ ನಿರೂಪಿತವಾಗಿದೆ ಎಂಬುದೇ ಪರಿಶೀಲನೆಯ ವಿಷಯ. ಇಲ್ಲಿಯೂ ರಸಾನುಭೂತಿಯೇ ಪರಮ ಲಕ್ಷ್ಯ. ಈ ಅಂಶವನ್ನು ಸ್ಪಷ್ಟ ಪಡಿಸಲು, ಕೃಷ್ಣನ ಚಾರಿತ್ರ್ಯಕಥನವನ್ನೇ ವಸ್ತುವಾಗುಳ್ಳ ಮತ್ತೊಂದು ಪ್ರಸಂಗ ವನ್ನು ನೆನೆಯೋಣ.

ಸಭಾಪರ್ವದ ಕಥೆ. ದ್ರೌಪದೀ ವಸ್ತ್ರಾಪಹರಣದ ಪ್ರಸಂಗ. ಇಲ್ಲಿಯೂ ಪಾಂಚಾಲಿಯ ಮುಖದಿಂದ ಹರಿಯ ಮಹಿಮಾ ವಿಲಾಸದ ದೀರ್ಘವಾದ ವರ್ಣನೆ ಇಲ್ಲವೆ? ಆದರೆ ಅದು ಎಂತಹ ರಸೋತ್ಕಟ ಚಿತ್ರವಾಗಿದೆ! ಇಲ್ಲಿ ದ್ರೌಪದಿ ಭೀಷ್ಮನಂತೆ ಪುರಾಣಕಾರಳಲ್ಲ. ಅವಳ ವರ್ಣನೆ ಹೊಗಳಿಕೆಯಲ್ಲ. ಅದು ಕರು ಳಿನ ಕೂಗು. ನಡೆಯುತ್ತಿರುವ ಘಟನೆಯಲ್ಲಿ, ಅಲ್ಲಿ, ಪೂರ್ವಕಲ್ಪಿತ ಸಿದ್ಧಾಂತದ ಭೀಷ್ಮ ತಟಸ್ಥ ವ್ಯಾಖ್ಯಾನಕಾರ. ಇಲ್ಲಿ ಘಟನೆಯ ಎಲ್ಲ ಸುಳಿಗಳಲ್ಲೂ ಮುಳುಗಿ ಏಳುತ್ತ, ತನ್ನನ್ನು ತಾನು ಬೆಸೆದುಕೊಳ್ಳುತ್ತ ಕಳವಳಭರಿತಳಾದ ಕೃಷ್ಣೆಯ ಭಾವದ ಉಕ್ಕು. ಸನ್ನಿವೇಶದಲ್ಲಿ ಒಂದಾಗಿಹೋದ, ತನ್ಮಯವಾದ ಪಾತ್ರವಿದು. ತಟಸ್ಥ ಪ್ರೇಕ್ಷಕ ಪಾತ್ರವಲ್ಲ, ಆದುದರಿಂದಲೇ ಇಲ್ಲಿಯ ವರ್ಣನೆ ರಸ ಸಮಾಧಿಗೆ ಏರುತ್ತದೆ. ವಾಚಕನನ್ನು ಮೈಮರೆಸಿಬಿಡುತ್ತದೆ. ದ್ರೌಪದಿಯ ಶೋಕ ತಾನೇ ತಾನಾಗಿ, ಸಾಧಾರಣೀಕೃತವಾಗಿ ಸರ್ವಜನ ಆಸ್ವಾದ್ಯವಾದ ಕರುಣಾರಸವಾಗಿ ಪರಿಣಮಿ ಸುತ್ತದೆ. ಮಹಾಕವಿಯ ನಿಜವಾದ ದರ್ಶನ ನಮಗಿಲ್ಲಿ ಆಗುತ್ತದೆ.

ದಿವ್ಯ ರಾಜಸಭೆಯ ಶ್ರೀಮದ್ಗಾಂಭೀರ್ಯಕ್ಕೆ ಲೋಪ ಬಂದೀತು ಎಂಬ ಆತಂಕ ದಿಂದ ವಸ್ತ್ರಾಪಹರಣದ ಪ್ರಸಂಗವನ್ನು ಪಂಪನು ಕೈಬಿಟ್ಟಿದ್ದಾನೆ. ಆದರೆ ಅಂತಹ ತೊಡಕು ತೊಂಗುಗಳಿಂದ ದೂರನಾದ ಒಂಟಿ ಸಲಗ ಕುಮಾರವ್ಯಾಸನಿಗೆ ಯಾರ ಅಂಜಿಕೆ? ತನ್ನ ಸ್ವಭಾವೋಚಿತವಾದ ವಿಸ್ತಾರ ವೈಭವವನ್ನು ಈ ಪ್ರಸಂಗದಲ್ಲೂ ಬೆಳಗಿದ್ದಾನೆ, ಜಯಶಾಲಿಯಾಗಿದ್ದಾನೆ.

ಶೋಕವೇ ಸ್ಥಾಯಿಯಾದ ಈ ಪ್ರಸಂಗಕ್ಕೆ ಉಚಿತವಾದ ಹಿನ್ನೆಲೆಯನ್ನೇ ಕವಿ ಒದಗಿಸಿದ್ದಾನೆ. ದುರ್ಯೋಧನನಿಂದ ಆಜ್ಞಪ್ತನಾದ "ಜಗದೊಳಗಿದ ದುರುದುಂಬಿ ದುಶ್ಯಾಸನ" ಮಾನಿನಿಯನ್ನು ಮುಡಿಹಿಡಿದು ಸೆಳೆತಂದನಷ್ಟೆ! ಅವಳ ಧರ್ಮೋಚಿತ ಪ್ರಶ್ನೆಗೂ ಅವನ ಒರಟು ಉತ್ತರ—"ಎಲ್ಲಿಯದು ದುಷ್ಪ್ರಶ್ನೆ....ನೀ ಪುಷ್ಪವತಿಯಾಗಿಲ್ಲಿ, ಫಲವತಿಯಾಗು ನಡೆ ಕುರುರಾಜ ಭವನದಲಿ" ಎಂಬುದು. ಅವಳ ಶ್ರೀಮುಡಿಗೆ ಕೈಯಿಕ್ಕಿ ಸಭಾಭವನಕ್ಕೆ ಎಳೆತಂದುದೇ ಮುಂದಿನ ತಕ್ಷಣದ ಕ್ರಿಯೆ. ಬೆದರು ಕಣ್ಣು, ಬಿಟ್ಟ ಮಂಡೆ, ಹುದಿದ ಹಾಹಾರವ, ತೊಡಕಿದ ಪದಯುಗ, ಬೀದಿಯ ಧೂಳಿ ದೂಸರದ ವದನ ಕಮಲ, ಖಳನ ವಾಮಾಂಗದಲಿ ಬಾಗಿದ (ಕವಿ ಕಣ್ಣು ಎಷ್ಟು ಎಚ್ಚರ-ಸೂಕ್ಷ್ಮ, ಗಮನಿಸಿ) ತನುಲತೆ, ಇಂತಹ ಸುದತಿ ರಾಜಸಭೆಗೆ ಬಂದಳು. "ಮಿಹಿರಬಿಂಬವ ಕಾಣದ ಮಹಿಳೆಗೆ ಈ ವಿಧಿಯೇ....ವಿಧಾತನ ಕುಹಕ ವೈಸಲೆ" ಎಂದು ಸಭಾಸದರು ಮರುಗಿದರು. ನಯನೋದ್ಗಳಿತ ಜಲಧಾರೆಯಲಿ ಸಭೆ ಮುಳುಗಿತು. ಮಾತು ಮೀರಿದ ಶೋಕ. ಕ್ರೋಧದಲ್ಲಿ ಕುದಿವ ಭೀಮನನ್ನು ನಿಯಂತ್ರಿಸಲು ಧರ್ಮಜ ಸಿದ್ಧನಿದ್ದಾನೆ. ಆ ಕಲಿಯ ಅಸಹಾಯಕತೆಯೂ ಶೋಕ ಪೋಷಕವೇ ಆಗಿದೆ.

"ಎಲಗೆ ತೊತ್ತಿರ ಹಿಂಡ ಹೊಗು, ನಡೆ ವಿಲಾಸಿನಿಯರ ವಿಳಾಸದಲಿ, ನಿನ್ನಪದೆಸೆಯ ಹೊಲೆ ಹೋಯ್ತು, ಅತಿ ಭೂಷಣ ಭಾರದಲ್ಲಿ ಮೆರೆಹೋಗು ರಾಣೀವಾಸ ಪದವಿಯಲಿ" ಇತ್ಯಾದಿ ದುಷ್ಟ ಚತುಷ್ಟಯರ ವಕ್ರಶೃಂಗಾರದ ನುಡಿಗಳೂ ಕರುಣೆಯನ್ನೇ ಉಕ್ಕಿಸುತ್ತವೆ. ಮುಂದೆ ಈ ಹಾರ ಪದಕ ಕೇಯೂರಾದಿಗಳು ನಿನಗೆ ಬಹುಭಾರ, ತೆಗೆ" ಎಂಬ ದುಶ್ಯಾಸನನ ಮೂದಲಿಕೆ ತನ್ನ ಸೆರಗಿಗೇ ತುಡುಕಿದ ನಿರ್ಲಜ್ಜನ ವರ್ತನೆಯಿಂದ ಭೀತಳಾದ ಮಾನಿನಿ, "ಉನ್ನತ ಕುಚವ ನಳಿದೋಳ್ಗಳಲಿ ಮುಚ್ಚಿದಳು....ಬೆಚ್ಚಿದಳು....ಕಳಕಳಿಸಿದಳು....ಬೆರಳಿನಲಿ ಧೃಗುಜಲವ ಮಿಡಿಯುತ ನೃಪತಿಲಕನ, ಭೀಮಾರ್ಜುನರ, ಮಾದ್ರೀಕುಮಾರರ ನೋಡಿದಳು". ಶೋಕದ ಪ್ರತಿಮೂರ್ತಿಯಾಗಿದ್ದಾಳೆ ದ್ರೌಪದಿ. ಅವರೆಲ್ಲ ಕೇವಲ ಮೊಗ ತಿರುಹಿದರು. ಸಾರವನಲ್ಲಿ ಕಾಣದೆ ಗಾಂಗೇಯ ದ್ರೋಣಾದಿ ಹಿರಿಯರನ್ನು ನೋಡುತ್ತ "ಸೆರಗ ಬಿಡಿಸಿರೆ ತಂದೆ" ಎಂದು ಒರಲಿದಳು. ನಾನು ನಿನ್ನ ಸೊಸೆ, ನಿನ್ನ ನಾದಿನಿ, ಈ ಅಪಮಾನದಿಂದ ಉದ್ಧರಿಸಿ ಎಂದು ಗಾಂಧಾರಿ, ಭಾನುಮತಿಯನ್ನು ಬೇಡಿದಳು. ಅಂತಃಪುರದ ವಿಲಾಸಿನಿಯರನ್ನು, ಧಾರುಣೀಪತಿಗಳನ್ನು, ರಾಜಕುವರರನ್ನು ಬಗೆ ಬಗೆಯಾಗಿ ಯಾಚಿಸಿದಳು. "ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರಲಾ....ಅನಾಥೆಗೆ ಗತಿಯ ಕಾಣೆ" ಎಂದೊರಲಿದಳು. ಕರುಣೆಯೇ ಕೂಗಿ ಕರೆವಂತೆ ಕಾಮಿನಿ, ಸೃಷ್ಟಿಯ ಸಮಸ್ತವನ್ನೂ ಕುರಿತು ಬೇಡಿ ಬೇಡಿ ದಣಿದಾಗ ಅವಳ ಹೃದಯವು ಅನಿವಾರ್ಯವಾಗಿ, ನೀನೆ ಗತಿ ಕೃಷ್ಣಾ....ಕೃಪೆಮಾಡು ಎಂದು

ಚೀರಿಟ್ಟಿತು. ಅವಳ ಆಕ್ರಂದನವೇ ಸಹಜ ಸ್ತೋತ್ರವಾಗಿ ಪರಿಣಮಿಸಿತು. ಹೃದಯದ ಆಳಲಿಗೂ ಚಿಮ್ಮಿದ ಮಾತಿಗೂ ಅದ್ವೈತ ಸಂಬಂಧವೇರ್ಪಟ್ಟು, ಅದು ಕೃಷ್ಣ ಪ್ರಶಂಸೆ ಮಾತ್ರವಾಗದೇ ಕರುಳಿನ ವಚನವಾಯಿತು. ಆದುದರಿಂದಲೇ ಅಲ್ಲಿ ಅಂತಹ ಭಾವ ತೀವ್ರತೆ, ರಸೋವಿಲಾಸ!

ಗತಿವಿಹೀನರಿಗೆ ಅಕಟಾ ನೀನೇಗತಿ, ಆರ್ತರಿಗೆ ಪರಮ ಬಂಧು, ಲೋಕವನ್ನೇ ಕಾಯ್ದ ನೀನು ನನ್ನನ್ನು ಉಪೇಕ್ಷಿಸದಿರು, ಹೆಂಗುಸಿನ ಹರಿಬಕೆ ಕೃಪೆಮಾಡು, ಒದೆದವರಿಗೂ ಒಲಿದ ನಿನ್ನಂತಹ ಕರುಣಾಸ್ಪದರುಂಟೆ? ಹೊಲಬುದಪ್ಪಿದ ಹುಲ್ಲೆ ಬೇಡನ ಬಲೆಗೆ ಬಿದ್ದಂತಾದೆ, ಬಲು ಹಳುವದಲಿ ತಾಯ್ಬಿಟ್ಟ ಶಿಶುವಾದೆ, ಅಕಟ ಕೊಲುವವೈ ಕಾಗೆಗಳು ಕೋಗಿಲೆಯ ಮರಿಯನು, ಕರುಣಿ ನೀನು, ಕಾರುಣ್ಯ ಪಾತ್ರದ ತರಳೆ ನಾನು, ನಿಷ್ಠುರವಿದೇಕೆ ಕೃಷ್ಣಾ, ಬಸಿದು ಬೀಳುವ ಕೃಪೆಯ ನೀ ತೋರಿಸು, ಹೀಗೆ ಹಲತೆರದಿ ಅಚ್ಯುತನ ಹಲುಬುವ ದ್ರೌಪದಿಯ ವಾಚಾಳತನ ಉಕ್ಕುವ ಭಾವಜಲಧಿಯಾಗಿದೆಯೇ ವಿನಹ ಬೇಸರದ ಭಟ್ಟಂಗಿತನವಾಗಿಲ್ಲ. ಈ ಆರ್ತಧ್ವನಿಯನ್ನು ಕೇಳಿ ಮುರಾರಿಯೂ ಕರಗಿಹೋಗಿದ್ದಾನೆ. ತನ್ನ ಮಹಿಮೆಯನ್ನು ಬೀರುವ ಪವಾಡ ವೈಭವದ ಹೆಮ್ಮೆಗಿಂತ "ಕೋಳುವೋದುವೆ ಪಾಂಡುತನುಜರ ಬಾಳುವೆಗಳಕಟ" ಎಂದು ಸಿಟ್ಟುಸಿರುಬಿಡುವ ಲಕ್ಷ್ಮೀಲೋಲನ ಮಾತೂ ಕರುಣೆಯ ತಂತಿಯನ್ನೇ ಮೀಂಟಿಬಿಡುತ್ತದೆ. ಈ ವಿಸ್ತಾರವಾದ ನಿರೂಪಣೆ ತನ್ನ ಭಾವವಿಸ್ತಾರದಿಂದ ಸಹೃದಯರ ರಸಾನುಭೂತಿಗೇ ನೆರವಾಗುವುದರಿಂದ ತೀರ ಅಪೇಕ್ಷಣೀಯವೇ ಆಗಿದೆ.

ಸಂಗ್ರಹ ಕಥನ, ಮನಸ್ಸನ್ನು ಗಪ್ಪನೆ ಹಿಡಿದುಬಿಡುವುದೇನೋ ವಾಸ್ತವವೇ. ಆದರೆ ಹಲವೊಮ್ಮೆ ಸನ್ನಿವೇಶದ ತೀವ್ರತೆಯನ್ನು ಮನಗಾಣಿಸದೆ ವಿಫಲವಾಗುತ್ತದೆ. ಕಮ್ಮಗೆ ಕಾದು ಹದವಾಗಬೇಕಾದ ಹಾಲು ಒಡೆದಂತೆ ಭಾಸವಾಗುತ್ತದೆ. ತುಂಬ ಯಶಸ್ವಿಯಾದ ಸಂಗ್ರಹ ಕುಶಲತೆ ಮನಸ್ಸನ್ನು ಮೂಕವಾಗಿಸಬಹುದು. ಆದರೆ ಅರಳಿಸುವುದು, ಕರಗಿಸುವುದು ಅಪರೂಪ. ಅದಕ್ಕೆ ವಿಸ್ತಾರ ವೈಭವವೇ ಅಗತ್ಯ— ಆದರೆ ಔಚಿತ್ಯ ಮೀರದಂತೆ, ರಸಾಭಾಸವಾಗದಂತೆ, ಅಲ್ಲದೆ ವಸ್ತುವಿನ ಸಮಗ್ರ ನೋಟವನ್ನೂ, ಸನ್ನಿವೇಶದ ಹಲವು ಮುಖಗಳನ್ನೂ ಪರಿಚಯಿಸಲು ಸಮರ್ಥ ಕವಿಯ ವಿಸ್ತಾರ ಕಥನವೇ ಅಗತ್ಯವಾಗುತ್ತದೆ. ಸಂಗ್ರಹ ಕಥನದ ಚಾಪಲ್ಯ ಅನೇಕವೇಳೆ ಅತ್ಯಂತ ರಸೋತ್ಕಟ ಸನ್ನಿವೇಶಗಳನ್ನೇ ಕಾವ್ಯದಿಂದ ಜಾರಿಸಿಬಿಡುವುದೂ ಉಂಟು. ಪಂಪ ಕಾವ್ಯದಿಂದಲೇ ಒಂದು ಉದಾಹರಣೆಯನ್ನು ನೋಡಬಹುದು: ವನಪರ್ವದಲ್ಲಿ ಒಂದು ಪ್ರಸಂಗ. ಭವಿಷ್ಯದ ಹಗೆಗಳನ್ನು ಗೆಲ್ಲಲು ದಿವ್ಯಾಸ್ತ್ರಗಳನ್ನು

ಪಡೆಯಲು ಅರ್ಜುನನಿಗೆ ವ್ಯಾಸರಿಂದ ಸೂಚನೆ, ಪರಾಕ್ರಮಧವಳನಾದ ಗುಣಾರ್ಣವನು ಇಂದ್ರಕೀಲ ಪರ್ವತದಲ್ಲಿ "ಹರ ಬರ್ಪನ್ನೆಗಂ ತಪಂ ನಿಲ್ವೆನ್" ಎಂದು ಉಗ್ರೋಗ್ರ ತಪಸ್ಸು ಮಾಡಿದುದಲ್ಲದೆ, ಶಿವನನ್ನೇ ಭೂಮಿಗೆ ಇಳಿಸಿ, ಶಂಬರವೇಷದ ಅವನೊಡನೆ ಕಾದಿ, ಹರನನ್ನೇ ನೆಲಕ್ಕಿಕ್ಕಿ ಗಂಟಲಂ ಮೆಟ್ಟಿಬಿಟ್ಟನಷ್ಟೇ! ಒಲಿದ ಶಿವನಿಂದ ಪಾಶುಪತಾಸ್ತ್ರವನ್ನು ಪಡೆದು ಮಹಿಮಾರ್ಣವನಾದನಷ್ಟೆ! ಈ ಉಗ್ರೋಗ್ರ ತಪಸ್ಸಿನಲ್ಲಿ ಮೆಯ್ಯಂ ದಣಿಸಿದೆ ಎಂದು ವಾತ್ಸಲ್ಯದಿಂದ ದೇವೇಂದ್ರನು, ಪುತ್ರನನ್ನು ಅಮರಾವತಿಗೆ ಕರೆದೊಯ್ದನು—ಹಲವು ದಿನದ ವಿಶ್ರಾಂತಿಗೆ ಅಲ್ಲಿ ಸ್ವರ್ಗದ ನಾರಿಯರೆಲ್ಲ ಇವನ ಶೌರ್ಯ ಸಾಹಸಗಳಿಗೆ ಬೆರಗಾದರು. ಅಲ್ಲದೆ ಈತ ಪಿರಿದುಂ ಚೆಲ್ವನುಂ ಅಪ್ಪನೆಂದು ಮನದೊಳ್ ಸೋಲ್ತು ಅಳ್ಕರಿಂ ನೋಡಿದರು. ಒಟ್ಟಿನಲ್ಲಿ ದೇವಲೋಕದಲ್ಲಿ ಗುಣಾರ್ಣವನ ಮಾತೇ ಮಾತು! ಆಗ "ಪರಾಕ್ರಮಧವಳನ ಪರಾಕ್ರಮಕ್ಕಂ ಗಂಡಗಾಡಿಗಂ ರಂಭೆ ಸೋಲ್ತು ಸೈರಿಸಲಾರದೆ ಏಕಾಂತದೊಳ್ ಮೇಲೆ ಬಿಳ್ದೊಡೆ"!—ಎಲ, ಎಲ, ಇದೇನು ಕವಿಯ ನಾಗಾಲೋಟ? ಏನು ಅಂತಹ ಅವಸರ? ಇಷ್ಟೇಕೆ ಧಾವಂತದ ನಿರೂಪಣೆ ಈ ರಸಮಯ ಪ್ರಸಂಗದಲ್ಲಿ? ಮುಂದಿನ ಕತೆಯಾದರೂ ಎಂತಹ ಚಿಟಿಕೆ ಚಪ್ಪರ!

> "ಎಂದು ಪುರಂದರನರಸಿಯ
> ಯಂದು ದಳಿನಗರ್ಬ್ಬಿಯೇ ತೊದಲ್ ನುಡಿಯದೆ ಪೋ॥
> ಗೆಂದೊಡದೊಂದಬ್ದದೊಳೆ ಬೃ
> ಹಂದಳೆಯಪಾಗೆಂದು ಮುನಿದು ಶಾಪಮನಿತ್ತಳ್ ||

ಈ ರುದ್ರಶೃಂಗಾರದ ರಸಮಯ ಚಿತ್ರವನ್ನು ಹೀಗೆ ತೇಲಿಸಬಹುದೇ ಮಹಾಕವಿ? ತನ್ನ ಕಥಾನಾಯಕನ ಶೌಚನಿಷ್ಠೆಯೇ ಇಲ್ಲಿ ಮೈಗೊಂಡಿರುವಾಗ ಪ್ರಸಂಗವನ್ನು ಕವಿ ಏಕೆ ವಿಸ್ತರಿಸಬಾರದು? ಕತೆಯ ಮೆಯ್ಗೆಡದಿದ್ದರೂ ಮನಸ್ಸು ಕುಂಟಲಿಲ್ಲವೆ? ಅಥವಾ ಗುಣಾರ್ಣವ ಭೂಭುಜನಂ ಕಿರೀಟಿಯೊಳ್ ತಗುಳ್ಚಿ ಪೋಲಿಪ ಕತೆಯಾದುದರಿಂದ, ಅವನಿಗೆ (=ಅರ್ಜುನನಿಗೆ) ಒಂದು ವರ್ಷದ ನಪುಂಸಕತ್ವವನ್ನು ತಂದಿಟ್ಟ ಈ ಕತೆಯಿಂದ, ಆಶ್ರಯದಾತನಿಗೆ ಕಿರಿಕಿರಿಯಾದೀತು ಎಂಬ ಅತಿ ಸೂಕ್ಷ್ಮಮತಿಯಿಂದ ಈ ಸಂಗ್ರಹದ ಓಟವೇ? ಇರಬೇಕು—ತಿಳಿಯದು!

ಮಹಾಕವಿ ಕುಮಾರವ್ಯಾಸ ಈ ಸನ್ನಿವೇಶವನ್ನು ಎಷ್ಟು ಉಲ್ಲಾಸಕಾರಿಯಾಗಿ, ರೋಮಾಂಚಿತವಾಗಿ ಸಿಂಗರಿಸಿದ್ದಾನೆ!—ಭಾರತ ಕತೆಯ ರಮ್ಯೋಜ್ಜ್ವಲ ಪ್ರಸಂಗವಿದು ಎಂಬಂತೆ. ಆ ಕತೆಯ ನಾಣ್ಯಕ್ಕೆ ಹಲವು ಮುಖಗಳು—ಮಾನಿನಿ ಊರ್ವಶಿಯ ವಿಷಾದದ ಉಲಿಯನ್ನು ಸೂಸುವ ಪ್ರಣಯ ಭಂಗ, ಅರ್ಜುನನ ಚಿತ್ತ

ಸ್ಥೈರ್ಯ, ಅವನ ಸಂಯಮಕ್ಕೆ ಒದಗಿದ ವಿಚಿತ್ರ—ವಿಪರ್ಯಾಸದ ಫಲ—ಇತ್ಯಾದಿ. ಈ ಸಮಗ್ರ ಚಿತ್ರದಲ್ಲಿ ರಸಾವೇಶದ ಹುಚ್ಚು ಹೊಳೆಯೇ ಹರಿಯುತ್ತಿದೆ.

ಪುರಂದರನಿಂದಲೇ ಆಜ್ಞಪ್ತಳಾದ ಊರ್ವಶಿ ಅರ್ಜುನನೆಡೆಗೆ ತೆರಳಿದ್ದಾಳೆ. ಅವಳ ರೂಪು ಅಪೂರ್ವ ಚೆಲುವಾದುದು. ಬೆಳಕಿನ ಬಳಗದಂತಿದ್ದ ಭಾಮಿನಿಯರು ಸುತ್ತಲೂ ಓಲೈಸುತ್ತಿರಲು ಆಕೆ ಕಾಮನ ಹಗೆಗೆ ಹುಟ್ಟಿದ ಧೂಮಕೇತುವಿನಂತೆ ರಂಜಿಸಿದಳು. "ವಿಟರ ಪುಣ್ಯದ ಪರಿಣತೆ, ಕಾಮುಕರ ಭಾಗ್ಯದ ಕಲ್ಪತರು ಫಲ, ಸ್ಮರನ ವಿಜಯಧ್ವಜ, ಮನ್ಮಥ ಪರಮಶಾಸ್ತ್ರದ ಮೂಲಮಂತ್ರ"—ಕವಿಯ ವಾಚಾಳತನ ಇಲ್ಲಿ ಕಣ್ಣು ಕುಕ್ಕುತ್ತದೆ!—ಈ ರೂಪ ವೈಭವವಲ್ಲದೆ, ಲೋಕದಲ್ಲಿ ರಾಜಸೂಯಾದಿ ಯಾಗಗಳನ್ನು ಮಾಡಿದ ಮಹಿಪರೂ ತನ್ನ ಚರಣದುಂಗುಟ ತುದಿಯ ಕಾಂಬರು ಎಂಬ ಹೆಮ್ಮೆ ಬೇರೆ. ಹೀಗೆ ಕಾಮುಕ ಜನದ ಜೀವಾರ್ಥಕ್ಕೆ ವಿಭುವಿನಂತಿದ್ದ ಆ ಗರುವೆ "ಬಳ್ಳಿ ಮಿಂಚಿನ ಮಂದೆಯಲಿ ಮುರಿದಿಳಿವ ಮರಿಮುಗಿಲಂದದಲಿ" ದಂಡಿಯಿಂದ ಇಳಿದಳಂತೆ ಪಾರ್ಥನ ಭವನದಲ್ಲಿ. ಹೆಮ್ಮೆಯ ಪ್ರತಿರೂಪವಾದ ಊರ್ವಶಿ ಮಣಿಮಂಚದಲ್ಲಿ, ಸಕ್ಕರೆಯ ನಿದ್ದೆಯಲ್ಲಿ ಪವಡಿಸಿದ್ದ ನೃಪಕುಲ ತಿಲಕನನ್ನು ಕಂಡಳು. ಅವನ ಅಂಗೋಪಾಂಗದಲಿ ಕಣ್ಮನವ ಹರಹುತ್ತಾ ಕೆಳದಿಯರ ಕಂಠದಲಿ ಕೈಗಳನಿಳುಹಿ ನಿಂತಳು. ಪಾರ್ಥನ ಮೈಸಿರಿಯ ಹಿತವಾದ ಶಾಖದಲ್ಲಿ ಕರಗಿಯೇ ಹೋದಳು. ಗರ್ವದ ಬೆಂಕಿಯಾದ ಹೆಣ್ಣು ಪ್ರಣಯದ ಬೆಳದಿಂಗಳಾದಳು. ಈಗ ಆಕೆ ಹೊಳೆ ಹೊಳೆವ ಮದನಾಲಸೆ! ಮುಂದೆ "ಹಾ ಮಹಾದೇವಿಯರಲಾ!" ಎಂಬ ಅರ್ಜುನನ ಬೆಕ್ಕಸ, ಏನಪ್ಪಣೆ ತಾಯಿ ಎಂಬ ವಿಚಿತ್ರ ಪ್ರಶ್ನೆ, ನಿಮಗೆ ಆನು ಮಗನು ಉಪಚಾರವೇಕೇ ಅರುಹಿ ಎಂಬ ಅನಿರೀಕ್ಷಿತ ಸ್ವಾಗತ! ಎಂತಹ ವಿಚಿತ್ರ ಸನ್ನಿವೇಶದಲ್ಲಿ ಮಾನಿನಿ ಸಿಲುಕಿದ್ದಾಳೆ! ಅವಳ ಮನಸ್ಸಿನ ವಿವಿಧ ಭಾವ ಭಂಗಿಗಳನ್ನು ಮಹಾಕವಿಯ ಪ್ರತಿಭೆಯ ಕನ್ನಡಿಯೇ ಸೆರೆ ಹಿಡಿಯಬೇಕು— "ನುಡಿಗೆ ಬೆರಗಾದಳು, ಮನೋಜನ ಸಡಗರಕೆ ತೆಕ್ಕಿದಳು, ಪಾರ್ಥನ ನಡವಳಿಗೆ ಮೆಚ್ಚಿದಳು, ಬೆಚ್ಚಿದಳಂಗಜಾಸ್ತ್ರದಲಿ, ಕಡುಗಿದಳು ಖಾತಿಯಲಿ, ಲಜ್ಜೆಯ ಬಿಡೆಯದಲಿ ಭಯಗೊಂಡಳು, ಜಂಗನೆ ಮಿಡುಕಿದಳು, ಎತ್ತಣ ಕಾಕುಮೂಳಗೆ ಕಾಮನೆಂಬವಗೆ ಕೋಳುಹೋದೆನೋ ಎಂದು ಸುಯ್ದಳು, ಕಮಲಜನ ಬಯ್ದಳು! ವಿವಿಧಾನುಭಾವದ ರಸದ ಭಂಗಿಯಲಿ ಮಿಡುಕಿದಳು". ಮುಂದೆ ಅವಳ ಪರಿಹಾಸದ ಪ್ರಶ್ನೆ—ಅರ್ಜುನನ ಧೀಮಂತ ಉತ್ತರ. ನಿಮ್ಮ ಭೂಲೋಕದ ವಾವೆ ಸಂಬಂಧಗಳು ಇಲ್ಲಿ ನಡೆಯವು ಅಯ್ಯನಯ್ಯ ಮುತ್ತಯ್ಯರೆಲ್ಲರಿಗೂ ಇಲ್ಲಿ ನಾನೊಬ್ಬಳೇ ಎಂಬ ನಿರ್ಲಜ್ಜ ಸೂಚನೆ, "ಇದು ಮನುಷ್ಯ ಶರೀರ, ಅವಸಾನ ಪರ್ಯಂತ ಲೋಕಧರ್ಮವನ್ನು ಮೀರುವವನಲ್ಲ" ಎಂಬ ಕಿರೀಟಿಯ ಧೃತಿ, ಪ್ರಣಯಿನಿಯ ಘೋರ ನಿರಾಶೆ. ಆಗ

ಉಕ್ಕಿತು ಆಕೆಯ ಕೋಪ—ಹಿಡಿಯಿತು ರೌದ್ರದ ಕಿಡಿ. "ತುಳುಕಿತದ್ಭುತ ರೋಷ ಸುಯ್ಲಿನ ರಭಸ ಹೊಡೆದು ಮೂಗುತಿಯ ಮುತ್ತಿನ ಬೆಳಗು ಕಂದಿತು! ಮುಖಾಂಬುಜದ ಅಮಲಚ್ಛವಿ ಕುಂದಿತು"—ಅಂಗನೆಯು ವದನದಿಂದ ರೋಷಾವೇಶದ ನಿಂದನೆಯ ಸುರಿಮಳೆ—ಭಂಡರ ಭಾವ, ಖೂಳರ ನಿಳಯ, ವಂಚಕ ತಿಲಕ, ಗಾವಿಲರೊಡೆಯ, ನರ ಮೃಗಾಧಮ ನಪುಂಸಕ ನಿನಗೇಕೆ ಸತಿ, ಹಿಡಿ ಹಿಡಿ ಶಾಪವ" ಇತ್ಯಾದಿ. ಕವಿಯ ಶಬ್ದ ಭಂಡಾರ ಅಕ್ಷಯ! ನಿಮ್ಮಯ್ಯಂಗೆ ಹೇಳು ಹೋಗು ನನ್ನಯ ಶಾಪವಿದು ನಿರುತ ತಪ್ಪದು ವರುಷ ಪರ್ಯಂತ ನಪುಂಸಕನಾಗಿ ಸಂಚರಿಸು ಎಂಬ ಅವಳ ಶಾಪೋಕ್ತಿಗೆ ಕಿರೀಟಿ ಮೂಗನಾದನು, ವಿಧಿವಿಲಾಸಕ್ಕೆ ಬೆರಗಾದನು. ಬಿಸುಸುಯ್ವನು. ಮುಂದೆ, ಈ ವಿಚಿತ್ರ ಸಂಗತಿ ತಿಳಿದು ಪುರಂದರನೇ ಬಂದು ವೈಡಡವಿ ಸಂತೈಸಬೇಕಾಯಿತು.

ಈ ರೋಮಾಂಚಕ ಪ್ರಸಂಗದ ನಿರೂಪಣೆಯಲ್ಲಿ ಕವಿಯ ವಿಸ್ತಾರ ವೈಭವ ಹೇಗೆ ವಿವಿಧ ರಸಾನುಭವಕ್ಕೆ ನೆರವಾಗಿದೆ ಎಂದು ಗಮನಿಸಬಹುದು. ವಾಚಕರಲ್ಲಿ ಗೌರವವನ್ನು ಉಕ್ಕಿಸುವ ಅರ್ಜುನನ ಅಪೂರ್ವ ಸಂಯಮ ಒಂದೆಡೆಗೆ—ರೂಪ ಮತ್ತಳಾದ ಗರುವೆ ಊರ್ವಶಿಯ ಮದಾಲಸತೆ, ಬೆಡಗು, ಬೆರಗು, ಹಾಸ್ಯಪ್ರಿಯತೆ, ಘೋರ ನಿರಾಶೆ, ಉಗ್ರ ರೋಷ, ಹೀಗೆ ತೆಕ್ಕೆ ತೆಕ್ಕೆಯಾಗಿ ಉಕ್ಕುವ ಭಾವಭಣಿತೆಗಳನ್ನು ಅನುಭವಿಸಬಹುದು. ಇಂತಹ ನಿರೂಪಣೆಗೆ ಸಂಗ್ರಹ ಕುಶಲತೆ ಸೊಗಸದು.

ಈ ದೀರ್ಘವಾದ ಪರಿಶೀಲನೆಯ ನಂತರ, ಬಂದೊದಗುವ ಸಿದ್ಧಾಂತವೆಂದರೆ:

ಸಂಗ್ರಹ ಕುಶಲತೆ ಹಾಗೂ ವಿಸ್ತಾರ ವೈಭವ ಎರಡೂ ಮಹಾಕವಿಯ ಬತ್ತಳಿಕೆಯ ಎರಡು ಅಮೋಘ ಅಸ್ತ್ರಗಳು. ಆದರೆ ಅವು ತಮ್ಮಷ್ಟಕ್ಕೆ ತಾವು ಶ್ರೇಷ್ಠ ಅಥವಾ ಕನಿಷ್ಠ ಗುಣಗಳಾಗಿಬಿಡುವುದಿಲ್ಲ. ಸಮರ್ಥ ನಿರೂಪಣೆಯಿಂದ ಉಲ್ಲಾಸಕರವಾಗುವ ವಿಸ್ತಾರ ವೈಭವ ಅನೌಚಿತ್ಯದ ಸನ್ನಿವೇಶದಲ್ಲಿ ಜಾಳು ಜಾಳಾಗಿ ಪೇಲವವಾಗಿ ಪರಿಣಮಿಸಬಹುದು. ಹಾಗೆಯೇ ಔಚಿತ್ಯಪೂರ್ಣವಾದ ಸನ್ನಿವೇಶದಲ್ಲಿ ಮನಸ್ಸನ್ನು ತಟಕ್ಕನೆ ಸೆರೆ ಹಿಡಿಯುವ ಸಂಗ್ರಹ ಕುಶಲತೆ ಹಲವು ವೇಳೆ ರಸದ ಕೊರಳಿನ ಕಗ್ಗಂಟಾಗಿ ಉಸಿರು ಸಿಕ್ಕಿಸಬಹುದು. ಒಟ್ಟಿನಲ್ಲಿ ಈ ಗುಣಗಳ ಯಶಸ್ಸನ್ನು ಅಳೆಯಲು ಔಚಿತ್ಯವೇ ಪ್ರಮಾಣ. ಔಚಿತ್ಯವೆಂದರೆ ಮೀಮಾಂಸಕರು ಈಗಾಗಲೇ ಒಪ್ಪಿರುವ ರಸಾನುಭೂತಿಯನ್ನು ಸಾಧಿಸುವ ಜಾಣ್ಮೆ. ಭಾರತೀಯ ಕಾವ್ಯ ಮೀಮಾಂಸೆಯ ಮಟ್ಟಿಗಂತೂ ಇದೇ ಕಡೆಯ ಮಾತು. ಕಾವ್ಯರಸದ

ನಿರರ್ಗಳ ಧಾರೆ ಅಥವಾ ಹೃದಯವನ್ನು ಹಿಂಡುವ ರಸಸ್ರೋತದ ತಟಕ್ಕನೆಯ ಕಡಿತ, ಇವುಗಳಿಗೆ ಸಹೃದಯನ ಅಂತಃಕರಣವೇ ಪರಮ ಪ್ರಮಾಣ. "ಅನೌಚಿತ್ಯಾದೃತೇ ನಾನ್ಯದ್ರಸಭಂಗಸ್ಯ ಕಾರಣಂ ! ಪ್ರಸಿದ್ಧೌಚಿತ್ಯಬಂಧಸ್ತು ರಸಸ್ಯೋಪನಿಷತ್ ಪರಾ ||" (ಆನಂದವರ್ಧನ)

ಸೂಚನೆ:

ಸಂಗ್ರಹ ಕುಶಲತೆ, ಕಿರಿದರೊಳ್ ಪಿರಿದರ್ಥಮುಂ ಪೇಳ್ವ ಜಾಣ್ಮೆ, ಕತೆಯ ಮೆಯ್ಗೆಡಲೀಯದೆ ಸಲೆ ಪೇಳ್ವ....ಇತ್ಯಾದಿ ಕವಿವಾಕ್ಯಗಳನ್ನು "ಸಂಗ್ರಹ ಕಥನ"—epitome ಎಂಬರ್ಥದಲ್ಲಿ ಬಳಸಲಾಗಿದೆ. ಆನಂದವರ್ಧನನು ವಿಶೇಷಾರ್ಥದಲ್ಲಿ, ಪಾರಿಭಾಷಿಕವಾಗಿ ಬಳಸಿದ 'ಧ್ವನಿ' ಎಂಬ ಅರ್ಥದಲ್ಲಲ್ಲ. ಮಾರ್ಗಕಾರ ಹಾಗೂ ಪಂಪ ಇವರ ಮೇಲಿನ ಮಾತುಗಳಿಗೆ 'ಧ್ವನಿ' ಎಂಬರ್ಥವನ್ನು ಆರೋಪಿಸುವುದು ಅನವಶ್ಯಕವಾಗಿ ಎಳೆದು ತಂದ ಅರ್ಥವಾಗುತ್ತದೆ. ಹಾಗೆ ಮಾಡಿದರೆ ಅತಿವ್ಯಾಪ್ತಿಯ ದೋಷ ತಟ್ಟುತ್ತದೆ. ಸಂಕ್ಷೇಪ (ಸಂಗ್ರಹ) ಕಥನ ಎಂಬ ನೇರವಾದ ಸಹಜವಾದ ಅರ್ಥವೇ ಅಪೇಕ್ಷಣೀಯ.

—ಲೇಖಕ

ಗ್ರಂಥ ಸಂಪಾದನೆ

—ಡಾ|| ಎಂ. ಚಿದಾನಂದಮೂರ್ತಿ

ಗ್ರಂಥ ಸಂಪಾದನೆಯಲ್ಲಿ ನಡೆಯಬೇಕಾದ ಮೂಲಭೂತ ಕಾರ್ಯವೆಂದರೆ ಹಸ್ತಪ್ರತಿಗಳ ಸಂಗ್ರಹಣೆ. ಅವುಗಳನ್ನು ಸಂಗ್ರಹಿಸುವಾತ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಜನ ಅವುಗಳನ್ನು ಕೊಡುವುದಿಲ್ಲ. ಪಾರಂಪಾರಿಕವಾದ ನಂಬಿಕೆಗಳು ಅವುಗಳ ಸುತ್ತ ಹೆಣೆದಿರುತ್ತವೆ. ಅವನ್ನು ಪಡೆಯಲು ಯಾವ ಮಾರ್ಗಗಳನ್ನು ಅನುಸರಿಸಬೇಕು, ಏನೇನು ಆಟಗಳನ್ನು ಹೂಡಿ ಸಂದರ್ಭ ಬಂದರೆ ಸುಳ್ಳುಗಳನ್ನು ಹೇಳಬೇಕು ಎಂಬುದನ್ನು ಅನುಭವಿಸಿದವರು ಮಾತ್ರ ಬಲ್ಲರು. ಹುಳು ತಿಂದು, ಗೆಜ್ಜಲು ಹಿಡಿದು, ನೀರುಬಿದ್ದು ಮುದ್ದೆ ಮುದ್ದೆಯಾಗಿ ಅಂಟಿದ್ದರೂ ಜನ ಅವುಗಳನ್ನು ಬಿಟ್ಟುಕೊಡಲು ಸಿದ್ಧರಿರುವುದಿಲ್ಲ. ಆದರೆ, ನನ್ನ ಅನುಭವಕ್ಕೆ ಬಂದಿರುವಂತೆ, ಏನೂ ಅರಿಯದ ಅವಿದ್ಯಾವಂತರನ್ನು ಒಪ್ಪಿಸುವುದು ಸುಲಭ. ಆದರೆ ವಿದ್ಯಾವಂತ ಅಥವಾ 'ನಾಗರಿಕ'ರಿಂದ ಹಸ್ತಪ್ರತಿಗಳನ್ನು ಸಂಗ್ರಹಿಸುವುದು ತೀರ ಕಷ್ಟದ ಕೆಲಸ. ಅನೇಕರು ಅವುಗಳನ್ನು ರಾಶಿರಾಶಿಯಾಗಿ ಒಲೆಗೆ, ಹೊಳೆಗೆ, ಬೆಂಕಿಗೆ, ತಿಪ್ಪೆಗೆ ತೆಗೆದುಕೊಂಡುಹೋಗಿ ಸುರಿದಿರುವ ಸಂಗತಿ ಕೇಳಿದಾಗ ಕರುಳು ಕಿತ್ತುಬರುತ್ತದೆ. ಈಗ ಅಳಿದುಳಿದಿರುವ ಹಸ್ತಪ್ರತಿ ಸಂಪತ್ತಿನ ಸಂಗ್ರಹ ಕಾರ್ಯ ಅತ್ಯಗತ್ಯವಾಗಿ ನಡೆಯಬೇಕಾಗಿದೆ. ಅನೇಕರ ಸಹಕಾರದಿಂದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಮೂರು ಸಾವಿರಕ್ಕೆ ಮೇಲ್ಪಟ್ಟ ಕೃತಿಗಳನ್ನೊಳಗೊಂಡ ಒಂದು ಸಾವಿರಕ್ಕೆ ಮೇಲ್ಪಟ್ಟು ಹಸ್ತಪ್ರತಿಗಳನ್ನು ಸಂಗ್ರಹಿಸಿದೆಯೆಂದು ಹೇಳಲು ಇಲ್ಲಿ ಸಂತೋಷವಾಗುತ್ತದೆ.

'ಗ್ರಂಥ ಸಂಪಾದನೆ' ಎಂದರೆ ಏನು ಎಂಬುದನ್ನು ನೋಡೋಣ. 'ಗ್ರಂಥ' ಎಂಬುದು ಮೂಲತಃ ಒಂದು ಕಟ್ಟು (bundle) ಎಂಬರ್ಥವನ್ನು ಪಡೆದಿದ್ದು ಅದು ಮುಂದೆ ಓಲೆಗರಿಗಳ ಅಥವಾ ಬೇರೆ ಬಗೆಯ ಪುಸ್ತಕವೆಂಬರ್ಥವನ್ನು ಪಡೆಯಿತು. 'ಕಟ್ಟು' ಎಂದರೇ ಓಲೆಗರಿಗಳ ಪುಸ್ತಕ ಎಂಬರ್ಥವಿದ್ದು ಅದು ಸಂಸ್ಕೃತದ 'ಗ್ರಂಥ' ಎಂಬುದಕ್ಕೆ ಸಮಾನವಾದುದು. 'ಸಂಪಾದನೆ' ಎಂಬುದಕ್ಕೆ ಅರ್ಥ ತಿಳಿದೇ ಇದೆ. ಆದ್ದರಿಂದ 'ಗ್ರಂಥಗಳ ಸಂಪಾದನೆ' ಅಥವಾ ಗ್ರಂಥ

ಸಂಗ್ರಹವೇ ಸಂಪಾದನೆ ಎಂದು ಅನೇಕರು ಭಾವಿಸುತ್ತಾರೆ. ಆದರೆ ಗ್ರಂಥ ಸಂಪಾದನೆಯೆಂಬುದು ಒಂದು ಪಾರಿಭಾಷಿಕ ಪದ. ಅದು ಪುಸ್ತಕಗಳನ್ನು ಸಂಗ್ರಹಿಸುವುದನ್ನು ಹೇಳುವುದಿಲ್ಲ. ಇಲ್ಲಿ 'ಗ್ರಂಥ' ಎಂಬುದು ಕವಿ ಅಥವಾ ಗ್ರಂಥಕರ್ತೃ ರಚಿಸಿದ ಕೃತಿಯನ್ನು ಸೂಚಿಸುತ್ತದೆ. ನಮಗೆ ಬೇಕಾದ್ದು ಕವಿಯ 'ಗ್ರಂಥ', ಕವಿಯ ಮೂಲಕೃತಿ. ಆದರೆ ನಮಗೆ ತಿಳಿದಂತೆ ಕ್ರಿ.ಶ. ೧೫೫೪ರ ಕವಿ ಸದಾಶಿವನ ರಾಮನಾಥ ವಿಲಾಸ, ಕ್ರಿ.ಶ. ೧೬೨೭ರ ಪದ್ಮಣ ಪಂಡಿತನ ಹಯಶಾಸ್ತ್ರ, ೧೯ನೇ ಶತಮಾನದ ಬಸವಪ್ಪಶಾಸ್ತ್ರಿ ಮತ್ತು ಮುದ್ದಣ ಮುಂತಾದ ಅರ್ವಾಚೀನರ ಕೃತಿಗಳು-ಇವನ್ನು ಬಿಟ್ಟರೆ ಪ್ರಾಚೀನ ಕವಿಗಳ ಮೂಲ ಗ್ರಂಥಗಳು Autograph copies —ಯಾವುದೂ ದೊರಕಿಲ್ಲ. ಎಲ್ಲವೂ ಹಾಗೆ ದೊರಕಿದ್ದರೆ ಗ್ರಂಥ ಸಂಪಾದನೆ ಎಂಬ ಶಾಸ್ತ್ರವೇ ಇರುತ್ತಿರಲಿಲ್ಲ. ಕವಿಯ ಮೂಲ ಗ್ರಂಥವನ್ನೇ ಅಚ್ಚು ಮಾಡಿಸಬಹುದಿತ್ತು. ಆದರೆ ವಾಸ್ತವವಾಗಿ ನಮಗೆ ದೊರಕುವುದು ಮೂಲಗ್ರಂಥದ ಪ್ರತಿಯ ಹತ್ತನೆಯ ಪ್ರತಿಯಿರಬಹುದು, ಇಪ್ಪತ್ತನೆಯ ಪ್ರತಿಯಿರಬಹುದು. ಪ್ರತಿಕಾರರಿಂದ ಪ್ರತಿಕಾರರಿಗೆ ಬಂದಂತೆ ಮೂಲ ಗ್ರಂಥದ ಪಾಠ—ಅವರಿಗೇ ತಿಳಿಯದಂತೋ ಅಥವಾ ಅವರಿಗೆ ತಿಳಿದೋ—ಅನೇಕ ಮಾರ್ಪಾಟುಗಳನ್ನು ಹೊಂದುತ್ತದೆ. ಹಸ್ತಪ್ರತಿಗಳ ಪೀಳಿಗೆಯೊಂದು ಬೆಳೆಯುತ್ತದೆ. ಒಂದೇ ಕೃತಿಯ ಬೇರೆ ಬೇರೆ ಹಸ್ತಪ್ರತಿಗಳನ್ನು ಸಂಗ್ರಹಿಸಿ—ಇದೇ 'ಗ್ರಂಥ ಸಂಗ್ರಹ'—ಅವುಗಳನ್ನು ಪರಸ್ಪರವಾಗಿ ಹೋಲಿಸಿ, ಭಿನ್ನ ಪಾಠಗಳಿದ್ದರೆ ಗುರುತಿಸಿ, ಕವಿಯ ಮೂಲಪಾಠವನ್ನು ನಿರ್ಣಯಿಸುವ ಶಾಸ್ತ್ರವೇ ಗ್ರಂಥ ಸಂಪಾದನೆ. ಈ ಶಾಸ್ತ್ರದ ತತ್ವಗಳು ತಕ್ಕಮಟ್ಟಿನ ನಿಖರತೆಯನ್ನೂ ಪಡೆದಿವೆ. ಈಗ ಇರುವ ಭಾಷೆಗಳ ಸಹಾಯದಿಂದ ಅವುಗಳಿಗೆಲ್ಲ ಮೂಲವಾಗಿದ್ದಿರಬಹುದಾದ ಮೂಲ ಭಾಷೆಯನ್ನು (Proto-language) ಪುನರ್ರಚಿಸುವ ತೌಲನಿಕ ಭಾಷಾ ವಿಜ್ಞಾನ (Comparative Linguistics) ಇಲ್ಲಿ ಜ್ಞಾಪಕಕ್ಕೆ ಬರುತ್ತದೆ. ಕವಿಯ ಮೂಲಗ್ರಂಥದ ಪುನರ್ರಚನೆಯೇ ಗ್ರಂಥ ಸಂಪಾದನೆ.

ಗ್ರಂಥ ಸಂಪಾದನೆಗೆ ಕೈಹಾಕುವ ವ್ಯಕ್ತಿಗೆ ಭಾಷೆ, ವ್ಯಾಕರಣ, ಛಂದಸ್ಸು, ಲಿಪಿ ಮುಂತಾದ ಕ್ಷೇತ್ರಗಳಲ್ಲಿ ಎಷ್ಟು ಪರಿಶ್ರಮವಿದ್ದರೆ ಅಷ್ಟು ಒಳ್ಳೆಯದು. ಜೊತೆಗೆ ಶಿಲ್ಪಶಾಸ್ತ್ರ, ಗಜಶಾಸ್ತ್ರ, ಹಯಶಾಸ್ತ್ರ, ಧರ್ಮಗ್ರಂಥ ಶಾಸ್ತ್ರಗಳ, ಬೇರೆ ಬೇರೆ ಭಾಷೆಗಳ ಪರಿಚಯವಿದ್ದಷ್ಟು ಒಳ್ಳೆಯದು. ಇತಿಹಾಸ, ಸಮಾಜಶಾಸ್ತ್ರ, ಮನಶ್ಶಾಸ್ತ್ರಗಳ ಪರಿಚಯವೂ ಸಹಾಯಕ್ಕೆ ಬರುತ್ತದೆ. ಸ್ಥಳೀಯವಾದ ದಂತಕತೆಗಳು, ಪುರಾಣಗಳು, ನಂಬಿಕೆಗಳು ಗೊತ್ತಿರುವುದು ಅಗತ್ಯವಾಗುತ್ತದೆ. ಗ್ರಂಥ ಸಂಪಾದಕನೊಬ್ಬ ಸರ್ವಜ್ಞನಾಗಿರಬೇಕೆಂದು ನಾನು ಹೇಳುತ್ತಿಲ್ಲ. ಆದರೆ ವಿಸ್ತಾರವಾದ ಜ್ಞಾನದ ಸಹಾಯ ಎಷ್ಟೆಂಬುದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು.

ಪಂಪಭಾರತದ ಪ್ರಾರ್ಥನಾ ಪದ್ಯದ 'ಸುಪುಷ್ಪವೃಷ್ಟಿ' ಎಂಬ ಮಾತನ್ನೇ ತೆಗೆದು ಕೊಳ್ಳಬಹುದು. ಅದು 'ಸುಪುಷ್ಪ ಪಟ್ಟ'ವೆಂದಿರಬೇಕೆಂದು ಡಾ|| ಡಿ. ಎಲ್. ನರ ಸಿಂಹಾಚಾರ್ಯರು ವಾದಿಸುತ್ತಾರೆ, ಶಿಲ್ಪಶಾಸ್ತ್ರದ ಆಧಾರದ ಮೇಲೆ; ಅದು 'ಸುಪುಷ್ಪವೃಷ್ಟಿ'ಯೇ ಸರಿಯೆಂದು ಹೇಳಿ, 'ಪುಷ್ಪ' ಎಂದರೆ ಒಂದು ನಾಣ್ಯವೆಂದು ಶ್ರೀ ಸೀತಾರಾಮು ಜಾಗೀರದಾರರು ಹೇಳಿ, ಅದಕ್ಕೆ ಶಾಸನಾಧಾರ ಕೊಡುತ್ತಾರೆ. ಈ ಪಾಠ ಇನ್ನೂ ಅನಿರ್ಣೀತವಾಗಿಯೇ ಉಳಿದಿದೆ. ಸ್ಥಳೀಯ ಕತೆ, ಐತಿಹ್ಯ, ದೇವತೆಗಳ ಪರಿಚಯ ಎಷ್ಟು ಅಗತ್ಯವೆಂಬುದಕ್ಕೆ ನನ್ನ ಒಂದು ಅನುಭವವನ್ನೇ ಕೊಡುತ್ತೇನೆ. ನೇಮಿಚಂದ್ರನ ನೇಮಿನಾಥಪುರಾಣದಲ್ಲಿ ಬರುವ 'ಜೋಕಾರ' ಎಂಬುದಕ್ಕೆ 'ಜೋಕೋರ' ಎಂಬ ಪಾಠಾಂತರವಿದೆ. ಬೇರೆ ಅನೇಕ ಕೃತಿಗಳಲ್ಲಿ 'ಜೋಕೊವರ' ಎಂಬ ರೂಪ ಸಿಗುತ್ತವೆ. ಅವನು ಏಳು ದಿವಸ ರಾಜ್ಯ ವಾಳಿದ ರಸಿಕ, ಪೋಲಿ ಎಂಬ ಸಂಗತಿ ಬರುತ್ತದೆ. ದಕ್ಷಿಣ ಕರ್ನಾಟಕದವರಿಗೆ 'ಜೋಕುಮಾರ' ಎಂಬ ಹೆಸರಿನ ಜನಪದ ದೈವದ ಪರಿಚಯವೇ ಇಲ್ಲ. ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕದವರಿಗೆ ಈ ಹೆಸರಿನ ದೇವತೆ, ಕತೆ, ಹಾಡು ಗಳು ಪರಿಚಿತ ಅವನಿಗೆ ಸಂಬಂಧಿಸಿದ ಕತೆಗಳ ಸಹಾಯದಿಂದ ಆ ದೇವತೆಯ ಉಲ್ಲೇಖ ಬರುವ ಭಾಗಗಳನ್ನು ವಿವರಿಸಲು ಸಾಧ್ಯವಾಗುವುದಲ್ಲದೆ, 'ನೇಮಿನಾಥ ಪುರಾಣ'ದ 'ಜೋಕಾರ' ಎಂಬುದಕ್ಕಿಂತ 'ಜೋಕೋರ' ಎಂಬ ಪಾಠವೇ ಮೂಲವೆಂದು ನಿರ್ಧರಿಸಲು ಬರುತ್ತದೆ. ಭಾಷೆ, ಛಂದಸ್ಸುಗಳ ಸಮರ್ಪಕ ಪರಿ ಚಯವಿಲ್ಲದವರು ಗ್ರಂಥ ಸಂಪಾದನೆಗೆ ಕೈ ಹಾಕಿ ಎಷ್ಟು ಅಚಾತುರ್ಯಗಳನ್ನು ಮಾಡಿದ್ದಾರೆಂದರೆ, ಅವರ ಕೃತಿಗಳಿಗೆ ಒಂದು ಹಸ್ತಪ್ರತಿಯ ಬೆಲೆಯನ್ನೂ ಕೊಡು ವುದು ಕಷ್ಟವಾಗುತ್ತದೆ. ಹೆಸರು ಹೇಳಿ ಉದಾಹರಣೆಗಳನ್ನು ಕೊಡುವ ಅಗತ್ಯ ವಿದ್ದರೂ, ಅದನ್ನು ಇಲ್ಲಿ ಮಾಡುವುದಿಲ್ಲ. ಭಾಮಿನೀ ಷಟ್ಪದಿ ಪದ್ಯ; ಲಿಪಿಕಾರ ಯಾವುದೋ ತಪ್ಪು ಮಾಡಿದ್ದಾನೆ—ಆ ತಪ್ಪು ನಮಗೆ ಚೆನ್ನಾಗಿ ಗೊತ್ತಿರುವ ಪದಕ್ಕೆ ಸಂಬಂಧಿಸಿದ್ದು. ಆ ಪದವನ್ನು ತಿದ್ದಿಬಿಟ್ಟರೆ ಆ ದೋಷವೇ ಪರಿಹಾರ, ಛಂದಸ್ಸೂ ಸರಿಹೋಗುತ್ತದೆ. ಆದರೆ ಅಷ್ಟು ಸುಲಭವಾದ ಕೆಲಸವನ್ನೂ ಮಾಡದೆ ಪ್ರತಿಯಲ್ಲಿರುವುದನ್ನೇ ಅಚ್ಚು ಮಾಡಿಸಿ, ಕೆಲವೆಡೆ ಆ ಪ್ರತಿಯ ಪಾಠವನ್ನು ತಿದ್ದಲು ಹೋಗಿ ತಾವೇ ತಪ್ಪು ಮಾಡಿದ್ದಾರೆ. ಆದ್ದರಿಂದಲೇ ಹೇಳಿದ್ದು, ಎಷ್ಟೋ ಸಂಪಾ ದಿತ ಕೃತಿಗಳಿಗಿಂತ ಹಿಂದೆ ಟಿ. ಎಸ್. ಕೃಷ್ಣಯ್ಯಶೆಟ್ಟರಂಥವರು ಪ್ರಕಟಿಸಿದ ಗ್ರಂಥ ಗಳೇ ಎಷ್ಟೋ ವಾಸಿ.

ಕವಿಯ ಸ್ವಹಸ್ತಾಕ್ಷರ ಪ್ರತಿ ದೊರಕಿಬಿಟ್ಟರೆ 'ಸಂಪಾದನೆ' ಮಾಡುವುದಕ್ಕೆ ಏನೂ ಉಳಿದಿರುವುದಿಲ್ಲ ಎಂಬುದು ಸಾರ್ವತ್ರಿಕವಾದ ಭಾವನೆ. ಈಚೆಯವರೆಗೆ ನಾನು ಅದನ್ನೇ ನಂಬಿದ್ದೆ. ಆದರೆ ಅದು ನೂರಕ್ಕೆ ನೂರರಷ್ಟು ನಿಜವಲ್ಲವೆಂದೂ

ಅಲ್ಲಿಯೂ ಸಂಪಾದಕ ಎಚ್ಚರ ವಹಿಸದಿದ್ದರೆ ತಪ್ಪುಗಳಾಗುವ ಸಂಭವವುಂಟು ಎಂಬುದು ಈಚೆಗೆ ನನ್ನ ಗಮನಕ್ಕೆ ಬಂದಿದೆ. ಮುದ್ದಣನ ರಾಮಾಶ್ವಮೇಧದ ಮೂಲಪ್ರತಿಯನ್ನಿಟ್ಟುಕೊಂಡು ಎಂ. ಎ. ರಾಮಾನುಜಯ್ಯಂಗಾರ್ಯರು ಮೊದಲು ಅದನ್ನು ಅನೇಕ ಬದಲಾವಣೆಗಳೊಡನೆ ಪ್ರಕಟಿಸಿದರು. ನಂತರ ಎರಡನೆಯ ಆವೃತ್ತಿಯ ಹೊತ್ತಿಗೆ ತಾವು ಹಾಗೆ ತಿದ್ದಿದ್ದು ಸರಿಯಲ್ಲವೆಂದೆನಿಸಿ, ಮತ್ತೆ ಮೂಲ ಪ್ರತಿಯನ್ನು ಹೋಲಿಸಿ, ತಮ್ಮ ಬದಲಾವಣೆಗಳಲ್ಲಿ ಕೆಲವನ್ನು ಕೈಬಿಟ್ಟರು. ಇದರಿಂದ ಅವರ ಪ್ರಕಟಣೆ ಎಷ್ಟೋ ಸುಧಾರಿಸಿತು. ಮೊದಲ ಆವೃತ್ತಿಯನ್ನು ಅನುಸರಿಸಿ ಪುನರ್ಮುದ್ರಣ ಮಾಡಿದ ಕಾವ್ಯಾಲಯದವರ ಪ್ರಕಟಣೆ ಬಹಳ ದೋಷಗಳಿಂದ ಕೂಡಿದೆ. ಎರಡನೆಯ ಆವೃತ್ತಿಯನ್ನನುಸರಿಸಿ ಆಮೇಲೆ ಬಂದ ದಕ್ಷಿಣ ಕನ್ನಡ ಜಿಲ್ಲೆಯ ಎರಡು ಪ್ರಕಟಣೆಗಳು ಎಷ್ಟೋ ವಾಸಿ. ಈಚೆಗೆ ನಮಗೆ ದೊರೆತ ರಾಮಾಶ್ವಮೇಧದ ಕವಿಯ ಸ್ವಹಸ್ತಾಕ್ಷರ ಪ್ರತಿಯೊಡನೆ ರಾಮಾನುಜಯ್ಯಂಗಾರ್ಯರ ಎರಡನೆಯ ಆವೃತ್ತಿಯನ್ನು ಹೋಲಿಸಿ ನೋಡಿದಾಗ ಅನೇಕ ಕಡೆಗಳಲ್ಲಿ ಸಣ್ಣ ವ್ಯತ್ಯಾಸಗಳೂ ಕೆಲವೆಡೆ ಗಂಭೀರ ವ್ಯತ್ಯಾಸಗಳೂ ಇವೆ. ಮೂಲದ ಅನೇಕ ಮಾತುಗಳನ್ನು ರಾಮಾನುಜಯ್ಯಂಗಾರ್ಯರು ತಿದ್ದಿಬಿಟ್ಟಿದ್ದಾರೆ. ಹೋಗಲಿ ಮೂಲಪ್ರತಿ ಇರುವಂತೆಯೇ ಅಚ್ಚು ಮಾಡಿಸಬಹುದೇ ? ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಅಲ್ಲಿಯೂ ಅಲ್ಪ ಪ್ರಮಾಣದ ಸಂಪಾದನೆಯ ಅಗತ್ಯವಿದೆ. ಕೆಲವು ಸಮಸ್ಯೆಗಳೂ ಇವೆ. ಆದರೆ ಕವಿಯ ಸ್ವಹಸ್ತಾಕ್ಷರ ಪ್ರತಿ ದೊರೆತರೆ ಅಚ್ಚು ಮಾಡಿಸುವವರ ಕೆಲಸ ಬಹಳ ಸುಲಭವೆನ್ನುವ ಮಾತು ಒಟ್ಟಿನಲ್ಲಿ ನಿಜ.

ಕೆಲವು ಸಾರಿ ಕವಿಯ ಕೃತಿಯ ಏಕೈಕ ಹಸ್ತಪ್ರತಿಯ ಆಧಾರದ ಮೇಲೆ ಗ್ರಂಥ ಪ್ರಕಟಿಸುವ ಸಂದರ್ಭ ಒದಗಬಹುದು. ಉದಾಹರಣೆಗೆ, ನಾಗವರ್ಮನ ಕಾದಂಬರಿ ಹಾಗೆ ಬಿ. ಮಲ್ಲಪ್ಪನವರಿಂದ ಸಂಪಾದಿತವಾಗಿ ಪ್ರಕಟವಾಗಿದೆ. ಈಚೆಗೆ ಬಿ. ಎಸ್. ಸಣ್ಣಯ್ಯನವರು ಇಮ್ಮಡಿ ನಾಗವರ್ಮನ ವರ್ಧಮಾನ ಪುರಾಣವನ್ನು ಕಂಡುಹಿಡಿದದ್ದು ದೊಡ್ಡ ಶೋಧ. ಅದು ಈಗ ಪ್ರಕಟವಾಗಿದೆ. ಡಾ|| ಎಸ್. ವಿದ್ಯಾಶಂಕರ್ ಮತ್ತು ಎಚ್. ಕೆ. ಜಯದೇವ್ ಅವರು 'ಧರ್ಮ ಸಂಪಾದನೆ' ಎಂಬ ಗ್ರಂಥವನ್ನು ಏಕಪ್ರತಿಯ ಆಧಾರದ ಮೇಲೆ ಹೊರತಂದಿದ್ದಾರೆ. ಅನಿವಾರ್ಯವಾದಾಗ ಮಾತ್ರ ಹೀಗೆ ಮಾಡಬಹುದು. ಪ್ರಾಚೀನ ಗ್ರಂಥಗಳಿಗೆ ದೊರೆಕುವ ಹಸ್ತಪ್ರತಿಗಳನ್ನು ಕೊನೆಯ ಪಕ್ಷ ಅವುಗಳಲ್ಲಿ ಪ್ರಾಚೀನವೂ ಮುಖ್ಯವೂ ಆದುವನ್ನು ಬಳಸಿಕೊಳ್ಳದೆ ಮಾಡುವ ಸಂಪಾದನೆ ಅಶಾಸ್ತ್ರೀಯವಾಗುತ್ತದೆ.

ಗ್ರಂಥ ಸಂಪಾದನೆಯ ತತ್ವಗಳನ್ನು ತಿಳಿದುಕೊಳ್ಳುವವರಿಗೆ ಕನ್ನಡದಲ್ಲಿ ಎರಡು ಗ್ರಂಥಗಳು ಸಹಾಯ ಮಾಡುತ್ತವೆ (೧) ಡಾ|| ಡಿ. ಎಲ್. ನರಸಿಂಹಾಚಾರ್ ಅವರು ೧೯೬೪ರಲ್ಲಿ ಕನ್ನಡ ಗ್ರಂಥ ಸಂಪಾದನೆಯನ್ನು ಹೊರತಂದು ಕನ್ನಡ ಗ್ರಂಥ

ಸಂಪಾದನೆಯ ಕ್ಷೇತ್ರಕ್ಕೆ ಭದ್ರವಾದ ಅಡಿಗಲ್ಲನ್ನು ಹಾಕಿದರು. ಅದೇ ಮಾರ್ಗದಲ್ಲಿ ನಡೆದು ಡಾ|| ಎಂ. ಎಂ. ಕಲಬುರ್ಗಿಯವರು ಹೆಚ್ಚಿನ ಉದಾಹರಣೆಗಳೊಡನೆ ೧೯೭೨ರಲ್ಲಿ ಕನ್ನಡ ಗ್ರಂಥಸಂಪಾದನ ಶಾಸ್ತ್ರವನ್ನು ರಚಿಸಿದರು. ಈ ಎರಡು ಪುಸ್ತಕಗಳು ಅಮೂಲ್ಯವಾದ ಸಲಹೆಗಳನ್ನು ಕೊಡುತ್ತಿದ್ದರೂ ಅವು ಬಹುಪಾಲು ಎಂ. ಎ. ಪರೀಕ್ಷೆಗೆ ಓದುವ ವಿದ್ಯಾರ್ಥಿಗಳಿಗೆ ಪರಾಮರ್ಶನ ಗ್ರಂಥಗಳಾಗಿ ಮಾತ್ರ ಪರಿಣಮಿಸಿರುವುದು ಕನ್ನಡ ವಿದ್ವತ್ತಿನ ದುರದೃಷ್ಟ. ಗ್ರಂಥಗಳನ್ನು ಸಂಪಾದನೆ ಮಾಡ ಬಯಸುವವರು ಶಾಸ್ತ್ರೀಯ ದೃಷ್ಟಿಯನ್ನು ಬೆಳೆಸಿಕೊಳ್ಳಲು ಅವು ಸಹಾಯಕ ವಾಗಿದ್ದರೂ ಅವುಗಳ ಉಪಯೋಗ ಮಾಡಿಕೊಳ್ಳುತ್ತಿಲ್ಲ.

ಗ್ರಂಥ ಸಂಪಾದನೆಯೆಂಬುದು ಕೇವಲ ತಾಳೆಗರಿ ಅಥವಾ ಕಾಗದಗಳ ಮೇಲಿ ರುವ ಬರಹಗಳಿಗೇ ಅನ್ವಯಿಸಬೇಕಾಗಿಲ್ಲ; ಶಾಸನ, ತಾಮ್ರಪಟಗಳಿಗೂ ಅನ್ವಯಿಸಬಹುದು. ಶಾಸನ ಅಥವಾ ತಾಮ್ರಪಟಗಳನ್ನು ಗ್ರಂಥಕರ್ತನ ಮೂಲಪ್ರತಿಯೆಂದು ಭಾವಿಸುವುದರಲ್ಲಿ ಕೆಲವು ತೊಂದರೆಗಳಿವೆ. ಗ್ರಂಥಕರ್ತ ಬರೆದುಕೊಟ್ಟ ಪಾಠವನ್ನು ಕಲ್ಲಿನ ಮೇಲೆ ಬಳಪದಲ್ಲಿ ಇನ್ನೊಬ್ಬ ಬರೆದುಕೊಟ್ಟರೆ ಶಿಲ್ಪಿ ಅದನ್ನು ಹಾಗೇ ಕೆತ್ತುತ್ತಿದ್ದ. ಗ್ರಂಥಕರ್ತನೇ ಬಳಪದಲ್ಲಿ ಬರೆದು ಕೊಟ್ಟಿರಬಹುದು. ಆದರೂ ಶಾಸನಗಳಲ್ಲಿ ಸಾವಿರಾರು ಬಗೆಯ ತಪ್ಪುಗಳು ಉಳಿದು ಬಿಟ್ಟು ಓದುಗರನ್ನು ದಿಕ್ಕುಗೆಡಿಸುತ್ತವೆ. ಇವುಗಳಲ್ಲಿ ಗ್ರಂಥಕರ್ತನ ಮತ್ತು ಶಿಲ್ಪಿಯ ತಪ್ಪುಗಳಿರಬಹುದು. ಇದರ ಜೊತೆಗೆ ಪ್ರಾಕೃತಿಕ ಕಾರಣಗಳಿಂದಾದ ತಪ್ಪುಗಳು, ಅಜ್ಞರಾದ ಜನ ಚೆಚ್ಚಿಹಾಕಿದ್ದರಿಂದಾದ ತಪ್ಪುಗಳು, ಶಾಸನಶಾಸ್ತ್ರಜ್ಞರ ಅಥವಾ ಮುದ್ರಕನ ತಪ್ಪುಗಳೂ ಸೇರಿರಬಹುದು. ಲಿಪಿತಜ್ಞರು ಸಾಮಾನ್ಯವಾಗಿ ಶಾಸನ ಗಳು ಇರುವಂತೆಯೇ ಅಚ್ಚುಮಾಡಿಸುತ್ತಾರೆ. ಕೆಲವು ಸಾರಿ ಮೂಲಪಾಠವನ್ನು ಕೊಟ್ಟು, ಸರಿಯಾದ ಪಾಠವನ್ನು ಅಲ್ಲೇ ತೋರಿಸಿರುವುದೂ ಉಂಟು. ಮೂಲ ಪಾಠದಲ್ಲಿ ಕಂಡುಬರುವ ದೋಷವೊಂದು ಎಂತಹ ಅನಾಹುತಗಳಿಗೆ ಕಾರಣವಾಗ ಬಹುದೆಂಬುದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ಘಟಿಕಾಸ್ಥಾನದ ವಿವರ ಗಳನ್ನು ಕೊಡುವ ಶಾಸನಗಳಲ್ಲಿ ಕ್ರಿ.ಶ. ೧೦೫೮ರ ನಾಗಾವಿಯ ಶಾಸನ ಅಗ್ರಗಣ್ಯ. ಅದರಲ್ಲಿ ಒಂದು ಮಾತು ಹೀಗಿದೆ—"ಶಾಲೆಯಲೋದುವ ವೇದಾಧ್ಯಾಯಿ ಗಳಿನ್ನೂರ್ವರ್ಗಂ ಶಾಸ್ತ್ರಾಧ್ಯಾಯಿಗಳಯ್ನೂರ್ವಡಿಂಬರ್ಗಂ ತದುಪಾಧ್ಯಾಯಿಗಳು ಭಟ್ಟ ದರ್ಶನ ನ್ಯಾಯ ಪ್ರಭಾಕರ ವ್ಯಾಖ್ಯಾತೃಗಳ್ ಮೂವರ್ಗಂ ವೇದಮನೋದಿಸುವ ಪಾ ಧ್ಯಾಯರ್ ಮೂವರ್ಗಂ ಶಾಳೆಯ ಸರಸ್ವತೀ ಭಂಡಾರಿಗರಾರ್ವರ್ಗಮನ್ತು ೨೫೭ ಮಾನಿಸರ........" —ಸರಸ್ವತೀ ಭಂಡಾರಿ ಅಥವಾ Librarian ವಿಷಯ ಇಲ್ಲಿ ಬರುವುದು ಅನೇಕರ ಗಮನ ಸೆಳೆದಿದೆ. 'ಸರಸ್ವತೀ ಭಂಡಾರಿಗರಾರ್ವರ್ಗಂ' ಎಂಬು ವುದರಿಂದ ಅಲ್ಲಿ ಆರು ಜನ ಸರಸ್ವತೀ ಭಂಡಾರಿಗರಿದ್ದರೆಂದು ಅನೇಕರು ಬರೆದಿದ್ದಾರೆ. (ಇವರೆಲ್ಲ ಅನೇಕರು ಅಚ್ಚಾದ ಶಾಸನದ ಪಾಠವನ್ನೇ ನೋಡಿದವರು). ಇಲ್ಲಿಯ

'೨೫೭' ಎಂಬ ಒಂದು ಸಂಖ್ಯೆಯನ್ನು ನೋಡಿದರೆ, ಸರಸ್ವತೀ ಭಂಡಾರಿ ಒಬ್ಬರೇ ಇರಬೇಕು. ಮುಂದೆ ಅದೇ ಶಾಸನದಲ್ಲಿ "ಸರಸ್ವತೀ ಭಂಡಾರಿಗೆ ಮತ್ತರು ೬೦" ಎಂದು ಏಕವಚನವಿದೆ. ಶ್ರೀ ಅಣ್ಣಿಗೇರಿ ಮತ್ತು ಪೇಪ್ರಂಡಿ ಮಲ್ಲಾರಿಯವರು ಮೇಲಿನ ಪಾಠ "ಸರಸ್ವತೀ ಭಂಡಾರಿರ್ಪೋರ್ವರ್ಗರ್ಗಂ ಎಂದಿದೆಯೋ ಏನೋ" ಎಂದು ಸರಿಯಾಗಿ ಊಹಿಸಿದ್ದಾರೆ. ಒಟ್ಟು ಸಂಖ್ಯೆಯೂ ಇಲ್ಲದೆ, ಸರಸ್ವತೀ ಭಂಡಾರಿ ಎಂದು ಏಕವಚನವೂ ಇಲ್ಲದಿದ್ದರೆ, ಆರು ಜನ ಸರಸ್ವತೀ ಭಂಡಾರಿಗಳಿದ್ದರು ಎಂಬ ಅಭಿಪ್ರಾಯ ಉಳಿಯುತ್ತಿತ್ತೇ ಎಂಬ ಪ್ರಶ್ನೆ ಬರುತ್ತದೆ. ಆಗ ವ್ಯಾಕರಣ ಸಹಾಯಕ್ಕೆ ಬರುತ್ತದೆ. 'ಆರು ಜನ' ಎಂದಿರಬೇಕಾದರೆ, "ಸರಸ್ವತೀ ಭಂಡಾರಿಗಳು-ವರ್ಗಂ" ಎಂದಿರಬೇಕಾಗುತ್ತಿತ್ತು. ಜೊತೆಗೆ, ಒಟ್ಟು ಆರು ಜನ ಉಪಾಧ್ಯಾಯರು, ೨೫೦ ಜನ ವಿದ್ಯಾರ್ಥಿಗಳಿರುವ ಶಾಲೆಯಲ್ಲಿ ಆರು ಜನ ಪುಸ್ತಕ ಭಂಡಾರಿಗಳನ್ನು ನೇಮಿಸಿಕೊಳ್ಳುವುದು ಸಾಧ್ಯವೇ ಎಂಬ ಪ್ರಶ್ನೆಯೂ ಬರುತ್ತಿತ್ತು.

ಈಚಿನ ಶಾಸನಗಳಲ್ಲಿ (೧೦-೧೧ನೇ ಶತಮಾನ) ಟ್ ವನ್ನು ತಪ್ಪಾಗಿ ಬಳಸಿರುವ ಉದಾಹರಣೆಗಳು ಸಿಗುತ್ತವೆ. ಉದಾಹರಣೆಗೆ, 'ಇಟ್ದು' (=ಇರ್ದು), ಎಟ್ದಿ (=ಎರ್ದೆ), ಅಮುಟ್ದು (=ಅಮುರ್ದು, ಅಮೃತ). ಇಲ್ಲಿ 'ಟ್' ವನ್ನು ಬರೆದಿರುವುದು ಏಕೆ ಎಂಬುದರ ಕಾರಣವನ್ನು ತಿಳಿಯಬೇಕು. ಉಚ್ಚಾರದಲ್ಲಿ ದ್ವಿತ್ವದಲ್ಲಿನ ಟ್ ವು ರೇಫವಾದ ಮೇಲೂ ಕೆಲವು ಕಾಲ ಹಿಂದಿನಂತೆಯೇ ಟ್ ವನ್ನು ಬರೆದು ಉಚ್ಚರಿಸುವಾಗ ರೇಫವನ್ನು ಹೇಳುತ್ತಿದ್ದರು. ಉದಾಹರಣೆಗೆ 'ಗಟ್ದೆ' ಎಂದು ಬರೆದು 'ಗರ್ದೆ' ಎಂದು ಓದುತ್ತಿದ್ದರು. (ಲಿಪಿ ಯಾವಾಗಲೂ ಸಂಪ್ರದಾಯನಿಷ್ಠ). ಇದನ್ನು ಬೇರೆ ಪದಗಳಿಗೂ ಅನ್ವಯಿಸಿ, ಸಹಜವಾಗಿಯೇ ಮೊದಲಿಂದ ರೇಫವಿದ್ದ ಪದಗಳಲ್ಲೂ ಟ್ ವನ್ನು ಬರೆದು, ರೇಫವಾಗಿ ಉಚ್ಚರಿಸುತ್ತಿದ್ದರು. 'ಇಟ್ದು' ಬರವಣಿಗೆಯಲ್ಲಿದ್ದರೆ, 'ಇರ್ದು' ಎಂದು ಉಚ್ಚಾರದಲ್ಲಿರುತ್ತಿತ್ತು. ಪಂಪನಲ್ಲಿಯೇ "ಬಕಂಗೆ ಮಿಟ್ತು ಮೂಡುವ ತೆಱದಿಂ" ಎಂಬಲ್ಲಿ ಬಂದಿರುವ 'ಮಿಟ್ತು' ವಾಸ್ತವವಾಗಿ 'ಮಿರ್ತು' (ಮೃತ್ಯು) ಇರಬೇಕು. ಭಾಷಾ ವ್ಯತ್ಯಾಸವು ಬರವಣಿಗೆಯಲ್ಲಿ ಮೂಡಿಸಿದ ಭ್ರಾಂತಿಯ ಫಲ ಇದು. ಇಂತಹ ಕಡೆಗಳಲ್ಲಿ ಟ್ ವನ್ನು ಮೂಲಪಾಠವಾಗಿ ಉಳಿಸಿಕೊಳ್ಳುವುದು ಸಾಧುವಲ್ಲವೆಂದು ತೋರುತ್ತದೆ. ಇಲ್ಲಿ ನಾನು ಶಾಸನಗಳನ್ನು ಇತಿಹಾಸದಲ್ಲಿ ಆಸಕ್ತರಾಗಿರುವವರೆಲ್ಲರ ಅನುಕೂಲ್ಯಕ್ಕಾಗಿ ಪರಿಷ್ಕರಿಸಿ, ಸಂಪಾದಿಸಿ ಪ್ರಕಟಿಸುವ ಅಗತ್ಯವನ್ನು ಒತ್ತಿ ಹೇಳುತ್ತೇನೆ. ಹಾಗೆಂದು ಇರುವ 'ತಪ್ಪು'ಗಳನ್ನೆಲ್ಲ ತಿದ್ದಬೇಕೆಂದು ಸೂಚಿಸುತ್ತಿಲ್ಲ. ಶಾಸನಗಳಲ್ಲಿ ಆಡುಮಾತಿನ ಬಳಕೆಯ ಯಥಾವತ್ತಾದ, ಕೆಲವೆಡೆ ವ್ಯಾಕರಣ ವಿರೋಧಿ ಪ್ರಯೋಗಗಳಿರುವುದು ಅವುಗಳ ಸೊಗಸನ್ನು ಬೆಲೆಯನ್ನು ಹೆಚ್ಚಿಸಿದೆ. ಇದು ಶಾಸನಗಳ 'ಸಂಪಾದಕ'ರ ಜವಾಬ್ದಾರಿಯನ್ನು ಹೆಚ್ಚಿಸುವ ವಿಚಾರ.

ಜನಪದ ಸಾಹಿತ್ಯವನ್ನು 'ಸಂಪಾದಿಸು'ವವರ ಮಾರ್ಗ, ಹೊಣೆಗಳು ಬೇರೆ ಇವೆ.

ಕನ್ನಡದಲ್ಲಿ ೧೮೮೦ರಷ್ಟು ಹಿಂದೆಯೇ ಬಿ. ಎಲ್. ರೈಸ್ Bibliotheca Carnatica ಮಾಲೆಯಲ್ಲಿ ಪಂಪರಾಮಾಯಣವನ್ನೂ, ಅದೇ ಮಾಲೆಯಲ್ಲಿ ಮುಂದೆ ಕರ್ನಾಟಕ ಭಾಷಾಭೂಷಣ, ಶಬ್ದಾನುಶಾಸನ, ಪಂಪಭಾರತಗಳನ್ನೂ, ಹಸ್ತಪ್ರತಿಗಳ ಆಧಾರದ ಮೇಲೆ ಸಂಪಾದಿಸಿ ಪ್ರಕಟಿಸಿದರು. ಅಲ್ಲಿ ರೈಸ್ ತೋರಿರುವ ಶ್ರದ್ಧೆ, ವಿವೇಚನಾಶಕ್ತಿಗಳು ಮೆಚ್ಚುವಂತಹದ್ದು. ಅವರ ಹತ್ತಿರ ಶಿಕ್ಷಣವನ್ನು ಪಡೆದ ಕೆ. ಬಿ. ಪಾಠಕ್, ಆರ್. ನರಸಿಂಹಾಚಾರ್ಯರೂ ಅದೇ ಸಂಪ್ರದಾಯವನ್ನು ಮುಂದುವರಿಸಿದರು. ಉತ್ತರದಲ್ಲಿ ಫ. ಗು. ಹಳಕಟ್ಟಿ, ದಕ್ಷಿಣದಲ್ಲಿ ಎಂ. ಎ. ರಾಮಾನುಜ ಅಯ್ಯಂಗಾರ್ಯರ ಪ್ರಕಟಣೆಗಳನ್ನು ಅಶಾಸ್ತ್ರೀಯ ಸಂಪಾದನೆಗಳೆಂದು ಮೂಗು ಮುರಿಯುವುದು ಸುಲಭ. ಪ್ರಾಚೀನ ಗ್ರಂಥಗಳ ಪ್ರಕಟಣೆಯ ಕಾರ್ಯದಲ್ಲಿ ಇವರಿಬ್ಬರೂ ಮಾಡಿರುವ ಸೇವೆ ಚಿರಸ್ಮರಣೀಯವಾದುದು. ಇಂದಿಗೂ ಅವರ ಪ್ರಕಟಣೆಗಳಲ್ಲಿ ಅನೇಕವು ಹೆಚ್ಚು ಬಳಕೆಯಲ್ಲಿವೆ ಮತ್ತು ಬಳಸಲು ಯೋಗ್ಯವಾಗಿವೆ. ಕನ್ನಡ ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಮೂರು ದೊಡ್ಡ ಹೆಸರುಗಳೆಂದರೆ ಶಿ. ಶಿ. ಬಸವನಾಳ, ತೀ. ನಂ. ಶ್ರೀಕಂಠಯ್ಯ, ಮತ್ತು ಡಿ. ಎಲ್. ನರಸಿಂಹಾಚಾರ್. ಈ ಮಹನೀಯರ ಸಂಪಾದನಾ ಕಾರ್ಯಗಳು ಇಂದಿಗೂ ಅನುಕರಣೀಯವಾಗಿವೆ. ಅದರಲ್ಲೂ ತೀ. ನಂ. ಶ್ರೀಕಂಠಯ್ಯ ಮತ್ತು ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿ ಪ್ರಕಟಿಸಿರುವ ಕೃತಿಗಳ ಮರುಸಂಪಾದನೆಗೆ ಕೈಹಾಕಲು ಧೈರ್ಯ ಬೇಕಾಗುತ್ತದೆ. ಪಾಠ ನಿರ್ಣಯದಲ್ಲಿ ಅವರು ತೋರಿರುವ ಎಚ್ಚರ ಮೆಚ್ಚುವಂಥದ್ದು. ತೀ.ನಂ.ಶ್ರೀ. ಯವರು ಸಂಪಾದಿಸಿದ ನಂಬಿಯಣ್ಣನ ರಗಳೆ, ಗದಾಯುದ್ಧ ಸಂಗ್ರಹ, ಡಿ. ಎಲ್. ನರಸಿಂಹಾಚಾರ್ಯರಿಂದ ಸಂಪಾದಿತವಾದ ವಡ್ಡಾರಾಧನೆ ಇತ್ಯಾದಿಗಳನ್ನು ಒಮ್ಮೆ ತೆರೆದು ನೋಡಬೇಕು. ಕೆಳಗೆ ಕೊಟ್ಟಿರುವ ಪಾಠಗಳನ್ನು ಮತ್ತು ಮೇಲೆ ಅಂಗೀಕರಿಸಿದ ಪಾಠಗಳನ್ನು ಹೋಲಿಸಿ ನೋಡಬೇಕು. ಬಹುಶಃ ಅಂತಹ ತೌಲನವೇ ಒಂದು ಶಿಕ್ಷಣವಾಗಬಹುದು. ಈಚೆಗೆ ಸಂಪಾದನ ಕ್ಷೇತ್ರದಲ್ಲಿ ದುಡಿಯುತ್ತಿರುವವರಲ್ಲಿ ಎಚ್. ದೇವೀರಪ್ಪ, ಎಸ್. ಎಸ್. ಮಾಳವಾಡ, ಎನ್. ಅನಂತರಂಗಾಚಾರ್, ಆರ್. ಸಿ. ಹಿರೇಮಠ್, ಎಲ್. ಬಸವರಾಜು, ಎನ್. ಬಸವಾರಾಧ್ಯ, ಬಿ. ಎಸ್. ಸಣ್ಣಯ್ಯ, ಎಸ್. ಶಿವಣ್ಣ ಇತ್ಯಾದಿ ಮಹನೀಯರ ಹೆಸರುಗಳನ್ನು ಹೇಳುವುದು ಅಗತ್ಯ.

ಸಂಪಾದಕ ತಾನು ಆರಿಸಿಕೊಳ್ಳುವ ಕೃತಿಯ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಪ್ರಾಚೀನ ಅಥವಾ ಹೆಚ್ಚು ಶುದ್ಧವೆಂದು ತೋರುವ ಕೃತಿಯ ಪಾಠವನ್ನು ಪ್ರತಿ ಮಾಡಿಕೊಂಡು ಬೇರೆ ಬೇರೆ ಪ್ರತಿಗಳ ಪಾಠಾಂತರಗಳನ್ನು ಗುರುತುಮಾಡಿಕೊಳ್ಳುತ್ತಾನೆ. ಅಕ್ಷರ ದೋಷಗಳು ಅಸಂಖ್ಯಾತವಾಗಿರುತ್ತವೆ. ಅಲ್ಪಪ್ರಾಣ-ಮಹಾಪ್ರಾಣ, ಹ್ರಸ್ವ ದೀರ್ಘ, ಶ, ಷ, ಸ ಇವುಗಳಿಗೆ ಭೇದವನ್ನು ಮಾಡುವುದಿಲ್ಲ. ಮೂಲವನ್ನು ಸರಿಯಾಗಿ ನೋಡದೆ ಅಥವಾ ನೋಡಿದರೂ ಸರಿಯಾಗಿ ಬರೆಯದೆ

ತಪ್ಪುಗಳು ಘಟಿಸಿರಬಹುದು. ಅವುಗಳನ್ನು ಯಾಂತ್ರಿಕವಾಗಿ ಸರಿಪಡಿಸಿಕೊಳ್ಳುತ್ತಾನೆ. ಕೆಲವರು ಮಾಡುವಂತೆ ಅಕ್ಷರ ತಪ್ಪುಗಳನ್ನೆಲ್ಲ ಪಾಠಾಂತರವಾಗಿ ಕೊಡುತ್ತ ಹೋದರೆ ಪ್ರತಿ ಪುಟದ ಕೆಳಗೆ ಅವುಗಳ ಸಂತಾನ ಬೆಳೆದು ನಿಂತು ಪಾಠಾಂತರಗಳ ಸೀಗೆಮೆಳೆಯೊಂದು ನಿರ್ಮಾಣವಾಗಬಹುದು. ಕೆಲವೆಡೆ ಅಕ್ಷರಗಳು, ಪದಗಳು, ಪದ್ಯಗಳು ಬಿಟ್ಟುಹೋಗಿರುವುದುಂಟು. ಒಂದೇ ಪದ ಮತ್ತೆ ಆವೃತ್ತವಾಗಿರಬಹುದು. ಇವುಗಳನ್ನು ಸುಲಭವಾಗಿ ಪಾಠಗಳ ಸಹಾಯದಿಂದ ಮತ್ತು ಜಾಣ್ಮೆಯಿಂದ ಸರಿಪಡಿಸಬಹುದು. ಪ್ರತಿಕಾರರು ಮಾಡಬಹುದಾದ ತಪ್ಪುಗಳು ಅನಂತ. ಕೆಲವರು ಮೂಲದ ಯಾವುದಾದರೂ ಭಾಗ ಅರ್ಥವಾಗದಿದ್ದರೆ ತಿದ್ದಿ ಬಿಡುತ್ತಾರೆ. ಅಥವಾ ಈಚಿನ ಪರಂಪರೆಗೆ ಹೊಂದಿಕೊಳ್ಳುವಂತೆ ಮಾರ್ಪಡಿಸುತ್ತಾರೆ. ಛಂದೋಂಬುಧಿಯ ಅಂಶಗಣ ಘಟಿತ ಷಟ್ಪದಿಯನ್ನು ಈಚಿನವರು ಶರಷಟ್ಪದಿಯಾಗಿ ಮಾರ್ಪಡಿಸಿದ್ದನ್ನು ಗುರುತಿಸಿ, ಅದರ ಭಿನ್ನ ಪಾಠಗಳ ಸಹಾಯದಿಂದ ಅದನ್ನು ತೀ. ನಂ. ಶ್ರೀಯವರು ಪುನಃ ರಚಿಸಿದ್ದನ್ನು ಎಲ್ಲರೂ ಬಲ್ಲರು. ಅರ್ಥವಾಗದ್ದನ್ನು ಸುಲಭೀಕರಿಸಿ ತಿದ್ದುವುದಕ್ಕೆ ಡಿ. ಎಲ್. ನರಸಿಂಹಾಚಾರ್ ಮತ್ತು ಎಂ. ಕಲಬುರ್ಗಿಯವರ ಪುಸ್ತಕಗಳಲ್ಲಿ ಸಾಕಷ್ಟು ಉದಾಹರಣೆಗಳಿವೆ. ಅವನ್ನು ಬಿಟ್ಟು ಕೆಲವು ಉದಾಹರಣೆಗಳನ್ನು ನನ್ನ ಅನುಭವದಿಂದ ಕೊಡುತ್ತೇನೆ. ಉತ್ತಂಗಿ ಚನ್ನಪ್ಪನವರು ಪ್ರಕಟಿಸಿದ ಸರ್ವಜ್ಞನ ವಚನಗಳಲ್ಲಿ ಒಂದು ಹೀಗಿದೆ.

ತುಯ್ಯಲಿಲ್ಲದ ತೋಟ ತುಯ್ಯಲಿಲ್ಲದ ಊಟ
ಕೈಯ್ಯಲಿಲ್ಲದ ಬರಿ ನೋಟ ಕೋಲಿಲ್ಲ
ದ್ದುಯ್ಯಲ್ಹೋದಂತೆ ಸರ್ವಜ್ಞ ||

'ತುಯ್ಯಲಿಲ್ಲದ ಊಟ' ಎಂದರೆ ಸರಿಯೇ; ಪಾಯಸವಿಲ್ಲದ ಊಟದಿಂದ ಏನು ಪ್ರಯೋಜನ? 'ತುಯ್ಯಲಿಲ್ಲದ ತೋಟ'ವೆಂದರೇನು? 'ತೊಯ್ಯಿಸುವ ನೀರು ಇಲ್ಲದ ತೋಟ' ಎಂದು ಎಳೆದು ಅರ್ಥ ಮಾಡಬೇಕು. ಅದು 'ಗುಯ್ಯಲಿಲ್ಲದ ತೋಟ'ವಿರಬೇಕೆಂದು ನಾನು ಊಹೆಯ ಮೇಲೆ ತಿದ್ದಿ ನನ್ನ ಲೇಖನವೊಂದರಲ್ಲಿ ಸೂಚಿಸಿದೆ. 'ಗುಯ್ಯಲ್' ಎಂದರೆ ಬಾವಿಯಂತಹ ಜಲಾಶಯ ಪ್ರದೇಶವೆಂಬ ಅರ್ಥವಿರುವುದನ್ನು ಡಿ. ಎಲ್. ನರಸಿಂಹಾಚಾರ್ಯರು ತೋರಿಸಿಕೊಟ್ಟಿದ್ದಾರೆ. ಈಚೆಗೆ ಡಾ|| ಎಲ್. ಬಸವರಾಜು ಅವರ 'ಪರಮಾರ್ಥ' ಹೆಸರಿನ ಸರ್ವಜ್ಞನ ವಚನ ಗ್ರಂಥದಲ್ಲಿ 'ಗುಯ್ಯಲ್' ರೂಪವನ್ನು ನೋಡಿ ನನ್ನ ಊಹೆಗೆ ಹಸ್ತಪ್ರತಿಯ ಬೆಂಬಲವಿರುವುದನ್ನು ಕಂಡು ಸಂತೋಷವಾಯಿತು. 'ಗುಯ್ಯಲ್' ಎಂಬುದು ಕಠಿಣಪಾಠ. ಕಠಿಣಪಾಠವು ಸಾಮಾನ್ಯವಾಗಿ ಮೂಲಪಾಠವಾಗಿರುತ್ತದೆ ಎಂಬುದು ಗ್ರಂಥ ಸಂಪಾದನೆಯ ತತ್ವಗಳಲ್ಲಿ ಒಂದು.

ಯಾವುದಾದರೂ ರಚನೆಯಲ್ಲಿ ಆ ಕಾಲಕ್ಕಿಂತ ಈಚಿನದೆಂದು ಖಚಿತವಾಗಿ ಹೇಳಬಹುದಾದ ಪದಪ್ರಯೋಗವಿದ್ದರೆ ಅದು ಯಾರೋ ಈಚಿನವರು ಸೇರಿಸಿದ್ದೆಂದು ನಿರ್ಧಾರವಾಗುತ್ತದೆ. ಪ್ರತಿಕಾರರು ಬೇರೆ ಬೇರೆ ಉದ್ದೇಶಗಳಿಗಾಗಿ ಹೀಗೆ ಪ್ರಕ್ಷಿಪ್ತಗಳನ್ನು ಮಾಡುವುದುಂಟು. ಅಂಬಿಗರ ಚೌಡಯ್ಯ ಮತ್ತು ಬಹುರೂಪಿ ಚೌಡಯ್ಯನ ವಚನಗಳಲ್ಲಿ 'ತಂಬಾಕು' ಎಂಬ ಮಾತು ಬಂದಿರುವುದು ಅವರ ಆ ಎರಡು ವಚನಗಳು ಕ್ರಿ.ಶ. ೧೬೦೦ರಿಂದ ಈಚೆ ಯಾರೋ ಅವರ ಅಂಕಿತದಲ್ಲಿ ವಚನಗಳನ್ನು ಕಟ್ಟಿದರೆಂಬುದಕ್ಕೆ ಬಲವಾದ ಆಧಾರಗಳಾಗಿವೆ. (ತಂಬಾಕು ಯೂರೋಪಿನಿಂದ ಸು. ೧೬೦೦ರ ಸುಮಾರಿನಲ್ಲಿ ದಕ್ಖನ್ ಪ್ರದೇಶಕ್ಕೆ ಬಂದು ೧೬೦೨ರಲ್ಲಿ ದೆಹಲಿಗೆ ಹೋಯಿತೆಂಬುದನ್ನು ಇತಿಹಾಸ ಹೇಳುತ್ತದೆ). ಹೀಗೆಯೇ ಎಷ್ಟೋ ವಚನಗಳ ಪಾಠ ಕೆಟ್ಟಿರುವುದಲ್ಲದೆ, ಈಚಿನವರು ರಚಿಸಿ ಸೇರಿಸಿದ ವಚನಗಳು ನಿಜವಾದ ವಚನಗಳ ಜೊತೆ ಮಿಶ್ರಣವಾಗಿ ಹೋಗಿವೆ. ಅವುಗಳನ್ನು ಬೇರ್ಪಡಿಸುವುದೇ ದೊಡ್ಡ ಕೆಲಸವಾಗಿದೆ; ಅಸಾಧ್ಯದ ಕೆಲಸವೂ ಆಗಿದೆ. ವೀರಶೈವ ಸಾಹಿತ್ಯದ ಬಗ್ಗೆ ನನ್ನ ಮಟ್ಟಿಗೆ ಒಂದು ಸಮಸ್ಯೆಯಾಗಿರುವುದನ್ನು ಇಲ್ಲಿ ಪ್ರಸ್ತಾಪಿಸಲು ಸರಿಯಾದ ಜಾಗವೆಂದು ಭಾವಿಸಿದ್ದೇನೆ. ವಚನಕಾರರು ವಚನಗಳನ್ನು ಬರೆದದ್ದನ್ನು ಯಾರೂ ಶಂಕಿಸಿಲ್ಲ. ಒಬ್ಬರ ವಚನವನ್ನು ಅದೇ ಕಾಲದ ಇನ್ನೊಬ್ಬ ವಚನಕಾರ ಅನುಕರಿಸುವುದು, ವಚನಕಾರರಿಂದ ಈಚೆಗೆ ಬಂದ ಹರಿಹರ, ರಾಘವಾಂಕಾದಿಗಳು ಅವರ ವಚನಗಳನ್ನು ತಮ್ಮ ಕಾವ್ಯದಲ್ಲಿ ಹೆಣೆದಿರುವುದು ಅವರ ವಚನಗಳ ನೈಜತೆಗೆ ಮತ್ತು ಪ್ರಾಚೀನತೆಗೆ ಕೆಲವು ಸಾಕ್ಷಿಗಳು. ಆದರೆ ಅದೇ ವಚನಕಾರರ ಅಂಕಿತದಲ್ಲಿ ಹಾಡುಗಳು ದೊರೆಯುತ್ತಿದ್ದು, ಅವುಗಳ ಸಂಕಲನವನ್ನು "ಶಿವದಾಸ ಗೀತಾಂಜಲಿ" ಎಂಬ ಹೆಸರಲ್ಲಿ ಡಾ|| ಎಲ್. ಬಸವರಾಜು ಹೊರತಂದು, ಶಿವಶರಣರು ವಚನಗಳನ್ನಲ್ಲದೆ ಕೀರ್ತನೆಗಳನ್ನೂ ಬರೆದರೆಂದು ವಾದಿಸಿದರು. ಕೀರ್ತನೆಗಳ ಇತಿಹಾಸ ಹರಿದಾಸರಿಗಿಂತ ಹಿಂದಕ್ಕೆ ಹೋಗುವುದು ಸಂತೋಷದ ವಿಷಯವೇ. ಆದರೆ, ಆ ಕೀರ್ತನೆಗಳಲ್ಲಿ ರಚನಕಾರರ ಅಂಕಿತಗಳಿದ್ದರೂ, ಅವುಗಳ ನೈಜತೆಯನ್ನು ಶಂಕಿಸಲು ಪ್ರಬಲ ಕಾರಣಗಳಿವೆ. ಒಂದು—ವಚನಗಳಲ್ಲಿ ಕಂಡುಬರುವ ಗರಿಗರಿ ಗುಣ (crispness) ಅವುಗಳಲ್ಲಿಲ್ಲ. ವಚನಗಳು ಆಯಾ ವಚನಕಾರನ ತೀವ್ರ ಸಂವೇದನೆ, ತುಡಿತ, ಆಲೋಚನಾ ಪ್ರಖರತೆ, ಅನನ್ಯ ವ್ಯಕ್ತಿತ್ವದ ಕುರುಹುಗಳು. ಆ ದೃಷ್ಟಿಯಿಂದ ನೋಡಿದಾಗ ಅವರ ಹೆಸರಿನ ಗೀತಗಳು ಸಾಹಿತ್ಯದ ದೃಷ್ಟಿಯಿಂದ ಸಪ್ಪೆಯಾಗಿ ಮಂಕಾಗಿ ಕಾಣಿಸುತ್ತವೆ. ಹಾಡುಗಳಲ್ಲಿ, ಒಂದೆರಡನ್ನು ಬಿಟ್ಟರೆ, ಅವುಗಳನ್ನು ಸಂಗೀತಕ್ಕೆ ಅಳವಡಿಸಿ ಎತ್ತಿ ನಿಲ್ಲಿಸಬೇಕೇ ಹೊರತು ಅವುಗಳಿಗೇ ಎದ್ದು ನಿಲ್ಲುವ ತ್ರಾಣವಿಲ್ಲ. ಇದು ಶೈಲಿಯ ವಿಷಯವಾಯಿತು. ಪಾಠದ ಸಂಗತಿಯ ಕಡೆ ನೋಡಿದಾಗ ಕೆಲವು ಸ್ವಾರಸ್ಯ ಸಂಗತಿಗಳು ಕಾಣುತ್ತವೆ. ಆ ಹಾಡುಗಳಲ್ಲಿ ಯಾವುದೂ ಹರಿಹರಾದಿ ಕವಿಗಳ ಕಾವ್ಯಗಳಲ್ಲಿ ಹೆಣೆದುಕೊಂಡಂತೆ ಸಿಕ್ಕಿಲ್ಲ. ಈಚಿನ

ಯಾರೋ ಪ್ರತಿಕಾರರು ವಚನಕಾರರ ವಚನಗಳನ್ನೇ ಇಟ್ಟುಕೊಂಡು ಅವಗಳನ್ನು ಹಾಡಿಗೆ ತಿರುಗಿಸಿರುವುದು ಕಂಡುಬರುತ್ತದೆ. ಉದಾಹರಣೆಗೆ—ಸಿದ್ಧರಾಮನ ಹಾಡು, ವಚನಗಳನ್ನು ಅಕ್ಕಪಕ್ಕಕ್ಕೆ ಇಟ್ಟು ತೋರಿಸುತ್ತೇನೆ.

ಹಾಡು	ವಚನ
ಕೈಲಾಸಪುರಕೆಂದು ದಂಡು ದಾಳಿ ಕಾಣಿರೋ ‖ಪ‖	ವೀರಧೀರರುಗಳೆಲ್ಲ ಕೈಲಾಸಪುರಕ್ಕೆ ದಾಳಿಯು ದಂಡು ಕಾಣಿರಿ
ಅತಿರಥ ಮಹಾರಥರೆಲ್ಲಾ ನೀವಾಯುತವಾಗಿರೋ ! (೧)	ಸುತ್ತಿಮುತ್ತಿ ಪರಬ್ರಹ್ಮವೆಂಬ ಕೋಂಟೆಯು ಕೊಳ್ಳಿರಿ
ವೀರರು ಧೀರರು ಕಲಿಗಳು ಸಮತೆಯು ಕೈದುವ ಕೊಳ್ಳಿರೋ (೨)	ಸಮತೆ ಸೈರಣೆ ಸಮಾಧಾನವೆಂಬ ಕೈದುವ ಕೊಳ್ಳಿರಿ
ಕಾಲಾಳ್ಗಳು ಮೇಲಾಳ್ಗಳೆಲ್ಲ ಕವಿಯಿರೋ ಮುಂದಕ್ಕೆ (೩)	ಅತಿರಥ ಮಹಾರಥರೆಲ್ಲರೂ ಆಯುತವಾಗಿರಿ
ಸುತ್ತಿಮುತ್ತಿ ಪರತತ್ವದ ಕೋಟೆಯು ಮುತ್ತಿಕೊಳ್ಳಿರೋ (೪)	ನಮ್ಮ ಕಪಿಲಸಿದ್ಧ ಮಲ್ಲಿನಾಥನೆಂಬ ಶಿವಲಿಂಗವನೊಡಗೂಡಿಕೊಳ್ಳಿರಿ
ನಮ್ಮ ಕಪಿಲ ಸಿದ್ಧ ಮಲ್ಲೇಶ್ವ- ರಯ್ಯನ ಬಿಗಿ ಬಿಗಿದಪ್ಪಿಕೊಳ್ಳಿರೊ !	

ಇಂತಹ ಸ್ಪಷ್ಟವಾದ ಹತ್ತಾರು ಉದಾಹರಣೆಗಳು ಉಂಟು. ಈ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ. ಗ್ರಂಥ ಸಂಪಾದನೆಯೆಂಬುದು ಬೆಳೆಯುವ ಶಾಸ್ತ್ರವೆಂಬುದು ಸ್ಪಷ್ಟವಾಗುತ್ತದೆ.

ನಮಗೆ ಒಂದು ಕೃತಿಯ ಹಸ್ತಪ್ರತಿಗಳಲ್ಲಿ ಕಂಡುಬರುವ ಪಾಠಾಂತರಗಳಲ್ಲಿ ಯಾವುವನ್ನು ಸ್ವೀಕರಿಸಬೇಕೆಂಬುದು ಯಾದೃಚ್ಛಿಕವಾಗಿರುವುದಿಲ್ಲ (arbitrary). ಅದಕ್ಕೆ ಬೇರೆ ಆಧಾರಗಳಿರಬೇಕು. ಉದಾಹರಣೆಗೆ, ಟಿ. ಎಸ್. ವೆಂಕಣ್ಣಯ್ಯನವರು ಸಂಪಾದಿಸಿದ ಬಸವರಾಜದೇವರ ರಗಳೆಯಲ್ಲಿ ಕಂಬಳಿ ನಾಗಿದೇವನ ಹೆಸರು ಬರುತ್ತದೆ. 'ಕಂಬಳಿ' ಎಂಬುದಕ್ಕೆ 'ಸಂಬೋಳಿ' ಎಂದಿರುವ ಪಾಠವನ್ನು ಸಂಪಾದಕರು ಕೆಳಗೆ ಕೊಟ್ಟಿದ್ದಾರೆ. ಹರಿಜನರನ್ನು ಹಿಂದೆ 'ಸಂಬೋಳಿ'ಗಳೆಂದು ಕರೆಯುತ್ತಿದ್ದರು; ಏಕೆಂದರೆ ಅವರು ಊರೊಳಗೆ ಬರುವಾಗ ಕೋಲು ಕುಟ್ಟುತ್ತ 'ಸಂಬೋಳಿ ಸಂಬೋಳಿ' ಎಂದು ಕೂಗಬೇಕಿತ್ತು. ತಮ್ಮ ಬರವನ್ನು ಅವರು ಘೋಷಿಸುವುದ

ರಿಂದ ಬೇರೆಯುವರು ದೂರ ಹೋಗುವುದಕ್ಕೆ ಸೂಚನೆ ಕೊಡುವುದು ಅವರ ಕರ್ತವ್ಯವಾಗಿತ್ತು. ಬಸವಪುರಾಣದ ಪ್ರಕಾರ, ಕೆಲವರು ಸಂಪ್ರದಾಯಪ್ರಿಯರು ಬಿಜ್ಜಳನ ಬಳಿ ಹೋಗಿ ಬಸವನ ಮೇಲೆ ಆಕ್ಷೇಪಣೆ ಹೊರಿಸುವಾಗ, ಆತನ ಸಂಪರ್ಕದಿಂದಾಗಿ ನಾಗಿಮಯ್ಯ ಈಗ 'ಸಂಬೋಳಿ' ಎಂದು ಕೂಗುವುದನ್ನು ನಿಲ್ಲಿಸಿದ್ದಾನೆ ಎನ್ನುತ್ತಾರೆ. ಆದ್ದರಿಂದ 'ಸಂಬೋಳಿ' ಎಂಬುದು ಕವಿಪಾಠವೆಂಬುದು ದೃಢವಾಗುತ್ತದೆ. ಅದು ಅರ್ಥವಾಗದೆ ಅದು 'ಕಂಬಳಿ ನಾಗಿದೇವ' ಎಂದು ಯಾರೋ ತಿದ್ದಿಬಿಟ್ಟರು.

ಒಂದು ಕೃತಿಯ ಯಾವುದೋ ಪಾಠ ನಿರ್ಣಯಕ್ಕೆ ಇನ್ನೊಂದು ಕೃತಿಯಿಂದ ಸಹಾಯವಾಗಬಹುದು. ಉದಾಹರಣೆಗೆ, ಎಳಂದೂರು ಹರೀಶ್ವರನ ಪ್ರಭುದೇವರ ಪುರಾಣದಲ್ಲಿ ಬರುವ 'ಗಾನವಾಸ' ಎಂಬುದು 'ನಾಗವಾಸ'ವಾಗಿರಬೇಕು; ಏಕೆಂದರೆ ಹರಿಹರ ಮುಂತಾದವರಲ್ಲಿ ಬರುವ 'ನಾಗವಾಸ'ವು ದೇವಾಲಯಕ್ಕೆ ಸಂಬಂಧಿಸಿದ ದೇವದಾಸಿಯರ ವರ್ಗವನ್ನು ಸೂಚಿಸುತ್ತದೆ. ದಾಸರ ಅನೇಕ ಕೃತಿಗಳ ಪಾಠವು ವಚನಗಳಿಂದ ಪರಿಷ್ಕೃತವಾಗುತ್ತದೆ. ಉದಾಹರಣೆಗೆ ಪುರಂದರದಾಸರ ಉಗಾಭೋಗವೊಂದು ಬಸವಣ್ಣನವರ ವಚನವೊಂದರ ಆಧಾರದಿಂದ ರಚಿತವಾದದ್ದೆಂಬುದು ಸ್ಪಷ್ಟ.

ಯಾರು ಮುನಿದು ನಮ್ಮನೇನು ಮಾಡುವರಯ್ಯ
ಯಾರು ಒಲಿದು ನಮಗೇನು ಕೊಡುವರಯ್ಯ
ಕೊಡಬೇಡ ನಮ್ಮ ಕುನ್ನಿಗೆ ಕಾಸನು
ಈಯಲು ಬೇಡ ನಮ್ಮ ಶುನಕಗೆ ತಳಗಿಯ
ಆನೆಯ ಮೇಲೆ ಪೋಪಗೆ ಶ್ವಾನ ಮುಟ್ಟಬಲ್ಲುದೆ
ನಮಗೆ ಶ್ರೀ ಪುರಂದರವಿಠಲನೆ ಸಾಕು.

ಇದರ ಜೊತೆಗೆ ಬಸವಣ್ಣನವರ ಕೆಳಗಿನ ವಚನವನ್ನು ಹೋಲಿಸಿ ;

ಆರು ಮುನಿದು ನಮ್ಮನೇನು ಮಾಡುವರು !
ಊರು ಮುನಿದು ನಮ್ಮನೆಂತು ಮಾಡುವುದು !
ನಮ್ಮ ಕುನ್ನಿಗೆ ಕೂಸ ಕೊಡಬೇಡ !
ನಮ್ಮ ಸೊಣಗಂಗೆ ತಳಿಗೆಯನಿಕ್ಕಬೇಡ !
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ !
ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ !

ಪುರಂದರರ 'ಕೊಡಬೇಡ ನಮ್ಮ ಶುನಕಗೆ ಕಾಸನು' ಎಂಬಲ್ಲಿ 'ಕಾಸನು' ಎಂಬ ಪದದ ಬದಲು 'ಕೂಸನು' ಎಂದಿಟ್ಟುಕೊಳ್ಳಬೇಕೆಂದು ಸ್ಪಷ್ಟವಾಗಿದೆ.

ಯಾವುದೇ ಪಾಠಾಂತರವೂ ಸಿಗದೆ, ಅರ್ಥವಾಗದೆ ಇರುವಾಗ ಊಹಾತ್ಮಕ ಪರಿಷ್ಕರಣಗಳನ್ನು ಮಾಡುತ್ತಾರೆ. ಅದು ಅತಿ ಎಚ್ಚರಿಕೆಯಿಂದ ಮಾಡಬೇಕಾದ ಕಾರ್ಯ.

ಗ್ರಂಥ ಸಂಪಾದನೆ ನಮ್ಮ ಹಿಂದಿನ ಸಾಹಿತ್ಯದ ಅಧ್ಯಯನಕ್ಕೆ ಅತ್ಯಗತ್ಯವಾದ ಶಾಸ್ತ್ರಭಾಗ. ಅಲ್ಲಿ ಬೌದ್ಧಿಕ ಕಸರತ್ತು ಉಂಟು, ಅಭಿರುಚಿಯಿರುವವರಿಗೆ ಬೌದ್ಧಿಕ ತೃಪ್ತಿಯೂ ಉಂಟು. ನಮ್ಮ ಪ್ರಾಚೀನ ಲಿಖಿತ ಗ್ರಂಥಗಳ ಪರಂಪರೆಯನ್ನು ಕಾಯ್ದುಕೊಂಡು ಬರುವುದರ ದೃಷ್ಟಿಯಿಂದ, ಪ್ರಾಚೀನ ಗ್ರಂಥಗಳನ್ನು ಅವುಗಳ ಮೂಲ ರೂಪದಲ್ಲೇ ಅಧ್ಯಯನ ಮಾಡುವ ಅಗತ್ಯದ ದೃಷ್ಟಿಯಿಂದ ನಮ್ಮ ಗ್ರಂಥಗಳು ಶಾಸ್ತ್ರೀಯವಾಗಿ ಸಂಪಾದಿತವಾಗಿ ಪ್ರಕಟವಾಗುವ ಅಗತ್ಯವಿದೆ. ಈ ಶಾಸ್ತ್ರಕ್ಕೆ ಬುದ್ಧಿಯನ್ನು ಪಳಗಿಸಿಕೊಳ್ಳಬೇಕು ; ಅಷ್ಟೆ. ಮೂಲಪಾಠದಷ್ಟೇ ಎಷ್ಟೋ ಸಾರಿ ಪಾಠಾಂತರಗಳೂ ನಮಗೆ ಕವಿಯಾದ ಮೇಲೆ ಬಂದ ಸಹೃದಯರ, ಓದುಗರ ಅಭಿರುಚಿ, ದೃಷ್ಟಿಗಳನ್ನು ತಿಳಿಸುವುದರಿಂದ ಅವುಗಳ ಅಧ್ಯಯನವೂ ನಮಗೆ ಮುಖ್ಯವಾಗುತ್ತದೆ. ವಿಶ್ವವಿದ್ಯಾನಿಲಯಗಳು, ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳು ಈ ಕ್ಷೇತ್ರದಲ್ಲಿ ಆಗಲೇ ಕೆಲಸ ಮಾಡಿವೆ. ಅಮೂಲ್ಯ ಗ್ರಂಥಗಳನ್ನು ಹೊರತಂದಿವೆ. ನಮ್ಮ ಮುಂದಿರುವ ಪ್ರಶ್ನೆ—ಈ ಶಾಸ್ತ್ರವನ್ನು ಉಳಿಸಿ, ಬೆಳೆಸುವಂತಹ ಉತ್ಸಾಹೀ ವಿದ್ವಾಂಸರ ನಿರ್ಮಾಣ. ಅಂತಹ ಕಾರ್ಯದಲ್ಲಿ ಪರಿಷತ್ತು ಇನ್ನೂ ಹೆಚ್ಚಿನ ಸಕ್ರಿಯ ಪಾತ್ರವನ್ನು ವಹಿಸಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ.

ಸಿದ್ದಾನೆ; ಹದಿನೇಳನೆಯ ಶತಮಾನದ ಉದ್ದಗಲಕ್ಕೂ ವಿಶಾಲವಾಗಿ ಬೆಳೆದು ನಿಂತ ಬೃಹದ್ವಿಟಪಿಯಾಗಿದ್ದಾನೆ.

ಕವಿ ಕನ್ನಡದಲ್ಲಿ 'ರಾಜಶೇಖರ ವಿಳಾಸ ಮಹಾಕೃತಿ'ಯನ್ನು 'ವೃಷಾಧಿರಾಜವಿಜಯ ಸತ್ಪ್ರಬಂಧ'[4]ವನ್ನೂ 'ಶಬರಶಂಕರವಿಳಾಸ ಖಂಡಕಾವ್ಯ'ವನ್ನೂ ರಚಿಸಿದ್ದಾನೆ. 'ಸಂಸ್ಕೃತೋಕ್ತಿಯಲ್ಲಿ ಭುವನವಿನುತ್ಯವಾಗೆ 'ಕವಿಕರ್ಣ ರಸಾಯನವೆಂಬ ಕಬ್ಬ'ವನ್ನೂ[5] ಒಡರ್ಚಿದ್ದಾನೆ. ಇನ್ನುಳಿದ ಹತ್ತೊಂಬತ್ತು ಚಿಕ್ಕ ಪುಟ್ಟ ಕಾವ್ಯಗಳೆಲ್ಲ ಪ್ರಾಯಃ ಸಂಸ್ಕೃತ ಭಾಷೆಯಲ್ಲಿ ರಚಿಸಿರುವ ಸ್ತೋತ್ರ ಸಾಹಿತ್ಯ ವೆನಿಸಿವೆ. ಆದರೆ ಅಪವಾದವೋ ಎಂಬಂತೆ ೧೧೦ ವಾಕ್ಯಗಳುಳ್ಳ ಷಡಕ್ಷರ ಮಂತ್ರ ಸ್ತೋತ್ರವೆಂಬ ಚಿಕ್ಕ ಕಾವ್ಯ ಮಾತ್ರ ಕನ್ನಡದಲ್ಲಿದೆ * ಈ ಸ್ತೋತ್ರ ಸಾಹಿತ್ಯವನ್ನೆಲ್ಲಾ ಕವಿ ಸಾಮಾನ್ಯವಾಗಿ ಅಷ್ಟಕ, ದಂಡಕ, ಉದಾಹರಣ ಗದ್ಯ, ಸ್ತವ, ಸ್ತವನ, ಶಿವಾಧಿಕ್ಯ, ಭಕ್ತ್ಯಾಧಿಕ್ಯ—ಇತ್ಯಾದಿ ಹೆಸರುಗಳಿಂದ ಕರೆದಿದ್ದಾನೆ. ಬಹುಶಃ ಈ ಸ್ತೋತ್ರ ಸಾಹಿತ್ಯಕ್ಕೆಲ್ಲ ಕವಿಯ ಅತ್ಯಂತ ಗೌರವಕ್ಕೆ ಪಾತ್ರನಾದ ಪಾಲ್ಕುರಿಕೆ ಸೋಮನಾಥರ ಸ್ತೋತ್ರ ಸಾಹಿತ್ಯವೇ ಪ್ರೇರಕ ಸಾಮಗ್ರಿಯಾಗಿರಬಹುದೆಂದು ತೋರುತ್ತದೆ. ಕನ್ನಡ ಕವಿಗಳಾರೂ ಕೈಯಿಕ್ಕದ 'ಉದಾಹರಣ ಗದ್ಯ' ಪ್ರಭೇದ ಷಡಕ್ಷರದೇವನಿಂದ ಹೇಳಲ್ಪಟ್ಟಿದೆ. ಕೇದಿಯಲ್ಲಿ ರಚಿತವಾದುದೆಂದು ಕವಿ ಹೇಳಿಕೊಳ್ಳುವ ಈ ವೀರಭದ್ರೋದಾಹರಣ ಗದ್ಯವು ಪಾಲ್ಕುರಿಕೆಯ ಸೋಮನಾಥರ ಬಸವೋದಾಹರಣ ಗದ್ಯದ ಮಾದರಿಯಲ್ಲೇ ಇದೆ. ಪ್ರಕೃತ ಷಡಕ್ಷರದೇವನ ಸಮಗ್ರ ಸ್ತೋತ್ರಸಾಹಿತ್ಯದ ಸ್ಥೂಲವಾದ ಪರಿಚಯವನ್ನು ಈ ಲೇಖನದಲ್ಲಿ ಮಾಡಿಕೊಡುವ ಪ್ರಯತ್ನ ಮಾಡಲಾಗಿದೆ. ಏಕೆಂದರೆ ಬಹುಜನಗಳಿಗೆ ಕರ್ನಾಟಕ ಮಹಾಕವಿಯೊರ್ವನ ಈ ಲಘು ಕೃತಿಗಳ ಪರಿಚಯ ಅಷ್ಟಾಗಿ ಇಲ್ಲವೆಂದು ಭಾವಿಸಿದ್ದೇನೆ. ಅಂತೆಯೇ ಈ ಪ್ರಯತ್ನ.

೧ ವೀರಭದ್ರ ದಂಡಕ :

ದಂಡಕ ಸಾಹಿತ್ಯದ ಬಗೆಗೆ ಕೆಲವು ಮಾತುಗಳು :

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ 'ದಂಡಕ' ಎಂಬ ಹೆಸರಿನ ಸಾಹಿತ್ಯ ಪ್ರಕಾರದ ಬೆಳೆ ಹುಲುಸಾಗಿ ಬೆಳೆದುಬಂದಿಲ್ಲ. ಇದು ಸಂಸ್ಕೃತ ಮತ್ತು ತೆಲುಗು ಕವಿಗಳಿಂದ

---

4 ಅದೇ ೫-೬೩.

5 ಅದೇ.

* ಕವಿಚರಿತಕಾರರು ೧೦೫ ವಾಕ್ಯಗಳುಳ್ಳದ್ದೆಂದಿದ್ದಾರೆ, ಆದರೆ ಅದು ೧೧೦ ಸಾಲುಗಳುಳ್ಳದ್ದಾಗಿದೆ. ಕ. ಚ. II ಪರಿಷ್ಕೃತ ಮುದ್ರಣ—೧೯೭೩.

ವಿಶೇಷವಾಗಿ ರಚಿಸಲ್ಪಟ್ಟಿರುವುದು ಕಂಡುಬರುವುದು. ದಂಡಕದಲ್ಲಿ ಅನೇಕ ಪ್ರಭೇದಗಳಿದ್ದು ಅವನ್ನೆಲ್ಲ ಕನ್ನಡ ಕವಿಗಳು ಬಳಸಿಲ್ಲ. ಕೆಲವರು ಪ್ರಾಸಂಗಿಕವಾಗಿ ದಂಡಕವನ್ನು ಗದ್ಯದ ಬಳಕೆಯಲ್ಲಿ ತಂದಿರುವುದುಂಟು.[6] ಕನ್ನಡ ಕವಿಗಳು 'ದಂಡಕ' ಎಂದು ಹೆಸರಿಸಿ ಆ ಸಾಹಿತ್ಯ ಪ್ರಭೇದದಲ್ಲಿ ಕಾವ್ಯವನ್ನು ಬರೆಯದಿದ್ದರೂ ನಾಗವರ್ಮನು ಛಂದೋಂಬುಧಿಯಲ್ಲಿ "ರಗಳೆಯ ಲಕ್ಷಣವನ್ನು ದಂಡಕದ ಜೊತೆಯಲ್ಲೇ ಕೊಟ್ಟಿರುವುದು ಮಾತ್ರವಲ್ಲ 'ರಗಳೆಯ ಲಕ್ಷಣಂ ಅಜು (ಅಜುಂ) ದಂಡಕಂಗಳಿಂದ(ತ)ಕ್ಕುಂ' ಎಂದು ಹೇಳಿಯೇ ತೋರಿಸಿದ್ದಾನೆ.... ನಾಗವರ್ಮನು ಹೇಳುವ ಪ್ರಕಾರ ದಂಡಕದ ಲಕ್ಷಣವೇ ರಗಳೆಗೂ ಸಲ್ಲುವುದು; ಎಂದರೆ 'ರಘಟಾ' ಎಂಬುದು ದಂಡಕಕ್ಕೆ ಇದ್ದ ಇನ್ನೊಂದು ಹೆಸರು ಎಂದಾಯಿತಲ್ಲವೆ? ಆದರೆ ಅವನು ವಾಚ್ಯವಾಗಿ ಹಾಗೆ ಹೇಳಲಿಲ್ಲ. ಮತ್ತು ರಗಳೆಯ ಲಕ್ಷಣವೆಂದು ಈ ಕಂದ ಪದ್ಯವನ್ನು ಬೇರೆ ಕೊಟ್ಟಿದ್ದಾನೆ—

'ಗಣನಿಯಮ ವಿಪರ್ಯಾಸ (ಯ) ದೊ|
ಳೆಣೆವಡೆದೊಳ್ಪಿಸೆಯೆ ಮಾತ್ರೆ ಸಮನಾಗಿ ಗುಣಾ- |
ಗ್ರಣಿಯ ಮತದಿಂದೆ ತಾಳದ |
ಗಣನೆಗೊಡಂಬಟ್ಟೊಡದುವೆ ರಘಟಾಬಂಧಂ ||'

-ಗಣನಿಯಮಕ್ಕೆ ಬದಲಾಗಿ ಅದಕ್ಕೆ ಎಣೆಯಾಗುವ ಮಾತ್ರೆ ಅಥವಾ ಮಾತ್ರಾ ಗಣಗಳಿದ್ದು ತಾಳಕ್ಕೆ ಹೊಂದಿದರೆ ಕನ್ನಡದ ರಗಳೆಯಾಗುವುದು ಎಂದು ಮೇಲಿನ ಪದ್ಯದ ತಾತ್ಪರ್ಯವಾಗಿದೆ"[7] ಆದ್ದರಿಂದ ಸಂಸ್ಕೃತದಲ್ಲಿ ನಿಯತಗತಿಯ ಅಕ್ಷರ ಗಣ ನಿಯಮದಿಂದ ಹೇಳುವ ದಂಡಕ ಸಾಹಿತ್ಯ ಪ್ರಕಾರದ ತೇಜಸ್ಸು ಓಜಸ್ಸುಗಳನ್ನು

---

6 ಸೋಮರಾಜ ವಿರಚಿತ ಉದ್ಭಟಕಾವ್ಯದ ನಾಲ್ಕನೆಯ ಅಧ್ಯಾಯದ ಹತ್ತನೆಯ ಪದ್ಯದ ನಂತರ ಬರುವ 'ಶ್ರೀ ಹೇಮಕೂಟೋನ್ನತಕ್ಷೋಣಿ......' ಎಂದು ಪ್ರಾರಂಭವಾಗುವ ಸುಮಾರು ೪೦ ಸಾಲುಗಳ ದಂಡಕ ಭಾಗ ಮಾತ್ರ ನಮ್ಮ ಕಣ್ಣಿಗೆ ಬಿದ್ದಿದೆ. ಈ ಗದ್ಯ ಭಾಗವು ಕೊನೆಯವರೆಗೆ ಅಂತ್ಯ ಲಘು (– – ∪) ವುಳ್ಳ ತಗಣದ ಓಟದಲ್ಲಿ ಸಾಗಿದೆ. ಇದು ಸಾಮಾನ್ಯ ಗದ್ಯವೇ ಆಗಿದ್ದರೆ ಹೀಗೆ ನಿಯತ ಗತಿಯ ಗಣವಿದ್ದು ಕವಿ ಹೇಳುತ್ತಿದ್ದಿಲ್ಲ. ಆದರೆ ಇದನ್ನು ದಂಡಕ ಎಂದು ಹೇಳಲೂ ಒಂದು ಕೊರತೆಯಿದೆ. ದಂಡಕ ಪ್ರಾರಂಭದಲ್ಲಿ ಆರು ಲಘುಗಳಿಂದ ಪ್ರಾರಂಭವಾಗಬೇಕು. ಇಲ್ಲಿ ಆರು ಲಘುಗಳಿಲ್ಲ. ಮೊದಲಿನಿಂದಲೇ ತಗಣ (– – ∪) ದ ಓಟದಲ್ಲಿ ಆ ಗದ್ಯ ಸಾಗಿರುವುದರಿಂದ ಅದನ್ನು ದಂಡಕ ಎಂದು ಹೇಳುವಲ್ಲಿಯೂ ಅನುಮಾನ ಬರುವುದು. ಕವಿಯೂ ದಂಡಕ ಎಂದು ಅದಕ್ಕೆ ಹೆಸರಿಸಿ ಹೇಳಿದಂತೆ ಇಲ್ಲ. ಹಾಗಾದರೆ ನಿಯತ ಗತಿಯ ಗಣನಿಯಮದಿಂದ ಕೂಡಿದ ಆ ಗದ್ಯಪ್ರಭೇದ ಯಾವುದು?

7 ಕುಕ್ಕಿಲ ಕೃಷ್ಣಭಟ್ಟ : ಛಂದೋಂಬುಧಿ, ಪೀಠಿಕೆ ಪು xxxi ಪ್ರ. ಮು ೧೯೭೫.

ಮಾತ್ರಾಗಣ ನಿಯಮದಿಂದ ಕೂಡಿ, ಇಂತಿಷ್ಟೇ ಸಾಲುಗಳೆಂಬ ನಿಯಮವಿಲ್ಲದೆ ಕನ್ನಡ ಕವಿಗಳಿಗೆ ಪ್ರಿಯವಾದ ಪ್ರಾಸವನ್ನು ಕೈಬಿಡದೆ ಅದನ್ನು ಎರಡೆರಡು ಸಾಲುಗಳಿಗೆ ತಪ್ಪದೆ ಪಾಲಿಸಿ, ಉತ್ಸಾಹ ಲಲಿತ ಮಂದಾನಿಲ ರಗಳೆಗಳಲ್ಲಿ ಸಾಧಿಸಿಕೊಂಡಿದ್ದಾರೆಂದು ಹೇಳಬಹುದಾಗಿದೆ. ಆದರೆ ಅದಕ್ಕೆ ದಂಡಕ ಎಂದು ಎಲ್ಲೂ ಕರೆದುದಿಲ್ಲ. ಆದ್ದರಿಂದ ನಾಗವರ್ಮನು ಛಂದೋಂಬುಧಿಯಲ್ಲಿ ಹೇಳುವ 'ರಗಳೆಯ ಲಕ್ಷಣಂ ದಂಡಕಗಳಿಂದಕ್ಕುಂ'[8] ಎಂದು ಇದೇ ಕಾರಣಕ್ಕಾಗಿ ಹೇಳಿರಬೇಕು. ಆದರೆ ದಂಡಕದಲ್ಲಿ ರಗಣ (– ᑌ –) ವು ನಿಯತಗತಿಯಲ್ಲಿ ಬರುವ ಮುಖ್ಯ ಗಣವಾಗಿದೆ.[9] ರಗಣದಲ್ಲಿ ಐದು ಮಾತ್ರೆಗಳು ಇವೆ. ಇದರಂತೆ ಐದು ಮಾತ್ರೆ ಬರುವ ತಗಣ (– – ᑌ) ವೂ ದಂಡಕದಲ್ಲಿ ಪ್ರಯೋಗವಾಗಿರುವ ಗಣವಾಗಿದೆ.[10] ಇವೆಲ್ಲ ತಾಳಕ್ಕೆ ಹೊಂದಿಕೆಯಾಗುವ ಗಣಗಳಾಗಿವೆ. ರಗಣದ ತಾಳ ಸಂಗೀತ ಶಾಸ್ತ್ರದಲ್ಲಿ ಮುಖ್ಯವಾದುದು. ಸಂಸ್ಕೃತದ 'ರಘಟಾ' ಶಬ್ದವೇ ಕನ್ನಡದಲ್ಲಿ ರಗಳೆ ಆಗಿದೆ. ಸಂಸ್ಕೃತದ ಈ 'ರಘಟಾ' ಪ್ರಕಾರವೇ ದಂಡಕವಾಗಿ ಪೂರ್ವದಲ್ಲಿ ಬಳಸಲ್ಪಡುತ್ತಿತ್ತೆಂದೂ ವಿದ್ವಾಂಸರ ಅಭಿಪ್ರಾಯವಾಗಿದೆ.[11] ದಂಡಕಗಳು ಅನೇಕ ಪ್ರಭೇದಗಳಿಂದ ಕೂಡಿವೆ.

"ಛಂದಶ್ಶಾಸ್ತ್ರ ಗ್ರಂಥದಲ್ಲಿ ಸಾಮಾನ್ಯವಾಗಿ (ಪ್ರತಿ ಸಾಲಿನಲ್ಲಿ) ೨೬ ಅಕ್ಷರಗಳಿಗಿಂತಲೂ ಹೆಚ್ಚು ಅಕ್ಷರಗಳಿರುವ ಒಂದೆರಡು ವೃತ್ತಗಳಿಗೆ ಮಾಲಾವೃತ್ತಗಳೆಂಬ ಲಕ್ಷಣ ಕೊಡಲಾಗಿದೆಯಷ್ಟೆ. ಇವು ಪೂರ್ವದಲ್ಲಿ ಇದ್ದಿಲ್ಲವೆಂದೂ, ೨೬ ಅಕ್ಷರಗಳಿಗಿಂತ ಹೆಚ್ಚಿನ ವೃತ್ತಗಳೆಲ್ಲ ದಂಡಕಗಳೇ ಆಗಿದ್ದವೆಂದೂ ಭರತನು ಹೇಳುತ್ತಾನೆ—

'ದಂಡಕಂ ನಾಮವಿಜ್ಞೇಯಂ ಷಡ್ವಿಂಶಾದಧಿಕಾಕ್ಷರಂ |
ವೃತ್ತಂ ಮಾಲಾದಿಕಂ ತಸ್ಮಾನ್ನೋಕ್ತಂ ಬೌದೌ ಗುಹಾದಿನಾ ||
(ಭ. ನಾ. ೧೪)'

---

8 ಅದೇ ಪು. xxxii. (ಛಂದೋಂಬುಧಿ ತ್ರ. ಅಧಿಕಾರ. ೨೧ನೆಯ ಸೂತ್ರದ ಮುಂದಿನ ವಚನ).

9 "ದಂಡಕೋ 'ನೌರಃ' 'ರೇಫೋಪಲಕ್ಷಿತಾಕ್ಷರತ್ರಯಾಣಾಂವೃದ್ಧಿಃ' (ಪಿಂ. ಸೂ ೭-೩); ಆದ್ದರಿಂದ ದಂಡಕದಲ್ಲಿ ನಿರಂತರವಾಗಿ ಬರುವ ರಗಣಕ್ಕೆ ಸರಿಯಾದ ಮಾತ್ರಾಗಣಗಳು ಎಂದರೆ ಬೇರೆ ಪಂಚಮಾತ್ರಾಗಣಗಳು ಬರುವುದೇ ರಗಳೆಯ ಲಕ್ಷಣವೆಂದು ತಿಳಿಯಬೇಕು." —ಅದೇ.

10 ಯಗಣ (ᑌ – –) ವೂ ಕೂಡ ಐದು ಮಾತ್ರೆಯ ಗಣವಾಗಿದೆ. ಇದನ್ನೂ ದಂಡಕದಲ್ಲಿ ಬಳಸಬಹುದೆಂದು ತೋರುತ್ತದೆ. ಆ ಉದಾಹರಣೆಗಳು ನಮಗೆ ತೋರಿಬಂದಿಲ್ಲ.

11 ಕುಕ್ಕಿಲ ಕೃಷ್ಣಭಟ್ಟ : ಛಂದೋಂಬುಧಿ, ಪೀಠಿಕೆ ಪು. xxxiii.

ವೃತ್ತರತ್ನಾಕರದ ವ್ಯಾಖ್ಯಾನದಲ್ಲಿ ಅದನ್ನೇ ದಂಡಕ ಸಾಮಾನ್ಯ ಲಕ್ಷಣವಾಗಿ—

'ಯತ್ಕಿಂಚಿದ್ವ್ಯತೀಛಂದಃ ಷಡ್ವಿಂಶಾದಧಿಕಾಕ್ಷರಂ |
ಶೇಷಜಾತ್ಯಾದಿಕಂ ಮುಕ್ತ್ವಾ ತತ್ಸರ್ವಂ ದಂಡಕಾನಿಹ ||'

—ಎಂದು ಕೊಡಲಾಗಿದೆ.[12] ಒಟ್ಟಿನಲ್ಲಿ ಉತ್ಕೃತ್ಯುತ್ಕೃತ್ಯಾದಿ—ಇಪ್ಪತ್ತಾರು ಅಕ್ಷರಗಳುಳ್ಳ ಅನಂತ ಛಂದೋ ಜಾತಿಗಳನ್ನುಳಿದು ನಿಯತಗತಿಯ ಒಂದೇ ರೀತಿಯ ಗಣದ ಓಟದಲ್ಲಿ ತಾಲಬದ್ಧವಾಗಿ ಹೇಳಲ್ಪಡುವ ಗದ್ಯ ಭಾಗವೇ ದಂಡಕವೆಂದು ಸಾಮಾನ್ಯವಾಗಿ ಹೇಳಬಹುದು. ಆದರೆ ಬರುವ ಆ ಅಕ್ಷರ ಗಣವು ಸಾಮಾನ್ಯವಾಗಿ ಐದು ಮಾತ್ರೆಯದಾಗಿರಬೇಕು. ಐದು ಮಾತ್ರೆ ಬರುವ ಗಣಗಳು ರ ತ ಯ ಗಣಗಳು. ಈ ಬಗೆಗೆ ಕುಕ್ಕಿಲ ಕೃಷ್ಣಭಟ್ಟರು ತಾವು ಸಂಪಾದಿಸಿರುವ ಛಂದೋಂಬುಧಿ (ಪ್ರ. ಮು. ೧೯೭೪) ಯ ಪೀಠಿಕೆಯಲ್ಲಿ ಚರ್ಚಿಸಿರುವ ವಿಷಯ ತರ್ಕಬದ್ಧವಾಗಿದೆ ಎನ್ನಬಹುದಾಗಿದೆ. ಕನ್ನಡದಲ್ಲಿ ಈ ಪ್ರಯೋಗಗಳು ತೀರಾ ವಿರಳವಾಗಿರುವುದರಿಂದ ಅವುಗಳ ಬಗೆಗೆ ನಿಖರವಾದ ಲಕ್ಷಣಗಳ ಅಭಾವವಾಗಿದೆ. ಅಲ್ಲದೆ ಛಂದೋಂಬುಧಿಯಲ್ಲಿ ಹೇಳಿರುವ ಲಕ್ಷಣಗಳೂ ಲಕ್ಷ್ಯಗಳೂ ಅಷ್ಟೊಂದು ಸರಿಯಾಗಿ ಅರ್ಥವಾಗದಿರುವುದೂ ಒಂದು ಕಾರಣ.

ಪ್ರಕೃತ ಷಡಕ್ಷರದೇವನು ವೀರಭದ್ರ ದಂಡಕವೆಂದು ಸ್ವತಂತ್ರವಾಗಿ ರಚಿಸಿರುವ ಚಿಕ್ಕ ಸ್ತೋತ್ರ ಸಾಹಿತ್ಯವು ಹೆಸರೇ ಹೇಳುವಂತೆ ವೀರಭದ್ರ ಸ್ತುತಿರೂಪವಾಗಿದೆ. ಪ್ರಾರಂಭದಲ್ಲಿ ಆರು ಲಘುಗಳು ಮೊದಲು ಬರಬೇಕೆಂಬುದು ದಂಡಕದ ನಿಯಮ.[13] ಅದರಂತೆ ಷಡಕ್ಷರದೇವನ ವೀರಭದ್ರ ದಂಡಕದಲ್ಲಿ ಮೊದಲು ಆರು ಲಘುಗಳು 'ಜಯ ಜಯ ಜಗದಾಧಾರ........' ಹೀಗೆ ಬಂದು ಮುಂದೆ 'ದಾಧಾರ'ದಿಂದ ತಗಣದ ಓಟ ಕೊನೆಯವರೆಗೆ ಸಾಗಿದೆ.[14]

---

12 ಅದೇ ಪು. xxxiv ಮತ್ತು xxxv.

13 ಈ ನಿಯಮವು ಟಿಪ್ಪಣಿ ೯ರಲ್ಲಿ ಹೇಳಿರುವ ಸೋಮರಾಜನ ಉದ್ಭಟ ಕಾವ್ಯದಲ್ಲಿನ ದಂಡಕದಲ್ಲಿ ಇಲ್ಲ.

14 ಬೆಂಗಳೂರು ವಿ. ವಿ. ನಿಲಯದ ಹಸ್ತಪ್ರತಿ ವಿಭಾಗದಲ್ಲಿನ 'ವೀರಭದ್ರದಂಡಕ' ವೆಂಬ ೧೦೨೧/೩ನೆಯ ಸಂಖ್ಯೆಯ ಹಸ್ತಪ್ರತಿಯೊಂದನ್ನು ಅದರ ಮುಖ್ಯಾಧಿಕಾರಿಗಳಾದ ಶ್ರೀ ಎಸ್. ಶಿವಣ್ಣನವರ ಸೌಜನ್ಯದಿಂದ ನೋಡಿದೆನು. ಅದರಲ್ಲಿ 'ಜಯ ಜಯ' ಎಂದು ನಾಲ್ಕು ಲಘುಗಳು ಮೊದಲು ಬಂದಿದ್ದು ಮುಂದೆ ಯಥಾಪ್ರಕಾರ ತಗಣ (– – ᴗ) ದ ಓಟ ಸಾಗಿದೆ. ಬಹುಶಃ ಇದು ಹಸ್ತಪ್ರತಿ ಮಾಡಿರುವವರ ದೋಷವಾಗಿರಬಹುದು.

ಪ್ರಾರಂಭದಲ್ಲಿ ಶರಭಸ್ವಾಳವ ಪಕ್ಷಿರಾಜನನ್ನು ಕುರಿತ ಮಂಗಳ ಶ್ಲೋಕವಿದ್ದು ಅದು ಶರಭಾವತಾರ ಮಾಡಿದ ಶಿವನ ಪರೋಕ್ಷ ಸ್ತೋತ್ರ ಪದ್ಯವೇ ಆಗಿದೆ. ಸ್ರಗ್ಧರಾವೃತ್ತ ಛಂದಸ್ಸಿನಲ್ಲಿರುವ ಆ ಪದ್ಯ ಹೀಗಿದೆ:

ಚಂದ್ರಾರ್ಕಾಗ್ನಿವಹ್ನಿದೃಷ್ಟಿಃ ಕುಲಿಶವರನಖಶ್ಚಂಡುರತ್ಯುಗ್ರಜಿಹ್ವಾ|
ಕಾಳೀ ದುರ್ಗಾಚಪಕ್ಷೌ ಹೃದಯ ಜಠರಗೌ ಭೈರವೋಬಾಡಬಾಗ್ನಿಃ|
ಊರೂಚವ್ಯಾಧಿ ಮೃತ್ಯುಶ್ಶರಭವರಧರಶ್ಚಂಡವಾತಾತಿವೇಗಃ|
ಸಂಹರ್ತಾಸರ್ವಶತ್ರೂನ್ ಸಜಯತುಶರಭಸ್ಸಾಳವಃ ಪಕ್ಷಿರಾಜಃ||

ಅನಂತರ ಐದು ಅನುಷ್ಟುಪ್ ಶ್ಲೋಕಗಳಿಂದ ಶರಭ ಮತ್ತು ವೀರಭದ್ರರ ವರ್ಣನೆ ಹೀಗೆ ಸಾಗುತ್ತದೆ:

ಸಹಸ್ರಬಾಹುರ್ಜಟಿಲ| ಚಂದಾರ್ಕಾಕೃತಶೇಖರಃ|
ಮೃಗಸ್ತ್ವರ್ಧಶರೀರೇಣ| ಪಕ್ಷಾಭ್ಯಾಂಚಂಚುನಾದಿಭಿಃ ||೧||
ಅತಿತೀಕ್ಷ್ಣ ಮಹಾದಂಷ್ಟ್ರೋ| ವಜ್ರತುಲ್ಯನಖಾಯುಧಃ|
ಕಂಠೇಕಾಳೋ ಮಹಾಪುಚ್ಛ| ಶ್ಚತುಷ್ಪದ್ವಹ್ನಿ ಸನ್ನಿಭಃ ||೨||
ಅಧೋಗತ ಚತುಷ್ಪಾದಃ| ಉಪರಿಷ್ಟಾಚ್ಚತುಃಪದಃ|
ಯುಗಾಂತೋದ್ಯತಜೀಮೂತ| ಭೀಮಗಂಭೀರ ನಿಸ್ವನಃ ||೩||
ಸಮಸತ್ವಪ್ರವೃತ್ತಾಗ್ನಿ| ವ್ಯಾವೃತ್ತ ನಯನತ್ರಯಃ|
ಸ್ಪೃಷ್ಟದಂಷ್ಟ್ರಾಧರೋಷ್ಠಶ್ಚ| ಹೂಂಕಾರಮುಖರೋಹರಃ ||೪||
ಜಯಭದ್ರ ಗುಣಾಧಾರ| ಜಯರುದ್ರಗಣಾವೃತ|
ಜಯಶ್ರೀ ವೀರಭದ್ರೇಶ| ಜಯಕಾಳೀ ಮನೋಹರ ||೫||

—ಹೀಗೆ ಶರಭ ವೀರಭದ್ರನನ್ನು ಕುರಿತಾದ ವರ್ಣನೆಯ ನಂತರ ದಂಡಕದ ಧುಮ್ಮಿಕ್ಕುವ ವರ್ಷಾಕಾಲದ ಹಿಮಾಲಯ ಬೆಟ್ಟಗಳಿಂದ ಇಳಿಯುವ ಪ್ರವಾಹ ಸದೃಶ ವಾಗ್ಧಾರೆ ಪ್ರಾರಂಭವಾಗುತ್ತದೆ.

"ಜಯ ಜಯ ಜಗದಾಧಾರ ವಿಸ್ತಾರ ವಿಸ್ತಾರ ರೋಮೋನ್ಮಿಷದ್ಭರ್ಗನಿರ್ಗಚ್ಛ ದೋರುಜ್ವಲ ಜ್ವಾಲಫಾಲಾನಲಾಕ್ಷ ಸ್ಫುರದ್ವಿಸ್ಫುಲಿಂಗಸ್ಫುಟೋದ್ಭೂತ ಜಾತಾದಿ ರೌದ್ರಾಕೃತೇಸ್ಫೀತ ಭೋಗೀಶ್ವರತೇ ಬಾಲಚಂದ್ರ ಪ್ರಭಾಭೀಲ ದಂಷ್ಟ್ರಾದ್ವಯೋ ದ್ಯೋತಿತತೋದ್ಯತ್ಕಪೋಲಸ್ಫುರದ್ಭ್ರೂಕುಟಿಭ್ರಾಜಿನೇತ್ರತ್ರಯಾಂಚದ್ಯುತೇಕ್ಷ್ಮಾಧ್ರ ತೇಜಃಪತೇನೂತ್ನರತ್ನಸ್ಫುರತ್ತೋಮ ಭೀಮಾಹಿಪಗ್ರೈವ ಸುಗ್ರೀವ ಹೃದ್ಯಸ್ಮಣಿ ಪ್ರೋದ್ಯುತಿ ಪ್ರೋಲ್ಲ ಸನ್ಮಾಲಿ ಸಂಬದ್ಧ ಸುಸ್ನಿಗ್ಧ ಪೀಯೂಷ........" ಹೀಗೆಯೇ ಮುಂದೆ ಸಾಗುತ್ತದೆ.

ಸುಮಾರು ಅರ್ಧ ಮುಕ್ಕಾಲು ಗಂಟೆಯಷ್ಟು ಕಾಲ ಪಾರಾಯಣಕ್ಕೆ ಯೋಗ್ಯವಾದ ಈ ಕೃತಿಯು ಅರ್ಥ ಸುಗಮವಾದುದೇನೂ ಅಲ್ಲ. ಅತ್ಯಂತ ಕ್ಲಿಷ್ಟವೂ ದುರಾನ್ವಯವೂ ಆದ ಈ ದಂಡಕ ಕೇವಲ ವಿದ್ವದ್ಗ್ರಾಹ್ಯವಾದುದು. ಕವಿ ತನ್ನ ಪಾಂಡಿತ್ಯದ ಕಸರತ್ತನ್ನೆಲ್ಲ ಇಲ್ಲಿ ಮಾಡಿರುವುದೊಂದು ವಿಶೇಷ ವಿಷಯವೆಂದು ಹೇಳಬಹುದು. ಹೂಮಾಲೆಯನ್ನೆತ್ತಿದಂತೆ ಅಖಂಡ ವಾಗ್ಧಾರೆ ಕೊನೆಯವರೆಗೂ ಸಾಗುತ್ತದೆ. ಕೊನೆಯಲ್ಲಿ—

"……ಪಾಂತ್ರಾಹಿ ಪಾಂತ್ರಾಹಿ ಕಾಳೀಪತೇ ದೇವತಾರಾಧ್ಯ ಪಾಂತ್ರಾಹಿ ಸತ್ಸಂಗತೇ ವೀರಭದ್ರೇಶ ಕಾರುಣ್ಯವಾರಾಸಿಧೇಭೂರಿರುದ್ರೇಶ ಭದ್ರಾಂಗ ಸಚ್ಚಿನ್ನಿಧೇತ್ವತ್ಪದಾಂಭೋಜ ಭಕ್ತಿಂ ಸಮಾದೇಹಿಮೇ ಸತ್ಪದಾರ್ಥತ್ವಮೇಕೋಸಿ ಮಾಂಪಾಲನೀಯಸ್ಸದಾಸಂತು ಸಂತಪ್ರಭೋಕಾಲ ಚಿತ್ಕಮಿತಾರ್ಥಪ್ರದಾಸ್ಮದ್ವಿಭೋಭಾನುಮನ್ನಾಥಭೂಯೋ ನಮಸ್ತೇನಮಸ್ತೇ ನಮೋಸ್ತು"

—ಹೀಗೆ ಕಾವ್ಯ ಮುಗಿಸಿ ಸ್ವವಿಷಯಕ ಕೊನೆಯ ಗದ್ಯ ಭಾಗದಲ್ಲಿ ಈ ರೀತಿ ಹೇಳಿಕೊಂಡಿದ್ದಾನೆ.

"ಇತಿ ವಿನಮದಮರಪರ ಮುಕುಟತಟಘಟಿತ ಮಣಿಗಣಮಹಾಪ್ರಭಾಪಟಲ ಪರಿವೃತ ಪರಶಿವ ಶ್ರೀಪಾದನಖ ಚಂದ್ರಸಾಂದ್ರ ರುಚಿರಚಂದ್ರ ಚಂದ್ರಿಕಾ ಚಂಚಚ್ಚಕೋರಾಯಮಾನ ಸರಸಜನಮಾನಿತೋಭಯ ಕವಿತಾ ವಿಶಾರದ ಶ್ರೀ ಷಡಕ್ಷರದೇವ ಮಹಾಕವಿ ವಿರಚಿತ ಶ್ರೀ ವೀರಭದ್ರ ದಂಡಕಂ ಸಂಪೂರ್ಣಂ"

೨ ವೀರಭದ್ರೋದಾಹರಣ ಗದ್ಯ :

ಇದೊಂದು ವಿಶಿಷ್ಟ ರೀತಿಯ ಸ್ತೋತ್ರ ಸಾಹಿತ್ಯವೆನಿಸಿದೆ. ಕನ್ನಡದ ಯಾವ ಕವಿಗಳೂ ಸಾಮಾನ್ಯವಾಗಿ ಈ ರೀತಿಯ 'ಉದಾಹರಣ ಗದ್ಯ'ವೆಂಬ ಹೆಸರಿನ ಸಾಹಿತ್ಯ ಪ್ರಕಾರದ ರಚನೆ ಮಾಡಿದಂತಿಲ್ಲ. ಕರ್ನಾಟಕಾಂಧ್ರ ಸಂಸ್ಕೃತ ಭಾಷಾ ಮಹಾಕವಿಯಾದ ಪಾಲ್ಕುರಿಕೆ ಸೋಮನಾಥರು 'ಬಸವೋದಾಹರಣ ಗದ್ಯ'ವೆಂಬ ಬಸವೇಶ್ವರರನ್ನು ಕುರಿತ ಸಾಹಿತ್ಯ ಪ್ರಕಾರದ ಕೃತಿಯೊಂದನ್ನು ರಚಿಸಿದ್ದಾನೆ. ಅದೇ ಮಾದರಿಯಲ್ಲಿಯೇ ಷಡಕ್ಷರದೇವನು ವೀರಭದ್ರೋದಾಹರಣ ಕಾವ್ಯ ರಚಿಸಿದ್ದಾನೆ. ತಾನು ಕೆಳದಿಗೆ ಹೋದಾಗ ಕೆಳದಿಯ ವೀರಭದ್ರನನ್ನು ಕುರಿತು ಈ ಉದಾಹರಣ ಗದ್ಯ ಪ್ರಭೇದದ ಕಾವ್ಯ ರಚನೆ ಮಾಡಿದಹಾಗೆ ತಾನೇ ತನ್ನ ಈ ಕೃತಿಯ ಕೊನೆಯ ಪದ್ಯದಲ್ಲಿ ಹೀಗೆ ಹೇಳಿಕೊಂಡಿದ್ದಾನೆ.

"ಶ್ರೀಮತ್ ಭೂಭೃತ್ತನೂಜಾಧವ ಪರಶಿವಲಿಂಗಾಂಗ ಸಂಗಾಂತರಂಗಃ।
ಶಾಸ್ತ್ರಾಮ್ನಾಯಾಗಮಜ್ಞಸ್ಫುರದುಭಯಕವಿವ್ರಾತವಿಖ್ಯಾತ ಕೀರ್ತಿಃ।

ಗದ್ಯಂ ಹೃದ್ಯಂ ವ್ಯಧತ್ತ ಪ್ರಣವ ಪರಿಮಿಳತ್ಪಂಚವರ್ಣಾಖ್ಯದೇವಃ।
ಕ್ಷಿಪ್ರಂ ಭದ್ರಪ್ರದಾತಃ ಬುಧನುತಕೆಳದೀ ವೀರಭದ್ರೇಶ್ವರಸ್ಯ" ||೧೦||

'ಕೆಳದೀ ರಾಜಾಸ್ಥಾನೇ ವಿರಚಿತಮಿದಂ ಸ್ತೋತ್ರಂ ಸಮಾಪ್ತಂ'

—ಆದುದರಿಂದ ಕೆಳದಿಯ ರಾಜಾಸ್ಥಾನದಲ್ಲಿ ಈ ಕೃತಿ ರಚನೆ ಮಾಡಿದ ಬಗೆಗೆ ಸಂಶಯವೇ ಬಾರದು. ಸೋಮನಾಥರು ತಮ್ಮ ಬಸವೋದಾಹರಣ ಗದ್ಯದಲ್ಲಿ "ಜಯತು ಬಸವ ರಾಜಃ ಪ್ರಾಣ ಲಿಂಗಾತ್ಮಪೂಜಃ..... " ಎಂದು ಪ್ರಥಮಾ ವಿಭಕ್ತಿಯಲ್ಲಿ ಬಸವನನ್ನು ಸ್ತುತಿಸುತ್ತ ಮಾಲಿನೀವೃತ್ತದಿಂದಲೇ ಕೃತಿಯನ್ನು ಪ್ರಾರಂಭಿಸಿದ ಹಾಗೆ ಷಡಕ್ಷರದೇವನೂ ಮಾಲಿನೀವೃತ್ತದಲ್ಲಿಯೇ ವೀರಭದ್ರನನ್ನು ಕುರಿತು ಪ್ರಥಮಾವಿಭಕ್ತಿಯಲ್ಲಿ ಸ್ತೋತ್ರವನ್ನು—

ಜಯತಿ ಸಶಿವಮುದ್ರಃ ಸರ್ವರಕ್ಷಾವಿನಿದ್ರಃ।
ಸತತ ವಿತತ ಭದ್ರಃ ಸತ್ಯ ಪಾಪದ್ರುಸಾಂದ್ರಃ।
ಪರಮಗುಣ ಸಮುದ್ರಃ ಕಲ್ಪಕಾಲಾತಿ ರೌದ್ರಃ॥
ಸ್ಫುರಿತ ಶರಭರುದ್ರಃ ಸರ್ವದಾವೀರಭದ್ರಃ॥ ||೧||

—ಹೀಗೆ ಮಾಡಿ ಮುಗಿಸಿದ ಮೇಲೆ, ಸೋಮನಾಥರ ಮಾರ್ಗದಲ್ಲಿಯೇ ಪ್ರತಿ ಪದ್ಯಕ್ಕೂ ಕಳಿಕಾ, ಆಭಾಸ, ವಿಭಕ್ತ್ಯಾಭಾಸ, ಡವಣೆ ಮುಂತಾದ ಸರ್ವ ವಿಧದಲ್ಲೂ ಪದ್ಯದ ರೂಪ ಧರಿಸಿದ ಗದ್ಯ ಭಾಗದಿಂದ ವಿಶೇಷ ವರ್ಣನೆ ಮಾಡುತ್ತ ಹೋಗುತ್ತಾನೆ. ಆದರೆ ಒಂದು ಪದ್ಯಕ್ಕೆ ಎರಡೆರಡೇ ವಿಶೇಷ ಗದ್ಯ ಪ್ರಕಾರದ ವರ್ಣನೆ ಸಾಗುತ್ತದೆ. ಮೇಲೆ ಹೇಳಿದ ಕಳಿಕಾ, ಆಭಾಸಾದಿಗಳು ಛಂದೋಮಯ ಗದ್ಯ ಪ್ರಭೇದಗಳೇ ಎಂಬುದು ತಿಳಿಯಬೇಕು. ಅವು ನಿಯತವಾದ ಅಕ್ಷರ ಗಣದ ನಿಯಮದಿಂದ* ಸಾಗುತ್ತವೆ. ಓಟದಲ್ಲಿ ರಗಳೆಯ ಪ್ರಭೇದಗಳೋ ಎಂಬಂತೆ ಭಾಸವಾಗುತ್ತವೆ. ಅವೆಲ್ಲವೂ ಸಂಸ್ಕೃತ ಭಾಷೆಯಲ್ಲಿಯೇ ರಚಿತವಾಗಿವೆ. ವೀರಭದ್ರೋದಾಹರಣ ಗದ್ಯದಲ್ಲಿ ಒಟ್ಟು ಹತ್ತು ಪದ್ಯಗಳು ಇದ್ದು ಮೊದಲನೆಯ ಮಾಲಿನೀವೃತ್ತವನ್ನು ಬಿಟ್ಟರೆ ಉಳಿದುವೆಲ್ಲ ಸ್ರಗ್ಧರಾವೃತ್ತದಲ್ಲಿ ರಚಿತವಾಗಿವೆ. ಹತ್ತನೆಯ ಪದ್ಯ ಕವಿ ತನ್ನ ಕೃತಿ ರಚನೆ ಮಾಡಿದ ಸ್ಥಳ ಮತ್ತು ಪಾಂಡಿತ್ಯ ಪ್ರಕರ್ಷಗಳ ಬಗೆಗೆ ಹೇಳಿಕೊಂಡಿದ್ದಾನೆ. ಕೊನೆಯ ಪದ್ಯವಾದುದರಿಂದ ಅದಕ್ಕೆ ಕಳಿಕಾ ಆಭಾಸ—ಇತ್ಯಾದಿ ವಿಶೇಷ ಗದ್ಯ ಪ್ರಕಾರದ ವರ್ಣನೆ ಸಾಗುವುದಿಲ್ಲ. ಉಳಿದ ಒಂಬತ್ತು ಪದ್ಯಗಳಿಗೂ ಎರಡೆರಡು ವಿಶೇಷ ಗದ್ಯ ಪ್ರಕಾರದ ವರ್ಣನೆ ಸಾಗುವುದರ ದೃಷ್ಟಾಂತವನ್ನು ಕೆಳಗೆ ವಿವರಿಸಲಾಗಿದೆ. ಕೆಲವು ಕಡೆ ನಿಯತವಾದ ಅಕ್ಷರಗಣದ ಕ್ರಮ ಕಳಿಕಾಭಾಸಾದಿ ಗದ್ಯ ಪ್ರಭೇದಗಳಲ್ಲಿ ತಪ್ಪಿಗಿರುವುದೂ ಕಂಡುಬರುತ್ತದೆ.

*ಕೆಲವು ಕಡೆ ಅಕ್ಷರಗಣದ ನಿಯಮತಪ್ಪಿ ಮಾತ್ರಾ ಗಣದ ಓಟ ಸಾಗಿರುವುದೂ ಉಂಟು.

ಮೊದಲನೆಯ ಮಾಲಿನೀವೃತ್ತ ಪದ್ಯದ ಅರ್ಥ ಇಷ್ಟು :

ಶಿವಲಾಂಛನ ಶೋಭಿತನೂ, ಮಂಗಳವನ್ನುಂಟುಮಾಡುವವನೂ, ಸಮಸ್ತ ಜಗದ್ರಕ್ಷಕನೂ ಸಜ್ಜನಕೃಪಾ ರಸಭರಿತನೂ, ಪರಿಪೂರ್ಣನೂ, ಶ್ರೇಷ್ಠ ಕಲ್ಯಾಣ ಗುಣಗಳಿಗೆ ಸಮುದ್ರನೂ, ಪ್ರಳಯ ಕಾಲದಲ್ಲಿ ರೌದ್ರರಸಪ್ರಕಾಶನೂ, ಶರಭಾಕಾರನೂ, ರುದ್ರ ತೇಜದಿಂದ ಪ್ರಕಾಶಿಸುವವನೂ ಆದ ವೀರಭದ್ರನು ಸದಾ ಜಯಶೀಲನಾಗಿರುತ್ತಾನೆ.

—ಈ ವೀರಭದ್ರನ ವರ್ಣನೆಗೆ ಕಳಿಕೆ ಮತ್ತು ಆಭಾಸಗಳಿಂದ ವಿಶೇಷ ವರ್ಣನೆ ಮುಂದುವರಿಯುತ್ತದೆ.

—ಕಳಿಕಾ—

ಅಪಿಚ ಸುರಕ್ಷಣ ರಕ್ಷಣ ಶೀಲಃ |
ಕ್ಷಪಿತವಿಪಕ್ಷಕಪಕ್ಷಕರಾಲಃ |
ಸತತ ಸಮುನ್ನತ ಮುನ್ನತ ಪಾಲಃ |
ಶತದಳ ಪನ್ನಗ ಪನ್ನಗಮಾಲಃ |
ಶ್ರುತಿಘನವಾಜಿನವಾಜಿ ವಿಲೋಲಃ |
ಶ್ರಿತಕವಿರಾಜ ವಿರಾಜಿತ ಶೂಲಃ |
ಪರಮಹಿಮೋದಯ ಮೋದಯಲೀಲಃ |
ತ್ವರಿತ ವಿಷಾದ ವಿಷಾದಹ ಖೇಲಃ ||

(ಮತ್ತು ದೇವತೆಗಳು ಆಚರಿಸುವ ಉತ್ಸವಾದಿ ಮಂಗಳಕಾರ್ಯ ರಕ್ಷಕನೂ, ಶತ್ರುತತಿವಿನಾಶಕರ ಆಯುಧಗಳಿಂದ ಭಯಂಕರನೂ, ಶರಣಾಗತ ರಕ್ಷಕನೂ, ಸರ್ಪಭೂಷಣನೂ, ವೇದಗಳನ್ನೇ ಕುದುರೆಗಳನ್ನಾಗಿ ಉಳ್ಳವನೂ. (ತ್ರಿಪುರ) ಯುದ್ಧ ವಿನೋದಿಯೂ, ಕವಿತತಿಶರಣ್ಯನೂ, ಪ್ರಕಾಶಿಸುವ ಶೂಲಾಯುಧವುಳ್ಳವನೂ, ಶ್ರೇಷ್ಠ ಮಹಿಮಾತಿಶಯದಿಂದ ಶೋಭಿಸುವವನೂ, ದುಃಖನಿವಾರಕನೂ, ಆದ ವೀರಭದ್ರನು ಸದಾ ಜಯಶೀಲನಾಗಿರುತ್ತಾನೆ)

—ಮೇಲಿನ ಈ ಕಳಿಕೆಯಲ್ಲಿ ಅತ್ಯಂತ ಪ್ರಾಸವಿರುವುದನ್ನು ನೋಡಬಹುದು. ಇದು ನಿಯತವಾದ ಗಣನಿಯಮದಿಂದ ಅಂದರೆ ಸ, ಜ, ಜ, ಯ—ಗಣಗಳಿಂದ ಕೂಡಿರುವುದು ಕಂಡುಬರುವುದು. ಈ ಕಳಿಕೆಯಾದ ಮೇಲೆ 'ಆಭಾಸ' ಎಂಬ ಹೆಸರಿನ ವಿಶೇಷ ವರ್ಣನೆಯು ಗದ್ಯ ಪ್ರಾರಂಭವಾಗುವುದು. ಅದೂ ಕೂಡ ನಿಯತ ಗಣನಿಯಮದಿಂದ ಕೂಡಿದ ಗದ್ಯಭಾಗವೆಂದೇ ತಿಳಿಯಬೇಕು. ಈ ಗದ್ಯಭಾಗ ನಯ

ನಯ—ಗಣಗಳ ಓಟದಿಂದ ಸಾಗುವುದನ್ನು ಮುಂದಿನ ಉದಾಹರಣೆಯಲ್ಲಿ ಕಾಣಬಹುದು.

ಆಭಾಸ

ಪರಬಲಭಂಗಃ ಸ್ಥಿರಗುಣಸಂಗಃ |
ಸ್ಫಟಿಕ ಸುಧಾಂಗಃ ಸ್ಫುಟಧವಲಾಂಗಃ |
ಶ್ರಿತಸುಭುಜಂಗಃ ಸ್ಮೃತಶಿವಲಿಂಗಃ |
ಸ್ಮೃತಿಪರಸಾಂಗಃ ಸ್ಥಿತಿಸುರತಂಗಃ

[ಶತ್ರುಬಲವನ್ನು ಭಂಗಗೊಳಿಸುವವನೂ, ನಿಶ್ಚಲಗುಣದಿಂದ ಕೂಡಿದವನೂ, ಸ್ಫಟಿಕ ಮಣಿ ಮತ್ತು ಚಂದ್ರನಂತೆ ಶುಭ್ರವಾದ ಶರೀರವುಳ್ಳವನೂ, ಸರ್ಪಗಳಿಗೆ ಆಶ್ರಯನೂ, ಶಿವಲಿಂಗಪೂಜಕನೂ, ಸ್ಮೃತಿವೇತ್ತರಲ್ಲಿ ನೆಲೆಸಿದವನೂ, ಸುರಶ್ರೇಷ್ಠನೂ ಆದ ವೀರಭದ್ರನು ಸದಾ ಜಯಶೀಲನಾಗಿರುತ್ತಾನೆ. (ಇಲ್ಲಿ ಜಯಶೀಲನಾಗಿರುತ್ತಾನೆ ಎಂಬುದು ಮೊದಲ ಪದ್ಯದಲ್ಲಿ ಬರುವ ಜಯಶೀಲನಾಗಿರುತ್ತಾನೆ ಎಂಬುದಕ್ಕೆ ಅನ್ವಯಿಸಿ ಹೇಳಬೇಕು. ಏಕೆಂದರೆ ಈ ಕಳಿಕೆ ಮತ್ತು ಆಭಾಸಗಳು ಆ ಪದ್ಯಕ್ಕೆ ಸಂಬಂಧಿಸಿದ ವಿಶೇಷ ವರ್ಣನೆಗಳೇ ಆಗಿವೆ. ಆದ್ದರಿಂದಲೇ ಮೊದಲ ಕಳಿಕೆಯಲ್ಲಿ 'ಅಪಿಚ' ಎಂದೇ ಪ್ರಾರಂಭ ಮಾಡಿರುವುದನ್ನು ಗಮನಿಸಬಹುದು)].

—ಈ ಆಭಾಸದಲ್ಲಿ ಮಧ್ಯಾಂತ್ಯ ಪ್ರಾಸಗಳನ್ನು ಕಾಣಬಹುದು. ಮತ್ತು ನಿಯತಗತಿಯ ಗಣದ ಓಟವನ್ನೂ ಕಾಣಬಹುದು. ಮುಂದೆ ಸ್ರಗ್ಧರಾವೃತ್ತಗಳನ್ನು ಅವುಗಳಿಗೆ ವಿಶೇಷ ಗದ್ಯವನ್ನು ಹೇಳುತ್ತ ಹೋಗುವುದನ್ನು ಈ ಕೆಳಗೆ ಗಮನಿಸಿ: (ಇಲ್ಲಿ ಸೋಮನಾಥರು ದ್ವಿತೀಯಾ ವಿಭಕ್ತಿಯಲ್ಲಿ ಬಸವಣ್ಣನನ್ನು ಸ್ತುತಿಸಿದಂತೆಯೇ ಇವನೂ ದ್ವಿತೀಯಾ ವಿಭಕ್ತಿಯಲ್ಲಿಯೇ ವೀರಭದ್ರನನ್ನು ಸ್ತುತಿಸುವುದನ್ನು ಲಕ್ಷಿಸಬಹುದು).

ಪ್ರೋದ್ಯದ್ವಿದ್ಯುದ್ಯುತಿಪ್ರೋನ್ನಖಮುಖದಳಿತಕ್ಷಿಪ್ತದೃಪ್ತಾರಿ ರಕ್ಷೋ |
ವಕ್ಷೋಸೃಕ್ಪಾನಮತ್ತಪ್ರತಿಭಟನೃಹರಿಕ್ಷೋಭಕೃತ್ಪ್ರೌಢಮೂರ್ತಿಂ |
ರೌದ್ರೋದ್ರೇಕ ಪ್ರತಾಪ ಪ್ರಬಳದನುಭವದ್ರಾವಕಂ ಭದ್ರಕಾಳೀ |
ಸದ್ರಾಗಾಂಭೋಧಿಚಂದ್ರಂ ನಮತಿಮಮಮನೋಭಪ್ರದಂ
ವೀರಭದ್ರಂ ॥ ೨ ॥

(ಮಿಂಚಿನಂತೆ ಹೊಳೆಯುವ ಉಗುರ್ಗೊನೆಗಳಿಂದ ಹಿರಣ್ಯಕಶ್ಯಪನ ವಕ್ಷಸ್ಥಳವನ್ನು ಸೀಳಿ ರಕ್ತಪಾನ ಮಾಡಿ ಮತ್ತನಾಗಿ ಎದುರಾಗಿ ಬರುವ ನೃಸಿಂಹನಿಗೆ ಭಯಗೊಳಿಸುವ ಭಯಂಕರ ದೇಹದಿಂದ ಪ್ರೌಢಮೂರ್ತಿಯಾದವನೂ, ರೌದ್ರಾತಿಶಯ

ದಿಂದ ಮತ್ತು ಪರಾಕ್ರಮದಿಂದ ಸಮರ್ಥರಾದ ದಾನವರನ್ನು ಓಡಿಸುವ ಭದ್ರಕಾಳೀ ದೇವಿಯ ರಾಗವೆಂಬ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವವನೂ ಆದ ಮಂಗಲ ಕರನಾದ ವೀರಭದ್ರನನ್ನು ಕುರಿತು ನನ್ನ ಅಂತಃಕರಣವು ನಮಸ್ಕರಿಸುತ್ತದೆ).

—ಯಥಾಪ್ರಕಾರ ಕವಿಯ ಪಾಂಡಿತ್ಯದ ಪ್ರಕಾಶನಕ್ಕೆ ಈ ಪದ್ಯವೇನೂ ಹೊರತಾಗಿಲ್ಲವೆಂಬುದನ್ನು ಗಮನಿಸಬಹುದು. ಈ ಪದ್ಯಕ್ಕೆ ಸಂಬಂಧಿಸಿದ ಕಳಿಕಾ ಮತ್ತು ಆಭಾಸಗಳು ಮುಂದುವರಿಯುತ್ತವೆ.

—ಕಳಿಕಾ—

ಅಪಿಚಖರಪ್ರಭಸುಪ್ರಭಗಾತ್ರಂ| ವಿಪುಲಮತಪ್ರಮಥಪ್ರಿಯಮಿತ್ರಂ
ದಿತಿಸುತಭೀಷಣ ಭೂಷಣಯುಕ್ತಂ| ಹಿತಮಿತಭೂಷಣತೋಷಣರಕ್ತಂ|
ಯತಿಪದಧೀಚಿ ಸುಧೀಚಿರಪಕ್ಷಂ| ಕೃತಮುಖಧೀರವಿದಾರಣಪಕ್ಷಂ|
ಫಣಿಪತಿಕುಂಡಲ ಮಂಡಲಗಂಡಂ| ಕ್ಷಣರುಚಿಮಂಡನಖಂಡನಚಂಡಂ||

(ಮತ್ತು ಪ್ರಕಾಶಮಾನ ಕಾಂತಿಯುಳ್ಳ ಶರೀರಿಯೂ, ಪ್ರಮಥ ಸಮೂಹಕ್ಕೆ ಪ್ರಿಯಮಿತ್ರನೂ, ದಿತಿಯ ಮಕ್ಕಳಾದ ರಾಕ್ಷಸರಿಗೆ ಭಯಾವಹ ಭೂಷಣಗಳಿಂದ ಕೂಡಿದವನೂ, ಹಿತಮಿತಭಾಷಿಗಳನ್ನು ಸಂತೋಷಗೊಳಿಸುವವನೂ, ಯತೀಶ್ವರನಾದ ದಧೀಚಿ ಪಕ್ಷನೂ, ದಕ್ಷನನ್ನು ಶಿಕ್ಷಿಸಿದವನೂ, ಸರ್ಪಕುಂಡಲನೂ, ಮಿಂಚೇ ಅಲಂಕಾರವಾಗುಳ್ಳ ಮೇಘಖಂಡನದಲ್ಲಿ ಪ್ರಚಂಡನೂ ಆದ ವೀರಭದ್ರನನ್ನು ನನ್ನ ಮನಸ್ಸು ನಮಿಸುತ್ತದೆ).

—ಈ ಕಳಿಕೆಯ ಗದ್ಯಭಾಗದಲ್ಲಿ ನ, ಜ, ಜ, ಯ ಗಣನಿಯಮಪಾಲನೆಯನ್ನೂ ಮತ್ತು ಆದಿ ಅಂತ್ಯ ಪ್ರಾಸಗಳನ್ನೂ ಕವಿ ಪಾಲಿಸಿರುವುದನ್ನು ಕಾಣಬಹುದು.

—ಆಭಾಸ—

ಶ್ರುತಿಶತಪಾರಂ ಗತನತಧೀರಂ
ಜಿತನುತಭಾರಂ ಮೃತನುತಪೋರಂ
ಜಿತಕೃತಮಾರಂ ಭಿತಹಿತಸಾರಂ
ಗತಲತಟಾರಂ ಛಿತಮತಿದಾರಂ

(ವೇದಾಂತಪಾರಂಗತರಿಂದ ನಮಸ್ಕರಿಸಲ್ಪಡುವವನೂ, ಕವೀಶ್ವರರಿಂದ ಸ್ತೋತ್ರ ಮಾಡಲ್ಪಡುವ ಮನೋಜ್ಞ ಶರೀರಿಯೂ, ತಪಃಫಲದಾಯಕನೂ, ಮನ್ಮಥ

ನನ್ನು ಜಯಿಸಿದವನೂ,............ಆದ ವೀರಭದ್ರನನ್ನು ನನ್ನ ಮನಸ್ಸು ನಮಸ್ಕರಿಸುತ್ತದೆ).

ಈ ಆಭಾಸದಲ್ಲಿಯೂ ಆದ್ಯಂತ ಪ್ರಾಸಗಳನ್ನು ಕಾಣಬಹುದು. ಹೀಗೆಯೇ ಪ್ರತಿ ಪದ್ಯಕ್ಕೂ ಕಳಿಕಾ, ಆಭಾಸ, ವಿಭಕ್ತ್ಯಾಭಾಸ, ಡವಣೆ—ಎಂಬ ಹೆಸರಿನ ವಿಶೇಷ ರೀತಿಯ ಗದ್ಯಭಾಗದ ವರ್ಣನೆಯಿಂದ ಗ್ರಂಥ ಸಮಾಪ್ತಗೊಳ್ಳುತ್ತದೆ. ಸೋಮನಾಥನು ಬಸವೋದಾಹರಣದಲ್ಲಿ ಉತ್ಕಳಿಕ, ಕಳಿಕ ಹರಿಗತಿರಘಟ, ಕಳಿಕದ್ವಿರದ ಗತಿರಘಟ, ಕಳಿಕತುರಗವಲ್ಗನರಘಟ. ಕಳಿಕಮಧುರಗತಿರಘಟ, —ಎಂದು ಆ ಗದ್ಯ ಪ್ರಭೇದಕ್ಕೆ ಗತಿಯನ್ನು ಹೇಳಿದಂತೆ ಷಡಕ್ಷರಿ ಹೇಳುವುದಿಲ್ಲ. ಅಲ್ಲದೆ ಷಡಕ್ಷರಿಯು ಆಭಾಸ, ವಿಭಕ್ತ್ಯಾಭಾಸ, ಡವಣೆ—ಎಂಬ ಹೆಸರಿನ ಬೇರೆ ಗದ್ಯಪ್ರಭೇದಗಳನ್ನು ಹೇಳುವುದರ ಮೂಲಕ ಬಸವೋದಾಹರಣದಲ್ಲಿರುವುದಕ್ಕಿಂತ ಭಿನ್ನ ರೀತಿಯಲ್ಲಿ ತನ್ನ ವೀರಭದ್ರೋದಾಹರಣದಲ್ಲಿ ವಿವರಣೆಯನ್ನು ಕೊಡುತ್ತಾನೆ. ಸಾಮಾನ್ಯವಾಗಿ ಅರ್ಥಮಾಡಲು ಅಸಾಧ್ಯವಾದ ವೀರಭದ್ರೋದಾಹರಣಗದ್ಯ ವಿದ್ವಜ್ಜನರಿಗೆ ಒಂದು ಸವಾಲಿನಂತೆ ಇದೆ. ಮುಂದೆ ಎರಡು ಸ್ರಗ್ಧರಾವೃತ್ತಗಳನ್ನು ಅವುಗಳ ಕಳಿಕಾಭಾಸಗಳನ್ನು ಅವಲೋಕಿಸಬಹುದು:

ಪ್ರೋದ್ಭಿನ್ನಾಬ್ಜೋದ್ಭವಾಂಡ ಸ್ಫುಟನಕಟಿತಟಸ್ಫಾರಮಾಣಿಕ್ಯರೋಚಿ- |
ರ್ಜ್ವಾಲಾಳೀಕರೋರುಲಿಂಗಾಕೃತಿ ಮುದಿತ ಹದಗ್ರೋಗ್ರರುದ್ರವ್ರಜೇನ |
ಭಿದ್ಯತ್ಪ್ರತಾಳನಾದಸ್ಫುಟಿತಘುಕಮಠಸ್ರಾಂಶುಪೃಷ್ಠೇನಯುಷ್ಠೇ |
ಕಃಶೂರಸ್ಪರ್ಧ್ಯತೇತಿಪ್ರಬಲಬಲಭೃತಾ ವೀರಭದ್ರೇಶ್ವರೇಣ ||೩||

ಕಳಿಕಾ

ಅಸಿಚ ರಿಪುಚಯಾಂಗಭಂಗ ಚಕ್ರವಿಕ್ರಮಾಂಚಿತೇನ |
ಕಟಿಟ ಸುಪಟು ದೂರಸಾರ ವಾದವೇದ ಸಂಚಿತೇನ |
ನಿಟಿಲಪಟಲ ನೇತ್ರಮಿತ್ರ ಪುತ್ರಗಾತ್ರ ಭಂಜನೇನ |
ಕುಟಿಲ ಜಟಿಲ ಭೂತಜಾತ ನಾಥಯೂಥ ರಂಜನೇನ |
ದೇವಜೀವ ಹರಣ ಕರಣ ತರಳ ಗರಳ ಕಂಧರೇಣ ||
ಭಾವಜಾವಲೋಪಸುಸಿತ ಭಸಿತ ಬಂಧುರೇಣ
ಚಂಡತಾಂಡವೋಗ್ರವಿಗ್ರಹಗ್ರಹಾಗ್ರ ಮಂಡಿತೇನ |
ಕುಂಡವಾಂಡ ಮುಖ್ಯಸಖ್ಯ ಸರ್ಗಮಾರ್ಗ ಪಂಡಿತೇನ |

ವಿಭಕ್ತ್ಯಾಭಾಸ

ಕೃತ್ತಮತ್ತಶಾರದೇನದತ್ತಚಿತ್ತ ಭೀಮಸೇನ
ನೀತಿಭೂತಿ ಪಂಕಜೇನ ಘೂತಪಾತಕೇಂದುಫೇನ |

ಕುಂದಮಂದಹಾಸಮೇನ ನಂದಿವಂದಿತಾಂಘ್ರಿಮೇನ |

....

ಯುದ್ಧೇಷ್ವಜೋಘ್ರವೇದ್ಘ್ರೋಕಥಿತ ಮುಖಕಥಾಕರ್ಣನೋತ್ತೀರ್ಣ
ಚಂಚತ್ |

ಕ್ರೋಧೋನ್ಮೀಲತ್ಪ್ರಘೂರ್ಣದ್ಭವಸಿಟಿಲಬೃಹದ್ಭ್ರೂಸುನೇತ್ರೋಗ್ರಭಾವಾಯ |
ಪ್ರಸ್ಫೂರ್ಜದ್ಭೂತನಾಥಪ್ರಮಥಪರಿವೃತಾಯಸ್ಫುರದ್ಭ್ರೂಸಕೋಟಿ- |
ಪ್ರತ್ಯೋತಾಂಗಾಯ ಬದ್ಧಾಂಜಲಿರಹಮಭವಂ ವೀರಭದ್ರೇಶ್ವರಾಯ ||೪||

ಈ ಪದ್ಯಕ್ಕೆ ಕಳಿಕಾ ಮತ್ತು ಆಭಾಸಗಳು.

—ಕಳಿಕಾ—

ಅಪಿಚಕಪಿಚಯೇಂದ್ರ ರುಂದ್ರ ಗೀತಜಾತ ಮೋದಿತಾಯ |
ವಿಪ್ರಲಕಪಿಲ ಕುಂಭಸಂಭವಾದಿ ವೇದವಾದಿತಾಯ |
ತುಂಗಶೃಂಗಚಾರುಮೇರು ಗೇಹ ಸಾಹಸಾಕರಾಯ |
ಲಿಂಗಸಂಗತೋತ್ತಮೋತ್ತಮಾಂಗಸಾಂಗಮಾಕರಾಯ |
ಜೀವಭಾವಮೂರಧೀರಸಾರವಾಯುಭಾವಿತಾಯ |
ಲೋಕಭೀಕರಾಂಧಕಾರ ಸೂರ ಸುಪ್ರಭಾಯ | [15]
ನಾಕಭೂಕರಾಲಶೂಲ ರುಂಡಮುಂಡನಪ್ರಿಯಾಯ |

—ಆಭಾಸ—

ಮರಣಹರಣ ಲಸದುಪಾಯ ಶರಣಕರಣ ಗತವಿಮಾಯ |
ಚರಿತಗಳದಪಾಯ ಸುರತವಿರತ ವರಹಿತಾಯ | [16]
ವಿರಮದರಮಜಿನಸಹಾಯ ಪರಮಚರಮವಪುರಮಾಯ |
ಮನಸಘನಸಮುದನಿಕಾಯ ಜನನಹದನಪಟುತರಾಯ ||

—ಹೀಗೆಯೇ ಒಂಬತ್ತು ಪದ್ಯಗಳೂ ವಿಶೇಷ ವಿವರಣಾತ್ಮಕ ಉದಾಹರಣ ಗದ್ಯಪ್ರಭೇದಗಳಿಂದ ವೀರಭದ್ರೋದಾಹರಣ ಗದ್ಯಗ್ರಂಥ ಮುಗಿಯುತ್ತದೆ. ಎಂಟನೆಯ ಪದ್ಯಕ್ಕೆ 'ಡವಣಿ' ಎಂಬ ಹೆಸರಿನ ಗದ್ಯಭಾಗದಿಂದ ವಿವರಣೆ ಕೊಡುತ್ತಾನೆ. 'ಡವಣಿ' ಇರುವುದು ಹೀಗೆ:—

---

15 ಬಹುಶಃ ಈ ಪಾದದಲ್ಲಿ ಕೆಲವು ಅಕ್ಷರಗಳು ಬಿಟ್ಟುಹೋಗಿರಬಹುದಾಗಿ ತೋರುತ್ತದೆ.

16 ಈ ಸಾಲಿನಲ್ಲಿ ಬಹುಶಃ ಮೂರು ಅಕ್ಷರಗಳು ಬಿಟ್ಟುಹೋಗಿರಬಹುದಾಗಿದೆ.

ಅಪಿಚ ನಾನಾನಾಕಿ ನಾಯಕ ನಿಕರ ಮೌಲಿಮಯೂಖಮಂಡಿತ |
ಕುಪಿತ ಪಾಪಾಪಾಸ್ತ ಸನ್ನಿತಿ ಮತ್ತಮರ್ದನಕೃತ್ಯಪಂಡಿತ |
ಸವಿನಯಾಯಾಯಾತ ಸಾತ್ವಿಕಭಕ್ತ ಪದ್ಮವನಪ್ರಭಾಕರ |
ಭುವನತಾತಾತಾಮ್ರವಿದ್ರುಮಘನಲತಾವಿಸಲಜ್ಜಟಾಭರ |
ಕಲಿಧರಾರಾರಾಜಿತೋತ್ತಮ ಸತ್ಫಲಪ್ರದಶಕ್ತಿರಾಜಿತ |
ಲಲಿತಭಾಭಾಭಾಸಿ ಕುಂಜರಕುಂಭ ಮೌಕ್ತಿಕಮಾಲಿಕಾಂಚಿತ |
ತತಮಹಾಹಾಹಾಮುಖ ಸ್ಫುಟಗೀತಮೋದಿತ ಗೀಷ್ಪತಿಸ್ತುತ |
ಭೃತಗುರೂರೂರೂನ್ನತ ಸ್ತನನಿಜವಧೂಭುಜಸಲ್ಲತಾವೃತ ||

(ಮತ್ತು ದೇವೇಂದ್ರನೇ ಮೊದಲಾದ ನಾನಾ ದೇವತೆಗಳ ಕಿರೀಟ ಪ್ರಕಾಶದಿಂದ ವಿರಾಜಮಾನವಾದ ಪಾದಗಳುಳ್ಳವನೂ, ಕೋಪಿಷ್ಠರೂ, ಪಾಪಾಸಕ್ತರೂ, ಪ್ರಮತ್ತರೂ ಮೊದಲಾದ ಖಲಜನರನ್ನು ಶಿಕ್ಷಿಸುವುದರಲ್ಲಿ ದಕ್ಷನೂ, ಸವಿನಯ ಸಂಪನ್ನರೂ, ಸಾತ್ವಿಕ ಗುಣೋಪೇತರೂ ಆದ ಭಕ್ತರೆಂಬ ಕಮಲವನ ಸೂರ್ಯನೂ, ಜಗಜ್ಜನಕನೂ, ಹವಳದ ಬಳ್ಳಿಯಂತೆ ಕೆಂಪು ಜಡೆಯುಳ್ಳವನೂ, ಯುದ್ಧೋತ್ಸಾಹೀ ಶತ್ರುಸಮುದಾಯದಲ್ಲಿ ಶೋಭಿಸುವವನೂ, ಉತ್ತಮ ಜನರಿಗೆ ಯೋಗ್ಯ ಫಲವನ್ನು ಕೊಡುವವನೂ, ಶಕ್ತಿಯಿಂದ ವಿಜೃಂಭಿತನೂ, ನಕ್ಷತ್ರಗಳಂತೆ ಶೋಭಿಸುವ ಆನೆಯ ಕುಂಭಸ್ಥಳದ ಮುತ್ತಿನ ಸರಗಳಿಂದ ಅಲಂಕೃತನೂ, ಹಾಹಾನಾಮಕನೇ ಮೊದಲಾದ ಗಂಧರ್ವಗಾನದಿಂದ ಸಂತೋಷಗೊಳ್ಳುವವನೂ, ಬೃಹಸ್ಪತಿ ಸ್ತೋತ್ರಪಾತ್ರನೂ, ಭದ್ರಕಾಳೀಮನೋಹರನೂ ಆದ ವೀರಭದ್ರೇಶ್ವರನು ಸರ್ವೋತ್ಕೃಷ್ಟನಾಗಲಿ).

—ಹೀಗೆ ವಿದ್ವತ್ಪೂರ್ಣವೂ, ವಿಶಿಷ್ಟ ಶೈಲಿಯದೂ, ವಿಶೇಷ ಮಾದರಿಯ ಕಾವ್ಯ ಪ್ರಭೇದದಿಂದ ಕೂಡಿದುದೂ ಆದ 'ವೀರಭದ್ರೋದಾಹರಣಗದ್ಯ' ಕಾವ್ಯವು ಆಕಾರದಲ್ಲಿ ಕಿರಿದಾದರೂ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದ ಷಡಕ್ಷರದೇವನ ಚಿಕ್ಕ ಸ್ತೋತ್ರ ಸಾಹಿತ್ಯವೆನಿಸಿದೆ. ಕವಿಯ ಅದ್ಭುತ ಸಂಸ್ಕೃತ ಪಾಂಡಿತ್ಯಕ್ಕೆ ಈ ಚಿಕ್ಕ ಕಾವ್ಯವೊಂದು ಜ್ವಲಂತ ನಿದರ್ಶನವೆನಿಸಿದೆ. ಕಳಿಕೆ-ಆಭಾಸಾದಿ ವಿಶೇಷ ವಿವರಣೆಯ ಪದ್ಯದ ದಾಟಿಯ ಗದ್ಯಭಾಗದ ಲಕ್ಷಣವನ್ನು ವಿದ್ವಾಂಸರು ಕಂಡು ಹಿಡಿಯಬೇಕಾಗಿದೆ.

೩ ಶಿವಾಧಿಕ್ಯ ರತ್ನಾವಳಿ:

ಶಿವನ ಆಧಿಕ್ಯವನ್ನು ಪ್ರತಿಷ್ಠಾಪಿಸುವ ವಿದ್ವತ್ಪೂರ್ಣ ಚಿಕ್ಕ ಕೃತಿಯಾದ ಈ ಶಿವಾಧಿಕ್ಯ ರತ್ನಾವಳಿಯಲ್ಲಿ ಒಟ್ಟು ಒಂದುನೂರಒಂದು ಶಾರ್ದೂಲವಿಕ್ರೀಡಿತ ವೃತ್ತಗಳಿವೆ. ಷಡಕ್ಷರದೇವನಿಗೆ ಇದ್ದ ಶ್ರುತಿ, ಸ್ಮೃತಿ, ವೇದಾಗಮೋಪನಿಷತ್ತುಗಳ

ಜ್ಞಾನಕ್ಕೆ ಈ ಕೃತಿ ಉತ್ತಮ ನಿದರ್ಶನವೆನಿಸಿದೆ. ತನ್ನನ್ನು ಕುರಿತು ಕವಿ........ " ಶಾಸ್ತ್ರಮ್ನಾಯಾಗಮಜ್ಞಸ್ಸ್ಫುರದುಭಯಕವಿಪ್ರಾತವಿಖ್ಯಾತಕೀರ್ತಿಃ " [17] ಎಂದು ಹೇಳಿಕೊಂಡಿರುವುದರ ಸಾರ್ಥಕ್ಯವನ್ನು ಈ ಕೃತಿಯಲ್ಲಿ ಕಾಣುತ್ತೇವೆ. ಕೃತಿ ಕಿರಿದಾದರೂ ತರ್ಕಬದ್ಧವಾದ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಸಾರಸಂಗ್ರಹ ನಿರೂಪಣಾ ದೃಷ್ಟಿಯಿಂದ ಮಹತ್ವಪದ್ದಾಗಿದ್ದು ಸಮಗ್ರ ಕಾವ್ಯ ಸಂಸ್ಕೃತದಲ್ಲಿದೆ.

ರಾತ್ರಿರ್ನೈವ ದಿವಾಚನೈವ ಸದಸದ್ವಸ್ತ್ವಂತರಂ ನೋಯದಾ- |
ಸೋಸ್ತ್ಯೇಕಃ ಶಿವಏವಕೇವಲ ಇತಿ ಪ್ರೋಕ್ತಃ ಸಏವಾಕ್ಷರಃ |
ಭೂಯೋಸೌ ಸವಿತುರ್ವರೇಣ್ಯ ಇತಿ ಸಾ ಪ್ರಜ್ಞಾ ಪುರಾಣೀ ತತಃ | [18]
ಪ್ರಾದುರ್ಭೂತಿ ಮಗಾದಿತಿ ಸ್ಫುಟತರಂ ಮಂತ್ರಾಗ ಮಾಂತೋಕ್ತಿಭಿಃ ||

--ಈ ಪದ್ಯದಲ್ಲಿ ಉಪನಿಷದಾದಿಗಳಲ್ಲಿ 'ಆತ್ಮಾವಾ ಇದಮಗ್ರ ಆಸೀತ್' ಇತ್ಯಾದಿ ವಾಕ್ಯಗಳಿಂದಲೂ, ಋಗ್ವೇದದ 'ನೋಸದಾಸೀತ್ ನಾಸಸದಾಸೀತ್....' ಎಂಬ ನಾಸದೀಯ ಸೂಕ್ತದ ಮಂತ್ರವನ್ನೂ, 'ಯದಾ ತಮಸ್ತನ್ನದಿವಾನರಾತ್ರಿಃ ನಸನ್ನಚಾಸಚ್ಛಿವ ಏವಕೇವಲಃ' ಎಂಬ ಶ್ವೇತಾಶ್ವತರೋಪನಿಷತ್ತನ್ನೂ, 'ಓಂ ಸವಿತುರ್ವರೇಣ್ಯಂ ಭರ್ಗೋದೇವಸ್ಯಧೀಮಹೀ' ಎಂಬ ಗಾಯಿತ್ರೀ ಮಂತ್ರವನ್ನೂ ಉದಾಹರಿಸುವುದರ ಮೂಲಕ ಸೃಷ್ಟಿಯ ಆದಿಯಲ್ಲಿ ಸದಸದ್ ಎರಡೂ ಅಲ್ಲದ ಸರ್ವ ಶೂನ್ಯನಿರಾಲಂಬ ಮಹಾತತ್ತ್ವವು ಒಂದೇ ತಾನೇತಾನಾಗಿರುತ್ತೆಂಬ ವೀರಶೈವ ಸಿದ್ಧಾಂತ ರಹಸ್ಯವನ್ನು ಪ್ರತಿಪಾದಿಸುವುದನ್ನು ಕಾಣಬಹುದಾಗಿದೆ. ಹೆಸರೇ ಸೂಚಿಸುವಂತೆ ಶಿವನ ಸರ್ವೋತ್ಕೃಷ್ಟವನ್ನು ಸಾರುವುದು ಈ ಚಿಕ್ಕ ಕೃತಿಯ ಪ್ರಧಾನಾಂಶವೆಂಬುದನ್ನು ಮರೆಯಲಾಗದು. ಪ್ರಥಮ ಪದ್ಯದಲ್ಲಿ ವೇದ ಸ್ತುತ್ಯನೂ, ಲೋಕೇಶನೂ, ಸೃಷ್ಟಿಕರ್ತನೂ, ವಿಷ್ಣು ಬ್ರಹ್ಮಾದಿ ಪೂಜಿತನೂ ಆದ ಶಿವನು ನಮಗೆ ಸಂಪತ್ತನ್ನುಂಟುಮಾಡಲಿ ಎಂಬ ಸ್ತೋತ್ರವನ್ನು ಮಾಡಿದಮೇಲೆ, ಮುಂದುವರಿದು ಶಿವಸರ್ವೋತ್ಕೃಷ್ಟಪರವಾದ ಪದ್ಯಗಳು ಗಂಭೀರಗತಿಯಿಂದ ಸಾಗುತ್ತವೆ. ಸಂಸ್ಕೃತ ದಲ್ಲಿ ಕವಿಯ ಪ್ರೌಢಿಮೆ ಈ ಕಾವ್ಯದಲ್ಲಿ ಚೆನ್ನಾಗಿ ವ್ಯಕ್ತವಾಗಿದೆ.

---

17 ವೀರಭದ್ರೋದಾಹರಣ ಗದ್ಯ ೧೦. ಸಾಲು-೨.

18 ಈ ಸಾಲಿನ ಕೊನೆಯ ಎರಡಕ್ಷರಗಳು ನಾವು ನೋಡಿದ ಪುಸ್ತಕದಲ್ಲಿ 'ತತ್ವಃ' ಎಂದಿದ್ದರೆ ಛಂದೋಭಂಗ ಅರ್ಥಭಂಗವಾಗುತ್ತದೆ. ಛಂದೋಭಂಗ ಷಡಕ್ಷರಿಯ ಯಾವ ಕಾವ್ಯ ದಲ್ಲೂ ಶಕ್ಯವೇ ಇಲ್ಲ. ಆದ್ದರಿಂದ 'ತತಃ' ಆಗಿರಬೇಕೆಂದು ನಾವು ಭಾವಿಸಿ ಬರೆದಿದ್ದೇವೆ. ಎಳಂದೂರಿನಲ್ಲಿ 'ಶಿವಕವಿ ಷಡಕ್ಷರಿ' ಎಂದು ಪ್ರಕಟಿಸಿದ ಗ್ರಂಥದಲ್ಲಿ ಈ ಪದ್ಯವನ್ನು ಉದ್ಧಾಹರಿಸಿದ್ದಾರೆ.

ಎರಡನೆಯ ಪದ್ಯದಲ್ಲಿ

ಐಶ್ವರ್ಯಂ ಯದಖಂಡಿತಂ ನಿರುಪಮಂ ಸಾರ್ವಜ್ಞಮತ್ಯುನ್ನತಂ |
ವೈರಾಗ್ಯಂ ನಿರವದ್ಯಮೇವ ಚರಿತಂ ಕಾರುಣ್ಯಮತ್ಯದ್ಭುತಂ |
ಸ್ವಾತಂತ್ರ್ಯಂ ಸಹಜಂ ಪತಿತ್ವಮಸಮಂ ನೈರ್ಮಲ್ಯಮತ್ಯುಜ್ವಲಂ |
ಯಸ್ಮಿನ್ ನಿತ್ಯಗುಣಾಃ ಕಲಂಕರಹಿತಾಃ ತಸ್ಮೈನಮಶ್ಯಂಭವೇ ||೨||

(ಸಮಗ್ರೈಶ್ವರ್ಯವೂ, ಅನುಪಮ ಸರ್ವಜ್ಞತ್ವವೂ, ಶ್ರೇಷ್ಠ ವೈರಾಗ್ಯವೂ, ದೋಷರಹಿತತ್ವವೂ, ಆಶ್ಚರ್ಯಕರಕೃಪೆಯೂ, ಸ್ವತಂತ್ರತ್ವವೂ, ಅಸದೃಶ ಸರ್ವಕರ್ತೃತ್ವವೂ, ಪ್ರಕಾಶಮಾನವಾದ ನಿರ್ಮಲತ್ವವೂ ಯಾರಲ್ಲಿ ಶಾಶ್ವತ ಗುಣಗಳೋ ಅಂಥ ಕಲಂಕರಹಿತ ಶಿವನಿಗೆ ನಮಸ್ಕಾರಗಳು).

—ಹೀಗೆ ಶಿವನನ್ನು ನಮಸ್ಕರಿಸಿ ಮುಂದಿನ ವಸಂತ ತಿಲಕ ವೃತ್ತದಿಂದ ಶಿವನ ಶ್ರೇಷ್ಠತ್ವವನ್ನು ಪ್ರತಿಪಾದಿಸುವ ಪುರಾಣ ಕಥೆಗಳನ್ನು ಹೇಳುವನು.

ಚಕ್ರೇ ಮಹೋತ್ಪಲಸಖಾವಚಲಾಹ್ವಯೌ ಯೌ |
ಯಸ್ಯೈವ ಕಾರ್ಮುಕರಥಾವಪಿ ವಾಜಿಸೂತೌ |
ಬ್ರಹ್ಮಾಹ್ವಯೌ ಶರಗುಣಾವಪಿ ಚಕ್ರಿಣೌದ್ವೌ |
ಜಾತೌ ಜಯಾಯ ಭವತಾಂ ಭವತಾತ್ಪುರಾರೀ ||

—ಇಲ್ಲಿ ಶಿವನಿಗೆ 'ಪುರಾರಿ' ಎಂಬ ಹೆಸರಿರುವುದರ ಸಾರ್ಥಕ್ಯವನ್ನು ಕವಿ ಪ್ರದಿಪಾದಿಸುತ್ತಾನೆ. ಸೂರ್ಯ ಚಂದ್ರರೇ ರಥದ ಗಾಲಿಗಳು, ಮೇರುವೇ ಬಿಲ್ಲು, ಭೂಮಿಯೇ ತೇರು, ವೇದಗಳೇ ಕುದುರೆಗಳು, ಬ್ರಹ್ಮ ಸಾರಥಿ, ವಿಷ್ಣುವೇ ಬಾಣ, ಆದಿಶೇಷ ಬಿಲ್ಲಿನ ಹೆದೆಯಾಗಿ ತ್ರಿಪುರ ಸಂಹಾರ ಮಾಡಿದ ಪುರಾರಿಯು ನಿಮ್ಮ ವಿಜಯಕ್ಕಾಗಲಿ ಎಂಬುದೇ ಈ ಪದ್ಯದ ತಾತ್ಪರ್ಯ. ನಾಲ್ಕನೆಯ ಪದ್ಯದಲ್ಲಿ ಶಿವಾಧಿಕ್ಯ ರತ್ನಾವಳಿ ಗ್ರಂಥವನ್ನು ಯಾವುದರ ಆಧಾರದ ಮೇಲೆ ರಚಿಸುವೆನೆಂಬುದನ್ನು ತಿಳಿಯಪಡಿಸುತ್ತ ಹೀಗೆ ಹೇಳುತ್ತಾನೆ.

ಶಾ|ವಿ|ವೃ|| ನತ್ವಾನಂದಿಗಣೇಂದ್ರಭೃಂಗಿವಿಲಸದ್ವೀರೇಶಮುಖ್ಯಾನ್ ಗಣಾನ್ |
ಭಕ್ತ್ಯಾऽಹಂಶ್ರುತಿ ತಂತ್ರವಾಕ್ಯನಿಚಯೈಃ ಪೌರಾಣಿಕೈರ್ಭಾಷಣೈಃ |
ಪೂರ್ವಾಚಾರ್ಯಕೃತಾನಿ ವೀಕ್ಷ್ಯಬಹುಧಾಶಾಸ್ತ್ರಾಣಿಯುಕ್ತ್ಯನ್ವಿತಾಂ |
ಕುರ್ವೇऽಸಮ್ರುಚಿ ಸಂಯುತಾಂ ವರಶಿವಾಧಿಕ್ಯೋರುರತ್ನಾವಳೀಂ ||೪||

—ನಂದಿ, ಗಣಪತಿ, ಭೃಂಗಿ, ವೀರಭದ್ರಾದಿಗಳನ್ನು ನಮಸ್ಕರಿಸಿ, ರೇಣುಕ ದಾರುಕಾದಿ ಪೂರ್ವಾಚಾರ್ಯರಿಂದ ವೇದಾಗಮಪುರಾಣವಾಕ್ಯಗಳ ಆಧಾರದಿಂದ

ರಚಿಸಲ್ಪಟ್ಟ ಸಿದ್ಧಾಂತ ಬೋಧಕಗಳಾದ ಗ್ರಂಥಗಳನ್ನು ನೋಡಿ ಅವುಗಳ ಅರ್ಥ ತಿಳಿದು ಯುಕ್ತಿಯುಕ್ತವೂ, ಸತ್ಪುರುಷರ ಪ್ರೀತಿಗೆ ಪಾತ್ರವಾದುದೂ ಆದ ಶಿವಾಧಿಕ್ಯ ರತ್ನಾವಳೀ ಗ್ರಂಥವನ್ನು ರಚಿಸುತ್ತೇನೆಂದು ಹೇಳುವಲ್ಲಿ ಈ ದಾರ್ಶನಿಕ ಕವಿಯ ಉದ್ದೇಶವನ್ನು ನಾವು ಸ್ಪಷ್ಟವಾಗಿ ತಿಳಿಯಬಹುದಾಗಿದೆ.

ಧ್ಯೇಯಶ್ಶಂಕರ ಏಕಏವ ಜನುಷಾಮುಕ್ತ್ಯೋ ವಿಧಾತ್ರಬ್ಜದೃ- |
ಗ್ರುದ್ರೇಂದ್ರಾನಹಿಯಸ್ಯ ಸೂತಿ ಸಹಿತಾಃ ಸ್ಥೌಲ್ಯೇನಭೂತ್ಯೈರಪೀ |
ಮೋಕ್ಷಾಪೇಕ್ಷಿಭಿರಿತ್ಯಥರ್ವಣಶಿಖಾಧ್ಯೇಯತ್ಪನಿರ್ಧಾರಣಮ್ |
ಶಂಭೋರೇವಚಕಾರಣಸ್ಯಜಗತಾಂ ಬ್ರೂತೇಪ್ರಮೋದಾತ್ಸ್ಫುಟಂ ||

ಈ ಪದ್ಯದಲ್ಲಿ ಶಿವಸರ್ವೋತ್ಕೃಷ್ಟತೆಯನ್ನು ಸ್ಥಾಪಿಸುವುದಕ್ಕಾಗಿ ಅಥರ್ವ ಶಿರೋಪನಿಷತ್ತುಗಳೇ ಮೊದಲಾದ ವಾಕ್ಯಗಳನ್ನು ಉದಾಹರಿಸುತ್ತ, ಮೋಕ್ಷವನ್ನು ಬಯಸುವವರು ಶಿವನೊಬ್ಬನನ್ನೇ ಧ್ಯಾನಿಸಬೇಕಲ್ಲದೆ ವಿಷ್ಣು ಬ್ರಹ್ಮ ರುದ್ರ ಇಂದ್ರಾದಿ ಗಳಾರೂ ಮೋಕ್ಷವನ್ನೀಯಲು ಸಮರ್ಥರಲ್ಲವೆಂದೂ ಹೇಳುವನು. ಏಕೆಂದರೆ ವಿಷ್ಣು ಮೊದಲಾದ ದೇವತೆಗಳು ಜೀವಕೋಟ ಪ್ರವಿಷ್ಟರಾಗಿರುವುದರಿಂದ ಮುಮುಕ್ಷುಗಳಿಗೆ ಮೋಕ್ಷವನ್ನೀಯಲು ಅಸಮರ್ಥರು, ಶಿವನು (ನಿಷ್ಕಲ ಪರಬ್ರಹ್ಮನು) ಸಂಸಾರ ರಹಿತನಾಗಿ ಪಾಶಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಮೋಕ್ಷಾಪೇಕ್ಷಿಗಳಾರೋ ಅವರಿಗೆ ಮೋಕ್ಷವನ್ನು ಕೊಡಲು ಶಕ್ತ ಆದ್ದರಿಂದ ಜೀವರುಗಳಿಗೆ ಶಿವನೊಬ್ಬನೇ ಮುಖ್ಯ ಧ್ಯೇಯ. —ಹೀಗೆ ಶಿವಾಧಿಕ್ಯವನ್ನು ಸ್ಥಾಪಿಸುತ್ತ ಹೋಗುತ್ತಾನೆ. ಈ ಗ್ರಂಥದಲ್ಲಿ ಕವಿ ಉಪಯೋಗಿಸದ ಶಾಸ್ತ್ರಾಗಮಗಳಿಲ್ಲ. ಷಡಕ್ಷರದೇವನ ಬಹುಶ್ರುತತ್ವವನ್ನು ಶಿವಾಧಿಕ್ಯರತ್ನಾವಳಿ ನಮಗೆ ಚೆನ್ನಾಗಿ ಪರಿಚಯ ಮಾಡಿ ಕೊಡುತ್ತದೆ. ಅಲ್ಲದೆ ಅವನ ಪ್ರೌಢಿಮೆಯ ಪರಿಚಯವನ್ನು ಮಾಡಿಕೊಡುತ್ತದೆ ಒಟ್ಟಿನಲ್ಲಿ ಇದೊಂದು ವಿದ್ವದ್ಗ್ರಾಹ್ಯವಾಗಬಲ್ಲ ಗ್ರಂಥವೇ ವಿನಾ ಅನ್ಯವಲ್ಲ. ಶಿವನು ಪಂಚವಿಂಶತಿಲೀಲೆಗಳನ್ನು ನಟಿಸಿದ ಎಲ್ಲ ವಿಷಯಗಳೂ ಯಥಾಪ್ರಕಾರ ಶಿವಸರ್ವೋತ್ಕೃಷ್ಟತೆಗೆ ಸಾಧನಗಳಾಗಿರುವುದು ಈ ಕೃತಿಯಲ್ಲಿ ಕಂಡುಬರುತ್ತದೆ. ಶಿವತತ್ತ್ವ ಮಂಜರಿಯನ್ನು ಈ ಗ್ರಂಥ ಹಲವಾರು ಅಂಶಗಳಲ್ಲಿ ಹೋಲಿಕೆಗೊಂಡಿದೆ. ಗ್ರಂಥಾಂತ್ಯದಲ್ಲಿ........ಗೀರ್ವಾಣ ಕರ್ನಾಟಕ ಭಾಷಾಮಯ ಸರಸ ಪ್ರಬಂಧ ರಚನಾ ಚಾತುರೀಧುರೀಣ ಶ್ರೀ ಬಾಲೇಂದು ಪುರವರಾಧೀಶಮುದ್ದಭೂಮಿಪ ಕುಲಗುರು ಶ್ರೀ ಷಡಕ್ಷರಸ್ವಾಮಿನಾ ರಚಿತಾ ಶಿವಾಧಿಕ್ಯ ರತ್ನಾವಳಿಃ ಸಂಪೂರ್ಣಾ"—ಎಂಬ ಗದ್ಯವಿದೆ.

೪ ಭಕ್ತಾಧಿಕ್ಯ ರತ್ನಾವಳಿ:

ಶಿವಾಧಿಕ್ಯ ರತ್ನಾವಳಿಯಲ್ಲಿ ಶಿವಾಧಿಕ್ಯವನ್ನು ಪ್ರತಿಪಾದಿಸಿದಂತೆ ಶಿವನಿಗೆ ಆಶ್ರಯನಾದ ಭಕ್ತನ ಆಧಿಕ್ಯವು ಭಕ್ತಾಧಿಕ್ಯ ರತ್ನಾವಳಿಯಲ್ಲಿ ಪ್ರತಿಪಾದಿಸಲ್ಪಟ್ಟಿದೆ.

ಯಥಾಪ್ರಕಾರ ಶ್ರುತಿ, ಸ್ಮೃತಿ, ಪುರಾಣಾಧಾರಗಳಿಂದ ವೀರಶೈವಮತಪ್ರಕ್ರಿಯಾ ಪೂರ್ವಕ ಭಕ್ತನಾದವನು ಶಿವನಾಗಲು ಆಚರಿಸಬೇಕಾದ ಅವನ ಕ್ರಿಯಾಚರಣೆಯ ಅಂಗಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ವಿವರಣೆ ಪ್ರೌಢ ಶೈಲಿ ಯಲ್ಲೇ ನಿರೂಪಿತವಾಗಿದೆ. ಇದೂ ಕೂಡ ಒಂದುನೂರು ಪದ್ಯಗಳುಳ್ಳದ್ದು. ನೂರೊಂದನೆಯ ಪದ್ಯದಲ್ಲಿ ಕವಿ ಸ್ವವಿಷಯಕವಾಗಿ ಹೇಳಿ ಗ್ರಂಥ ಪರಿಸಮಾಪ್ತಿ ಗೊಳಿಸುತ್ತಾನೆ. ಸಾಮಾನ್ಯವಾಗಿ ಅದ್ವೈತವು ವೀರಶೈವಕ್ಕೆ ಸಮೀಪವಾದ ಸಿದ್ಧಾಂತವಾಗಿದೆ. ಆದರೆ ಎರಡಕ್ಕೂ ಬೇಕಾದಷ್ಟು ಅಂತರವಿದೆ. ಸಕೃದ್ದರ್ಶನಕ್ಕೆ ವೀರಶೈವದಂತೇ ಭಾಸವಾಗುವ ಆ ಸಿದ್ಧಾಂತವನ್ನೇ ವೀರಶೈವಕ್ಕೆ ಭ್ರಾಂತಿಯಿಂದ ಕೆಲವರು ಅನ್ವಯಿಸಿ ಹೇಳುವುದುಂಟು. ಈ ದಾರ್ಶನಿಕನು ಅದನ್ನು ಅಲ್ಲಗಳೆದು ಶಿವಾ ದ್ವೈತವನ್ನು ಪ್ರತಿಪಾದಿಸಿರುವ ರೀತಿಯನ್ನು ಈ ಕೆಳಗಣ ಪದ್ಯದಲ್ಲಿ ಕಾಣಬಹುದು.

> ಮಿಥ್ಯಾತ್ವೇಽಸ್ತಿನಮಾ ಸಮಸ್ತ ಜಗತಾಂಮಾನಂಯದಸ್ತ್ಯೇವಚೇತ್ |
> ತತ್ಸತ್ಯಂಯದಿಸಂಭವೇದಭಿಮತಾ ದ್ವೈತಸ್ಯಹಾನಿಸ್ತಥಾ- |
> ಮಿಥ್ಯಾಚೇದ್ಯದಿ ತನ್ನಸಿಧ್ಯತಿ ಜಗನ್ಮಿಥ್ಯಾತ್ವಮೇತತ್ತತಃ |
> ಸತ್ಯಂಬ್ರಹ್ಮತದಸ್ಯವೇತದಖಿಲಂ ಮಿಥ್ಯೇವಕ್ತಾಜಡಃ ||

ಜಗನ್ಮಿಥ್ಯಾ ಎಂಬ ವಿಷಯದಲ್ಲಿ ಯಾವ ಪ್ರಮಾಣವೂ ಇರುವುದಿಲ್ಲ. ಒಂದು ವೇಳೆ ಹಾಗಿದ್ದರೆ ಆ ಪ್ರಮಾಣ ಅಸತ್ಯವಾಗಿರಬೇಕು. ಸ್ವತಃ ಸುಳ್ಳಾದ ಪ್ರಮಾಣವೊಂದರಿಂದ ಮತ್ತೊಂದರ ಅಸತ್ಯವನ್ನು ಸ್ಥಾಪಿಸುವುದಕ್ಕಾಗುವುದಿಲ್ಲ. ಆದ್ದರಿಂದ ಜಗತ್ತು ಮಿಥ್ಯ ಎಂದು ಸಾಧಿಸುವ ಪ್ರಮಾಣ ಸತ್ಯವಾಗುವುದಾದರೆ ಸತ್ಯವಾದ ಪರಬ್ರಹ್ಮ ತತ್ತ್ವ ಒಂದು, ಮತ್ತೊಂದು ಸತ್ಯವಾಗಿರುವ ಪ್ರಮಾಣತತ್ತ್ವ ಹೀಗೆ ಎರಡು ಸತ್ಯತತ್ತ್ವಗಳು ಇರಬೇಕಾಗಿರುವುದರಿಂದ ಅದ್ವೈತ ತತ್ತ್ವಕ್ಕೆ ಹಾನಿ ಯುಂಟಾಗುತ್ತದೆ. ಆದ್ದರಿಂದ ಬ್ರಹ್ಮಸತ್ಯ ಜಗನ್ಮಿಥ್ಯಾ ತತ್ತ್ವವು ಯುಕ್ತಿಯುಕ್ತ ವಾದುದಲ್ಲ. ವೀರಶೈವ ಸಿದ್ಧಾಂತವು ಈ ವಾದವನ್ನು ಒಪ್ಪುವುದಿಲ್ಲ. ಅಂಥವರು ಕೇವಲ ಜಡಬುದ್ಧಿಯುವರಲ್ಲದೆ ಬೇರಿಲ್ಲ. ವೀರಶೈವ ಸಿದ್ಧಾಂತವು ಶಿವನು ಎಷ್ಟು ಸತ್ಯವೋ ಶಿವನಿರ್ಮಿತವಾದ ಜಗತ್ತೂ ಅಷ್ಟೇ ಸತ್ಯವೆಂದು ಪ್ರತಿಪಾದಿಸುತ್ತದೆ. ಶಿವನಿಗೆ ಲೀಲೆಯಾದಾಗ ಇಲ್ಲದೆ ಇರುವ ವಿಶ್ವವಲ್ಲ, ಆವನಲ್ಲಿರುವ ಬೀಜರೂಪವಾದ ವಿಶ್ವವೇ ತೋರಿಕೆಗೆ ಬರುತ್ತದೆ. ಅವನು ಲೀಲೆಯಾದರೆ ಉಮಾಪತಿ; ಲೀಲೆ ತಪ್ಪಿದರೆ ಸ್ವಯಂಭೂ ಎಂಬ ತತ್ತ್ವದ ಮುಖ್ಯ ತಿರುಳನ್ನು ಈ ಪದ್ಯದಲ್ಲಿ ಪ್ರತಿಪಾದಿಸಿದ್ದಾನೆ.

ಅರಿಷಡ್ವರ್ಗಗಳು ಜೀವನಿಗೆ ಅನಿವಾರ್ಯ. ಭಕ್ತನಾದವನಿಗೆ ಅರಿಷಡ್ವರ್ಗ ಗಳು ಬೇಕು. ಯಾವ ಅರ್ಥದಲ್ಲಿ ಅವು ಬೇಕು; ಯಾವ ಅರ್ಥದಲ್ಲಿ ಬೇಡ ಎಂಬಂಶವನ್ನು ಈ ಕೆಳಗಿನ ಪದ್ಯದಲ್ಲಿ ಕವಿ ಬಹು ಮಾರ್ಮಿಕವಾಗಿ ಹೇಳಿದ್ದಾನೆ.

ಕಾಮಃಕಾಮಜಿತಿಪ್ರಮತ್ತಕರಣೇಕ್ರೋಧಃ ಪ್ರಸಾದೇಸದಾ-|
ಲೋಭಸ್ಸೋಮ ಭೃತಶ್ಶಿವಾರ್ಚಕ ಧನೇ ಮೋಹಸ್ಸುಶೀಲೇಮದಃ|
ಮಾತ್ಸರ್ಯಂ ಶಿವಭಕ್ತಿಮಾರ್ಗನಿರತೇಯಸ್ಯಾಪ್ತಿಸದ್ಭಿಃಸ್ಮೃತಃ|
ಸೋಯಂ ನಿರ್ಮಲ ವೀರಶೈವಮತಭಾಗ್ಭಕ್ತೋಜಗತ್ಪೂಜಿತಃ||

ಕಾಮವು ಶಿವನ ಸಂಪಾದನೆಯಲ್ಲಿರಬೇಕು. ಪ್ರಮತ್ತವಾದ ಇಂದ್ರಿಯಗಳ ಜಯದಲ್ಲಿ ಕ್ರೋಧಬೇಕು. ಪ್ರಸಾದ ಪರಿಣಾಮಿಯಾಗಿರಬೇಕೆಂಬ ವಿಷಯದಲ್ಲಿ ಲೋಭ ಬೇಕು. ಶಿವ ಪೂಜಕರಾದ ಸದ್ಭಕ್ತ ವೃಂದವೆಂಬ ಧನದಲ್ಲಿ ಮೋಹ ಗುಣ ಅವಶ್ಯಕ. ಸೌಶೀಲ್ಯ ಸಂಪಾದನೆಯ ವಿಷಯದಲ್ಲಿ ಮದ ತಾಳಬೇಕು. ಶಿವಭಕ್ತಿ ಮಾರ್ಗನಿರತನಾಗಿ ಬಾಳಲು ಮಾತ್ಸರ್ಯ ಬೇಕು. ಇವೆಲ್ಲವೂ ತನ್ನನ್ನು ಉದ್ಧಾರ ಮಾಡಿಕೊಳ್ಳುವ ವಿಷಯದಲ್ಲಿ ಅವಶ್ಯಕ ಎನ್ನುತ್ತಾನೆ. ಮೂಲಭೂತ ಗುಣಗಳಾದ ಇವೆಲ್ಲವೂ ಉದಾತ್ತೀಕರಣವಾಗಿ ಅವುಗಳ ಅಧೋಮುಖವು ಊರ್ಧ್ವಮುಖಗೊಂಡು ಶಿವಸಾಕ್ಷಾತ್ಕಾರದಲ್ಲಿ ನೆರವಾಗಬೇಕೆಂದು ಕವಿಯು ಪ್ರತಿಪಾದಿಸಿದ್ದಾನೆ. ಈ ಪದ್ಯವನ್ನು ಚನ್ನಬಸವಣ್ಣನವರ ಈ ಕೆಳಗಿನ ವಚನದಿಂದ ಪ್ರಭಾವಿತನಾಗಿ ಬರೆದಹಾಗೆ ಸಹೃದ್ದರ್ಶನಕ್ಕೆ ಹೊಳೆಯುವುದು.

"ಶಿವಭಕ್ತಿಯುಳ್ಳವಂಗೆ ಕಾಮ ಬೇಡ, ಕ್ರೋಧ ಬೇಡ, ಲೋಭ ಬೇಡ, ಮೋಹ ಬೇಡ, ಮದ ಬೇಡ, ಮಾತ್ಸರ್ಯಬೇಡ; ಶಿವಭಕ್ತಿಯುಳ್ಳವಂಗೆ ಕಾಮ ಬೇಕು, ಕ್ರೋಧ ಬೇಕು, ಲೋಭ ಬೇಕು, ಮೋಹ ಬೇಕು, ಮದ ಬೇಕು, ಮಾತ್ಸರ್ಯ ಬೇಕೆಂಬುದಕ್ಕಾವಗುಣ? ಬೇಡೆಂಬುದಕ್ಕಾವ ಗುಣ?.." [19]

—ಹೀಗೆ ಹೇಳುವ ವಿವರವಾದ ವಚನವನ್ನು ಕವಿ ಒಂದು ವೃತ್ತದಲ್ಲಿ ಅಡಕಗೊಳಿಸಿ ಹೇಳಿದ್ದಾನೆ. ಒಟ್ಟಿನಲ್ಲಿ ಷಡಕ್ಷರದೇವ ಒಬ್ಬ ಮಹಾ ಪ್ರತಿಭಾ ಸಂಪನ್ನ ಕವಿ; ಬಹುಶ್ರುತ ವಿದ್ವಾಂಸ; ದಾರ್ಶನಿಕ, ಅವನ ಸಮಗ್ರ ಕಾವ್ಯಗಳ ಕೂಲಂಕಷ ಅಭಿಪ್ರಾಯಗಳು ಸರ್ವಗ್ರಾಹ್ಯಗಳಾಗುವಂತೆ ಇಂದಿನ ವಿದ್ವಾಂಸರು ಪರಿಶ್ರಮ ಪಡಬೇಕಾಗಿದೆ. ಷಡಕ್ಷರದೇವನ ಲಘುಕಾವ್ಯಗಳ ಪರಿಚಯವೇ ಅನೇಕರಿಗೆ ಇಲ್ಲ. ಅವುಗಳಲ್ಲಿ ಕೆಲವು ಸ್ತೋತ್ರಗಳ ಪರಿಚಯವನ್ನು ಈ ಲೇಖನದಲ್ಲಿ ಮಾಡಿಕೊಡಲು ಪ್ರಯತ್ನಿಸಿದೆ.

---

19 ಚೆ. ಬ. ವಚನಗಳು. ಸಂ. ಆರ್. ಸಿ. ಹಿರೇಮಠ. ಭಕ್ತಸ್ಥಲವಚನ ಅ
ಪು: ೩೭ ನೋಡಿ.

ಭಾರತೀಯ ತರ್ಕಶಾಸ್ತ್ರದ ರೂಪುರೇಖೆಗಳು
(ಗೌತಮನ ಪೂರ್ವಕಾಲ)

—ಡಾ|| ಎಂ. ಎಸ್. ನರಸಿಂಹನ್

ಅಷ್ಟಾವಕ್ರ

ಮಹಾಭಾರತದ ವೇಳೆಗೆ ವಾದಕಲೆಯು ಬಹುರೂಪಗೊಂಡಿದ್ದು ಜನಪ್ರಿಯವಾಗಿದ್ದಿತೆಂಬುದಕ್ಕೆ ಅದರಲ್ಲಿ ಬರುವ ರಾಜಾ ಜನಕ ಮತ್ತು ಸುಲಭಾಗಳ ಸಂಭಾಷಣೆಯೇ ನಿದರ್ಶನ. ಅಂಥ ವಾದಕೋವಿದರ ಗುಂಪಿಗೆ ಸೇರಿದವನು ಅಷ್ಟಾವಕ್ರ. ಭಾರತದ ವನಪರ್ವದಲ್ಲಿ [1] ಬರುವ ಅವನ ಹೆಸರು ಆಗಿನ ಕಾಲದ ಆನ್ವಿಕ್ಷಿಕೀಶಾಸ್ತ್ರತತ್ವಗಳ ಪ್ರತೀಕವೆಂದರೆ ತಪ್ಪಾಗಲಾರದು. ಅವನ ತಂದೆ ಕಹೋದನು ಶ್ವೇತಕೇತುವಿನ ತಂದೆ ಉದ್ದಾಲಕನ ಶಿಷ್ಯ. ಅಷ್ಟಾವಕ್ರನು ಬಾಲ್ಯದಲ್ಲಿಯೇ ವಾದಕುಶಲತೆಗೆ ಖ್ಯಾತನಾಗಿದ್ದನು. ವಂದಿನ್ ಎಂಬ ಕುತರ್ಕಿಯನ್ನು ವಾದದಲ್ಲಿ ಸೋಲಿಸಲು ಮಿಥಿಲೆಯ ರಾಜನಾದ ಜನಕನು ಏರ್ಪಡಿಸಿದ್ದ ಒಂದು ಯಜ್ಞಕ್ಕೆ ಹೋದಾಗ ಸಣ್ಣ ಬಾಲಕನೆಂದು ದ್ವಾರಪಾಲಕರು ಅವನನ್ನು ತಡೆಗಟ್ಟಿದರು. ಪ್ರವೇಶಾನುಮತಿ ದೊರಕದಿರಲು ರಾಜನನ್ನು ಉದ್ದೇಶಿಸಿ ಬಾಲಕ 'ಬ್ರಾಹ್ಮಣರಿಲ್ಲದಿರುವಾಗ ದಾರಿಯು ಕಿವುಡ, ಕುರುಡ, ಹೆಂಗಸರು, ಭಾರ ಹೊರುವವರು ಮತ್ತು ದೊರೆಗೆ ಸೇರುತ್ತದೆ. ಆದರೆ ದ್ವಿಜರಿದ್ದರೆ ಅದು ಅವರಿಗೆ ಮಾತ್ರ ಸಲ್ಲತಕ್ಕದ್ದು' ಎಂದು ನುಡಿದನು. ಈ ಮಾತುಗಳನ್ನು ಕೇಳಿದ ತಕ್ಷಣವೇ ಅವನಿಗೆ ಒಳಗೆ ಹೋಗಲು ಅನುಮತಿ ದೊರಕಿತು. ಒಳಹೋಗಲು ಸಿದ್ಧನಾದ ಬಾಲಕನನ್ನು ಮತ್ತೆ ದ್ವಾರಪಾಲಕರು ತಡೆಗಟ್ಟಿ 'ವಂದಿನ್ ಆಜ್ಞೆಯ ಪ್ರಕಾರ ಹುಡುಗರಿಗೆ ಪ್ರವೇಶವಿಲ್ಲ' ಎನ್ನಲು ಅಷ್ಟಾವಕ್ರನು 'ನಾನು ವಯಸ್ಕ' ಎಲ್ಲ ವೇದಕರ್ಮಗಳನ್ನೂ ಅನುಷ್ಠಾನ ಮಾಡಿ ಅವುಗಳ ಫಲಶಕ್ತಿಯನ್ನು ಪಡೆದಿದ್ದೇನೆ.

---

1. ಮಹಾಭಾರತ—ವನಪರ್ವ. ಅಧ್ಯಾಯ ೧೩೨-೧೩೪.

ಒಬ್ಬ ವ್ಯಕ್ತಿ ಕೇವಲ ತಲೆ ನೆರೆಯುವುದರಿಂದ ಮಾತ್ರ ವಯಸ್ಕನಾಗುವುದಿಲ್ಲ. ವಯಸ್ಸಿನಲ್ಲಿ ಚಿಕ್ಕವನಾದರೂ ಜ್ಞಾನದಲ್ಲಿ ಹಿರಿಯನಾದವನನ್ನು ದೇವಾದಿದೇವತೆಗಳೂ ಸಹ ಹಿರಿಯವನೆಂದು ಭಾವಿಸುತ್ತಾರೆ' ಎಂದು ಪ್ರತ್ಯುತ್ತರಿಸಿದನು. ಅಷ್ಟಕ್ಕೆ ಮಾತನ್ನು ನಿಲ್ಲಿಸದೆ 'ಯಾರು ಆ ವಂದಿನ್? ಈಗ ಅವನೆಲ್ಲಿದ್ದಾನೆ? ಈಗಲೇ ಅವನನ್ನು ಇಲ್ಲಿಗೆ ಬರಹೇಳಿ, ಸೂರ್ಯನನ್ನು ನಕ್ಷತ್ರಗಳನ್ನು ನುಂಗಿಬಿಡುವಂತೆ ಈ ಕ್ಷಣವೇ ಅವನನ್ನು ನಿರ್ನಾಮ ಮಾಡಿಬಿಡುತ್ತೇನೆ" ಎಂದು ಹೇಳಿದನು. ಅದನ್ನು ಕೇಳಿದ ರಾಜಪರಿವಾರದವರು ವಂದಿನ್ನನನ್ನು ಯಜ್ಞಸ್ಥಳಕ್ಕೆ ಕರೆತಂದರು. ಅವನನ್ನು ನೋಡಿದ ತಕ್ಷಣವೇ ಅಷ್ಟಾವಕ್ರನು 'ನೀನು ನನ್ನ ಪ್ರಶ್ನೆಗಳಿಗೆ ಉತ್ತರಿಸುತ್ತೀಯೋ? ನಾನು ನಿನ್ನ ಪ್ರಶ್ನೆಗಳಿಗೆ ಉತ್ತರ ನೀಡುತ್ತೇನೆ' ಎಂದು ಘರ್ಜಿಸಿದನು. ಇಬ್ಬರ ನಡುವೆ ಚರ್ಚೆ ಆರಂಭವಾಯಿತು.

ಅಷ್ಟಾವಕ್ರ: ಯಾವ ವಸ್ತುಗಳು ಒಂದರಿಂದ ಸೂಚಿಸಲ್ಪಡುತ್ತವೆ?

ವಂದಿನ್: ಅನೇಕ ರೂಪಗಳಲ್ಲಿ ಪ್ರಜ್ವಲಿಸುವ ಅಗ್ನಿ ಒಂದೇ. ಜಗತ್ತೆಲ್ಲವನ್ನೂ ಬೆಳಗಿಸುವ ಸೂರ್ಯ ಒಂದೇ. ದೇವತೆಗಳಿಗೆಲ್ಲಾ ಇಂದ್ರನು ಒಬ್ಬನೇ. ಮೃತಪಿತೃಗಳ ದೇವ ಒಬ್ಬನೇ ಯಮ.

ವಂ: ಎರಡರಿಂದ ಸೂಚಿಸಲ್ಪಡುವ ವಸ್ತುಗಳಾವುವು?

ಅ: ಒಟ್ಟಿಗೆ ಚಲಿಸುವ ಇಬ್ಬರು ಮಿತ್ರರೆಂದರೆ ಇಂದ್ರ ಮತ್ತು ಅಗ್ನಿ. ಇಬ್ಬರು ದೇವಋಷಿಗಳೆಂದರೆ ಪರ್ವತ ನಾರದರು. ಇಬ್ಬರು ಅವಳಿ ಜವಳಿಗಳೆಂದರೆ ಅಶ್ವಿನೀಕುಮಾರರು. ಗಾಡಿಯ ಚಕ್ರಗಳು ಎರಡು. ಒಟ್ಟಿಗೆ ಜೀವಿಸುವ ಇಬ್ಬರೆಂದರೆ ಗಂಡಹೆಂಡಿರು.

ಅ: ಮೂರರಿಂದ ಸೂಚಿಸಲ್ಪಡುವ ವಸ್ತುಗಳಾವುವು?

ವಂ: ತಮ್ಮ ಕರ್ಮಫಲದಿಂದ ಹುಟ್ಟುವವರು ಮೂರು ಜಾತಿಯ ಜನ— ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ. ವಾಜಪೇಯದಲ್ಲಿ ಯಜ್ಞವನ್ನು ಆಚರಿಸುವುವು ಮೂರು ವೇದಗಳು. ಅಧ್ವರ್ಯುಗಳು ಯಾಗಗಳಲ್ಲಿ ಮೂರು ಸಲ ಪೂಜೆ ಆಚರಿಸುತ್ತಾರೆ. ಲೋಕಗಳ ಸಂಖ್ಯೆ ಮೂರು. ದೈವಿಕ ಪ್ರಭೆಗಳು ಮೂರು.

ವಂ: ನಾಲ್ಕರಿಂದ ವ್ಯಕ್ತವಾಗುವ ವಸ್ತುಗಳಾವುವು?

ಅ: ಬ್ರಾಹ್ಮಣನ ಜೀವನ ನಾಲ್ಕು ಆಶ್ರಮಗಳಿಂದ ಕೂಡಿರುತ್ತದೆ. ಯಜ್ಞ ಯಾಗಾದಿಗಳನ್ನು ಮಾಡುವವರು ನಾಲ್ಕು ವರ್ಣದವರು. ಮುಖ್ಯ ಬಿಂದುಗಳು ಮತ್ತು ಬಣ್ಣ ನಾಲ್ಕು. ಹಸುವಿನ ಪಾದ ನಾಲ್ಕು.

ಅ: ಐದರಿಂದ ಸೂಚಿಸಲ್ಪಡುವ ವಸ್ತುಗಳಾವುವು ?

ವಂ: ಅಗ್ನಿಗಳು ಐದು. ಪಂಕ್ತಿ ಛಂದಸ್ಸಿನಲ್ಲಿ ಐದು ಪಾದಗಳಿರುತ್ತವೆ. ಯಜ್ಞಗಳು ಐದು. ಜಲ ಅಪ್ಸರೆಯರ ಗುಚ್ಛದಲ್ಲಿ ಐವರಿದ್ದಾರೆ. ಪಂಜಾಬ್ ದೇಶದ ನದಿಗಳು ಐದು.

ವಂ: ಆರರಿಂದ ಸೂಚಿಸಲ್ಪಡುವ ವಸ್ತುಗಳಾವುವು ?

ಅ: ಯಜ್ಞಯಾಗಾದಿಗಳನ್ನು ಸ್ಥಿರಪಡಿಸುವಾಗ ಕೊಡುವ ಕೊಡುಗೆ ಆರು ಹಸುಗಳು. ಋತುಗಳು ಆರು. ಇಂದ್ರಿಯಗಳು ಆರು. ಕೃತ್ತಿಕಾಗುಚ್ಛದಲ್ಲಿರುವ ನಕ್ಷತ್ರಗಳು ಆರು. ಸಾಧ್ಯಸ್ಕಯಾಗದ ಸಂಖ್ಯೆ ಆರು.

ಅ: ಏಳರಿಂದ ಸೂಚಿಸಲ್ಪಡುವ ವಸ್ತುಗಳಾವುವು ?

ವಂ: ಸಾಕುವ ಪ್ರಾಣಿಗಳ ಸಂಖ್ಯೆ ಏಳು. ದುಷ್ಟ ಪ್ರಾಣಿಗಳ ಸಂಖ್ಯೆ ಏಳು. ಒಂದು ಯಜ್ಞವನ್ನು ಸಂಪೂರ್ಣಗೊಳಿಸುವಾಗ ಉಪಯೋಗಿಸುವ ಛಂದೋವೃತ್ತಗಳು ಏಳು. ಋಷಿಗಳ ಸಂಖ್ಯೆ ಏಳು. ಪ್ರಪಂಚದಲ್ಲಿ ಸನ್ಮಾನಿಸುವ ಕ್ರಮಗಳು ಏಳು. ವೀಣೆಯ ತಂತಿಗಳು ಏಳು.

ವಂ: ಎಂಟರಿಂದ ಸೂಚಿಸುವ ವಸ್ತುಗಳಾವುವು ?

ಅ: ಭಾರವನ್ನು ಎಳೆಯಲು ಉಪಯೋಗಿಸುವ ಹಗ್ಗದಲ್ಲಿ ಸೇರುವ ಹುರಿಗಳು ಎಂಟು. ಸಿಂಹವನ್ನು ತಿನ್ನುವ ಜಿಂಕೆಯ ಕಾಲುಗಳು ಎಂಟು. ದೇವಲೋಕವಾಸಿಗಳಲ್ಲಿ ವಸುಗಳು ಎಂಟು. ಒಂದು ಯಜ್ಞಕುಂಡದ ಮೂಲೆಗಳು ಎಂಟು.

ಅ: ಒಂಭತ್ತರಿಂದ ಸೂಚಿಸಲ್ಪಡುವ ವಸ್ತುಗಳಾವುವು.

ವಂ: ಪಿತೃಗಳಿಗೆ ಅಗ್ನಿಸ್ಪರ್ಶ ಮಾಡುವಾಗ ಉಪಯೋಗಿಸುವ ಮಂತ್ರಗಳು ಒಂಬತ್ತು. ಸೃಷ್ಟಿಯಲ್ಲಿ ನಿಯಮಿತ ಕೆಲಸಗಳು ಒಂಭತ್ತು. ವೃಹತೀ ವೃತ್ತದಲ್ಲಿ ಉಪಯೋಗಿಸುವ ಅಕ್ಷರಗಳು ಒಂಭತ್ತು. ಗಣಿತದಲ್ಲಿ ಒಂಭತ್ತು ಶಾಶ್ವತ ಸಂಖ್ಯೆ.

ವಂ: ಹತ್ತರಿಂದ ಸೂಚಿಸಲ್ಪಡುವ ವಸ್ತುಗಳಾವುವು ?

ಅ: ದಿಕ್ಕುಗಳ ಸಂಖ್ಯೆ ಹತ್ತು. ಹತ್ತು ನೂರುಗಳಿಂದ ಸಾವಿರ ಮಾಡಲ್ಪಡುತ್ತದೆ. ಸ್ತ್ರೀಯು ಗರ್ಭಿಣಿಯಾಗಿರುವ ಕಾಲ ಹತ್ತು ತಿಂಗಳು. ಸುಜ್ಞಾನದ ಆಚಾರ್ಯರು ಹತ್ತು ಮಂದಿ.

ಅ: ಹನ್ನೊಂದರಿಂದ ಸೂಚಿಸಲ್ಪಡುವ ವಸ್ತುಗಳಾವುವು?

ವಂ: ಇಂದ್ರಿಯಗಳ ವಿಕಾರ ಹನ್ನೊಂದು. ಯೂಪಗಳು ಹನ್ನೊಂದು. ಪ್ರಕೃತಿಯ ಅವಸ್ಥಾಭೇದಗಳು ಹನ್ನೊಂದು. ಸ್ವರ್ಗದೇವತೆಗಳಲ್ಲಿ ರುದ್ರರು ಹನ್ನೊಂದು.

ವಂ: ಹನ್ನೆರಡರಿಂದ ಸೂಚಿಸಲ್ಪಡುವ ವಸ್ತುಗಳಾವುವು?

ವರ್ಷದಲ್ಲಿ ತಿಂಗಳು ಹನ್ನೆರಡು. ಜಗತೀ ಛಂದಸ್ಸಿನಲ್ಲಿ ಒಂದು ಪಾದದಲ್ಲಿ ಹನ್ನೆರಡು ಅಕ್ಷರಗಳಿರುತ್ತವೆ. ಗೌಣ ಯಜ್ಞಗಳು ಹನ್ನೆರಡು. ಆದಿತ್ಯರ ಸಂಖ್ಯೆ ಹನ್ನೆರಡು.

ಅ: ಹದಿಮೂರರಿಂದ ಸೂಚಿಸಲ್ಪಡುವ ವಸ್ತುಗಳಾವುವು?

ವಂ: ಪೌರ್ಣಿಮೆಯ ನಂತರ ಬರುವ ತ್ರಯೋದಶಿ ಅತ್ಯುತ್ತಮವಾದುದು. ಭೂವಲಯದಲ್ಲಿ ಹದಿಮೂರು ದ್ವೀಪಗಳಿವೆ.

ಇಷ್ಟು ಹೇಳಿ ವಂದಿನ್ ಮಾತು ನಿಲ್ಲಿಸುತ್ತಾನೆ. ಅಷ್ಟಾವಕ್ರನು ಮುಂದುವರಿದು ಹದಿಮೂರು ಯಜ್ಞಗಳಲ್ಲಿ ಕೇಶೀ ಆಧಿಪತ್ಯ ವಹಿಸಿಕೊಳ್ಳುತ್ತಾರೆ. ಅತಿ ಛಂದಸ್ ವೃತ್ತವು ಹದಿಮೂರು ಅಕ್ಷರಗಳಿಂದ ರಚಿಸಲ್ಪಟ್ಟಿರುತ್ತದೆ.' ಎಂದು ಹೇಳಿದಾಗ ವಂದಿನ್ ಸ್ತಬ್ಧನಾಗಿ ಸುಮ್ಮನಿದ್ದನು. ಅಷ್ಟಾವಕ್ರನು ವಾದವನ್ನು ಇನ್ನೂ ಮುಂದುವರಿಸಲು ಉತ್ಸುಕನಾಗಿದ್ದುದನ್ನು ಕಂಡು ಸಭಿಕರು ಕರತಾಡನ ಮಾಡಿ ಅವನ ವಾದ ಕೌಶಲವನ್ನು ಸ್ತುತಿಸಿ ಕೊಂಡಾಡಿದರು. ಸಭಿಕರು ಅವನನ್ನು ಸಂಧಿಸಿ ಶ್ಲಾಘಿಸಿದಾಗ ಅವರನ್ನು ಕುರಿತು 'ಇದುವರೆವಿಗೂ ವಾದದಲ್ಲಿ ಸೋತವರನ್ನು ವಂದಿನ್ ನೀರುಪಾಲು ಮಾಡುತ್ತಿದ್ದನು. ಇಂದು ಅದೇ ಗತಿ ಅವನಿಗಾಗಲೀ ಅವನನ್ನು ನೀರಿಗೆಸೆಯಿರಿ' ಎಂದನು. ರಾಜನ ಕಡೆ ತಿರುಗಿ 'ಹೊಗಳಿಕೆ ನಿಮ್ಮ ತಲೆಯನ್ನು ಕೆಡಿಸಿದೆಯೋ? ನಮ್ಮ ಮಾತು ನಿಮ್ಮ ಕಿವಿ ಮುಟ್ಟಲಿಲ್ಲವೇ? ಎಂದು ಕೇಳಿದಾಗ ಸಭಾಧ್ಯಕ್ಷನಾಗಿದ್ದ ರಾಜ 'ನಿಮ್ಮ ಮಾತು ಅದ್ಭುತವೂ, ಅಮಾನುಷವೂ ಆದುದು. ವಾದದಲ್ಲಿ ಸೋಲಿಸಿದುದರಿಂದ ವಂದಿನ್ನನ್ನು ನಾನು ನಿಮಗೆ ಒಪ್ಪಿಸಿದ್ದೇನೆ' ಎಂದನು.

ಅಷ್ಟಾವಕ್ರನ ವಾದಕಲಾ ಕೌಶಲ್ಯದಿಂದ ಸಂತುಷ್ಟನಾದ ದೊರೆ ಮತ್ತೆ ಅವನ ಮೇಧಾಶಕ್ತಿಯನ್ನು ಪರೀಕ್ಷಿಸಲು ಹೀಗೆಂದನು—

"ಯಾವುದು ಮುನ್ನೂರರವತ್ತು ಪಟ್ಟಿಗಳಿಂದ, ಹನ್ನೆರಡು ಭಾಗಗಳಿಂದ, ಮೂವತ್ತು ಉಪಭಾಗಗಳಿಂದಲೂ, ಪ್ರತಿ ಉಪಭಾಗವೂ ಇಪ್ಪತ್ತನಾಲ್ಕು ಭಾಗಗಳಿಂದ ಕೂಡಿರುತ್ತದೆಯೋ ಅದನ್ನು ತಿಳಿಯುವವನೇ ಪಂಡಿತ".

ಇದರ ಅರ್ಥವನ್ನು ಗ್ರಹಿಸಿದ ಅಷ್ಟಾವಕ್ರನು "ಇಪ್ಪತ್ತನಾಲ್ಕು ಉಪಭಾಗಗಳಿಂದಲೂ, ಆರು ಚಕ್ರನಾಭಿಗಳಿಂದಲೂ, ಹನ್ನೆರಡು ಸುತ್ತುಗೆರೆಗಳಿಂದಲೂ, ಮುನ್ನೂರ ಅರವತ್ತು ಪಟ್ಟಿಗಳಿಂದಲೂ ಕೂಡಿದ ಕಾಲಚಕ್ರವು ನಿನ್ನನ್ನು ರಕ್ಷಿಸಲಿ" ಎಂದು ಪ್ರತ್ಯುತ್ತರಿಸಿದನು.

ಜನಕ ಮತ್ತೆ ಪ್ರಶ್ನಿಸಿದ "ಹದ್ದಿನಂತೆ ಎರಗುವ ರಥಕ್ಕೆ ಹೂಡಿರುವ ಎರಡು ಅಶ್ವಗಳಂತೆ ಜೊತೆಯಲ್ಲಿ ಹೋಗುವುದು ದೇವತೆಗಳಲ್ಲಿ ಯಾರಿಗೆ ದೊರಕುತ್ತದೆ?"

"ದೇವರು ನಿಮ್ಮ ಮನೆಯನ್ನು ಮಾತ್ರವಲ್ಲ ನಿಮ್ಮ ಶತ್ರುಗಳನ್ನೂ ಸಹ ಗುಡುಗು ಮಿಂಚೆಂಬ ಎರಡರಿಂದ ಪಾರುಮಾಡಲಿ. ಯಾರು ಗಾಳಿಯ ಸಾರಥಿಯೋ (ಮೋಘ) ಆ ದೇವರು ಅವುಗಳನ್ನು ಪಡೆಯಲಿ" ಎಂದು ಪ್ರತ್ಯುತ್ತರ ಕೊಟ್ಟನು ಅಷ್ಟಾವಕ್ರ.

ಹಸನ್ಮುಖಿಯಾದ ದೊರೆ ಮತ್ತೆ ಪ್ರಶ್ನಿಸಿದ: "ನಿದ್ರೆಯಲ್ಲಿಯೂ ಯಾವುದು ಕಣ್ಣು ಮುಚ್ಚುವುದಿಲ್ಲ? ಜನನವಾದಮೇಲೂ ಯಾವುದು ಚಲಿಸುವುದಿಲ್ಲ? ಹೃದಯವಿಲ್ಲದಿರುವುದು ಯಾವುದು? ತನ್ನ ವೇಗವನ್ನು ತಾನೇ ಯಾವುದು ಹೆಚ್ಚಿಸುತ್ತದೆ?

ಅಷ್ಟಾವಕ್ರ ಉತ್ತರಿಸಿದ: "ನಿದ್ರೆಯಲ್ಲಿಯೂ ಮೀನು ಕಣ್ಣು ಮುಚ್ಚುವುದಿಲ್ಲ. ಜನ್ಮವೆತ್ತಿದಮೇಲೂ ಚಲಿಸದಿರುವುದು ಮೊಟ್ಟೆ. ಹೃದಯವಿಲ್ಲದಿರುವುದು ಕಲ್ಲು. ತನ್ನ ವೇಗವನ್ನು ತಾನೇ ಹೆಚ್ಚಿಸುವುದು ನದಿ.

ಅಷ್ಟಾವಕ್ರನ ಅದ್ಭುತವಾದ ಕೌಶಲ್ಯವನ್ನು ಮನಗೊಂಡ ದೊರೆ" ನೀನೊಬ್ಬ ಸಾಧಾರಣನಲ್ಲ. ಅತಿಮಾನುಷ ವ್ಯಕ್ತಿ" ಎಂದು ಶ್ಲಾಘಿಸಿ ಅವನನ್ನು ಸನ್ಮಾನಿಸಿ ಬೀಳ್ಕೊಟ್ಟನು.

ಮಹಾಭಾರತದಲ್ಲಿ ನಿರೂಪಿತವಾಗಿರುವ ಅಷ್ಟಾವಕ್ರನ ಈ ವೃತ್ತಾಂತ ಅಂದಿನ ಕಾಲದಲ್ಲಿ ವಾದಶಾಸ್ತ್ರಗಳ ಸ್ಥಿತಿಗತಿಗಳ ಪ್ರತೀಕ. ವೇದಾಧ್ಯಯನ ಸಂಪನ್ನರಾದ ಗುರುವಿನೆಡೆ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಲ್ಲದೆ ಆಗಿಂದಾಗ್ಯೆ ನಾನಾ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದ[1] ವಿದ್ಯಾರ್ಥಿಗಳ ತಂಡ ವೇದಗಳ ಕಾಲದಿಂದಲೂ ಪ್ರಾಚೀನ ಭಾರತದ ಶಿಕ್ಷಣಕ್ರಮದ ಒಂದು ವಿಶೇಷಾಂಶ. "ಸಂಚಾರಿ

---

1. ಶತಪಥ ಬ್ರಾಹ್ಮಣ iv-2-4-1
('ಚರ್' ಧಾತುವಿನಿಂದ ಬರುವ) ಓದುವ ವ್ರತವನ್ನಾಚರಿಸುತ್ತಿದ್ದುದರಿಂದ ಅವರಿಗೆ ಚಾರಕರೆಂದು ಹೆಸರು ಬಂದಿತೆಂದು ಆಚಾರ್ಯ ಶಂಕರರು ಅಭಿಪ್ರಾಯ ಸೂಚಿಸಿದ್ದಾರೆ.

ಜ್ಞಾನಭಂಡಾರ"ದಂತಿದ್ದ ಅಂಥ ಬುಧಜನರ ತಂಡ ನಿಜವಾಗಿಯೂ ವಿವಿಧ ಶಾಸ್ತ್ರಗಳ ವೈದಿಕ ವಾಙ್ಮಯ ಪ್ರಚಾರಕ್ಕೆ ಕಾರಣವಾಯಿತು. ದೇಶ ಪರ್ಯಟನ ಮಾಡಿ ವಾದ ಹೂಡಿ ಚರ್ಚೆ ನಡೆಸಿ ವಿಜೇತರಾಗಿ ಖ್ಯಾತಿ ಗಳಿಸಿದ್ದ ಅಂಥ ವಾದ ಪಟುಗಳಲ್ಲಿ, ಶತಪಥ ಬ್ರಾಹ್ಮಣ[1] ಹೇಳುವಂತೆ 'ಅಮರವಾದ ಬ್ರಹ್ಮವನ್ನು ಪಡೆಯುವ ಯಜ್ಞವೇ ಸ್ವಾಧ್ಯಾಯ' ಎಂದು ನಂಬಿ ಆ ತತ್ವವನ್ನು ಅನುಷ್ಠಾನದಲ್ಲಿ ತಂದಿದ್ದ ನಿಷ್ಠರಲ್ಲಿ ಅಷ್ಟಾವಕ್ರನೊಬ್ಬ. ಅದೇ ರೀತಿಯಲ್ಲಿ ಪ್ರಾಚೀನ ಭಾರತದಲ್ಲಿ ರೂಢಿಯಲ್ಲಿದ್ದ ಮತ್ತೊಂದು ಬಗೆಯ ವಿದ್ವಾಂಸರನ್ನು ವಂದಿನ್ ಪ್ರತಿನಿಧಿಸುತ್ತಾನೆ. ಈ ಬಗೆಯ ಜನ ರಾಜಮಹಾರಾಜರುಗಳಿಂದ ಪೋಷಿತರಾದ ವಾದಪಟುಗಳು. ವಾದಕಲೆಯೇ ಅವರ ಜೀವನ ವೃತ್ತಿಯಾಗಿದ್ದಿತು. ವಂದಿನ್ ಜನಕ ಮಹಾರಾಜನ ಬಳಿ ಈ ರೀತಿ ಆಶ್ರಯ ಪಡೆದಿದ್ದನು. ಇಂಥ ಕೋವಿದರಿಗೆ ಚರ್ಚಾಪಟುಗಳಿಗೆ ಪಂದ್ಯ ಹೂಡಲು ಯಜ್ಞಯಾಗಾದಿ ಸಂದರ್ಭಗಳು ಅಥವಾ ರಾಜನ ಒಡ್ಡೋಲಗ ವೇದಿಕೆಯಾಗುತ್ತಿದ್ದುದು ಪ್ರಾಚೀನ ಭಾರತದ ಶಾಸ್ತ್ರಾಭ್ಯಾಸದ ಮತ್ತೊಂದು ಐತಿಹ್ಯ. ಅದರಲ್ಲಿಯೂ ರಾಜಾ ಜನಕನ ಆಸ್ಥಾನ ಇಂಥ ಸಭೆ ಸಮಾರಂಭಗಳಿಗೆ ಬಹು ಖ್ಯಾತವಾಗಿದ್ದಿತು. ಸ್ವತಃ ಜ್ಞಾನಪ್ರಿಯನಾದ ಅವನು ಪಂಡಿತರುಗಳನ್ನು ತನ್ನ ಒಡ್ಡೋಲಗಕ್ಕೆ ಆಹ್ವಾನಿಸಿ ಚರ್ಚೆಗಳಿಗೆ ಅವಕಾಶ ಮಾಡಿ ತಾನೂ ಭಾಗವಹಿಸಿ ಉದಾರ ಮನಸ್ಸಿನಿಂದ ವಿಜೇತರಿಗೆ ಸನ್ಮಾನ ಮಾಡುತ್ತಿದ್ದನೆಂಬುದು ನಿಜವಾಗಿಯೂ ಬುಧಜನರ ಭಾಗ್ಯವೇ ಸರಿ. ವಯೋವೃದ್ಧನೂ, ಜ್ಞಾನವೃದ್ಧನೂ ಆದ ದೊರೆ ಜನಕ ಅಷ್ಟಾವಕ್ರನನ್ನು ಚರ್ಚೆಗೆ ಕರೆಸಿ ಚರ್ಚೆಯ ನಂತರವೂ ತಾನೇ ಅವನ ಪರೀಕ್ಷೆಯಲ್ಲಿ ತೊಡಗಿದುದು ಚರ್ಚಾ ಸ್ಪರ್ಧೆಗಳಲ್ಲಿಯೂ, ಸತ್ಯಾನ್ವೇಷಣೆ ಮತ್ತು ಶಾಸ್ತ್ರ ಜ್ಞಾನಾರ್ಜನೆಗಳಲ್ಲಿ ಅವನಿಗಿದ್ದ ಆಸಕ್ತಿ ಗಂಭೀರ ಜ್ಞಾನಗಳ ಕುರುಹು. ಈ ರೀತಿಯಲ್ಲಿ ಮೂರರ-ಚಾರಕ ವರ್ಗ, ವಿಶೇಷವಾದ ಪಟುಗಳು ಮತ್ತು ಪ್ರೋತ್ಸಾಹಿ ರಾಜಮಹಾರಾಜರುಗಳ-ಒಕ್ಕೂಟ ವಾದಕಲೆ ಮುಂದುವರಿಯಲು ಬಹು ಸಹಾಯಕವಾಯಿತು ಎಂಬುದರಲ್ಲಿ ಸಂದೇಹವಿಲ್ಲ.

ಮೇಲಾಗಿ ಬಾಲಕ ಅಷ್ಟಾವಕ್ರ ಪ್ರಾಚೀನ ಭಾರತದಲ್ಲಿ ತರ್ಕ ಕಲೆ ಸಾಧಿಸಲು ಯತ್ನಿಸುತ್ತಿದ್ದ ಮಾದರಿ ವಿದ್ಯಾರ್ಥಿಯ ಸೂಚಕ. ಸತ್ಯ, ದೇಶ, ಕಾಲ, ಅಂಗ, ವಯೋತೀತವಾದುದು. ಅದು ಯಾರಿಗೂ ಸೇರಿದ ಸ್ವತ್ತಲ್ಲ. ಸ್ವತಂತ್ರವಾಗಿ ನಿರ್ಭಯವಾಗಿ ಆಲೋಚಿಸುವವರಿಗೆ ಸೇರಿದ ನಿಧಿಯದು. ಅದರ ಅನ್ವೇಷಣೆ ಸುಲಭವಲ್ಲ. ಎಲ್ಲರಿಗೂ ಅದು ನಿಲುಕುವುದೂ ಇಲ್ಲ. "ಮೊನಚಾದ ಅಲುಗಿನ ಕತ್ತಿಯ ಮೇಲಿನ ನಡುಗೆ"ಯಂತೆ ಅದರ ಅನ್ವೇಷಕನ ಮನಸ್ಸು ಮಾಸವರಿರಲಿ,

---

1. ಶತಪಥ ಬ್ರಾಹ್ಮಣ xi–5–6–3.

ದೇವತೆಗಳೂ ಸಹ ಆದರ ನಿಯಮಗಳಿಗೆ ತಲೆಬಾಗಬೇಕು.[1] ನಿಷ್ಪಕ್ಷಪಾತ ನಿರ್ಮಮತಾ ಮನೋಭಾವ ಒಂದೇ ಅದಕ್ಕೆ ಮಾರ್ಗ. ಬಾಲಕ ಅಷ್ಟಾವಕ್ರನಲ್ಲಿ ಈ ಲಕ್ಷಣಗಳು ಇದ್ದುದರಿಂದಲೇ ಜಯಲಕ್ಷ್ಮಿ ಅವನ ಕೈಹಿಡಿದಳು. ಅವನ ಮಾತಿನಲ್ಲೇ ಅಡಕವಾಗಿರುವಂತೆ ಸತ್ಯಾನ್ವೇಷಣೆಯಲ್ಲಿ ವಯಸ್ಸು, ಜನಾದರಣೆ, ಸಾಮಾಜಿಕ ಅಂತಸ್ತು ಮುಂತಾದುವುಗಳೆಲ್ಲವೂ ಪ್ರಾಸಂಗಿಕ ಅಥವಾ ಗೌಣ ಅಂಶಗಳು.[2] ಶಾಸ್ತ್ರಜ್ಞಾನ, ವಿಚಾರ ಸ್ವಾತಂತ್ರ್ಯತೆ ಮತ್ತು ಜಿಜ್ಞಾಸಾ ಗಾಂಭೀರ್ಯ ಪರಿಣತೆ ಕೌಶಲ್ಯಗಳು ಅದಕ್ಕೆ ಪ್ರಧಾನ. ಅದರ ನಿರೂಪಣೆಯಲ್ಲಿ ಯಾಗಲೀ, ಅದರ ವಿನಿಮಯಕ್ಕೆ ಸಹಾಯಕವಾಗುವ ಭಾಷೆಯಲ್ಲಿಯಾಗಲೀ ಯಾವ ಬಗೆಯ ಕಾರ್ಪಣ್ಯ, ಮುಚ್ಚುಮರೆಸುವಿಕೆ, ಅಸ್ಪಷ್ಟತೆ ಅಜಾಗರೂಕತೆಯೂ ಕೂಡದು.[3] "ವೇದಾಧ್ಯಯನ ಮಾಡಿ ಶಾಸ್ತ್ರಜ್ಞಾನವನ್ನು ಕರತಲಾಮಲಕ ಮಾಡಿಕೊಂಡಿದ್ದೇನೆ. ಆದುದರಿಂದ ನಾನು ವಯಸ್ಕ"ನೆಂಬ ಅವನ ಮಾತು ಆಧುನಿಕ ಮನಶ್ಶಾಸ್ತ್ರಜ್ಞರು ಕೆಲವು ಬಾಲ ಮೇಧಾವಿಗಳ ಅಪರಿಮಿತ ಪ್ರಜ್ಞಾಶಕ್ತಿ ವಿವರಿಸಲು ಸಲುವಾಗಿ ಹೇಳುವ ದೈಹಿಕ ಮತ್ತು ಮಾನಸಿಕ ವಯಸ್ಸುಗಳ ಅಂತರ ವನ್ನು ನಮ್ಮ ನೆನಪಿಗೆ ತರುತ್ತದೆ. ಅಷ್ಟಾವಕ್ರನೊಬ್ಬ 'ಬಾಲ ವಯಸ್ಸಿನ ವಯೋ ವೃದ್ಧ', ಕವಿಕುಲಗುರು ಕಾಳಿದಾಸನ ಕುಮಾರಸಂಭವ ಕಾವ್ಯದಲ್ಲಿ ಪರ್ವತ ರಾಜಕುವರಿ ಗಿರಿಜೆಯ ಮನೋದಾರ್ಢ್ಯವನ್ನು ಪರೀಕ್ಷಿಸಲು ವಟುವೇಷ ಧರಿಸಿದ ಮಹೇಶ್ವರನು ಹೇಳುವ 'ನಧರ್ಮ ವೃದ್ಧೇಷು ವಯಃ ಸಮೀಕ್ಷತೆ' ಎಂಬ ಮಾತು ಇದೇ ಅಂಶವನ್ನು ಸೂಚಿಸುತ್ತದೆ. ಆತ್ಮದ ಅಮರತೆ-ಜೀವನ ನಾಣ್ಯದ ಮತ್ತೊಂದು ಮುಖವಾದ ಸಾವಿನ ಅರ್ಥವನ್ನು ಕಂಡುಹಿಡಿಯಲು ಯಮನ ಮನೆ ಬಾಗಿಲಲ್ಲಿ ಅನ್ನಪಾನಾದಿಗಳನ್ನು ಬಿಟ್ಟು ಕಾಯುತ್ತಿದ್ದ ಬಾಲಕ ನಚಿಕೇತನ ಮನೋಭಿಲಾಷೆಯೂ ಈ ಬಗೆಯ ಬಾಲ್ಯ ವಯಸ್ಸಿನ ಜ್ಞಾನವೃದ್ಧತನಕ್ಕೆ ಮತ್ತೊಂದು ನಿದರ್ಶನ. ಮದಿಸಿದ ಗಜದಂತೆ ಘರ್ಜಿಸುತ್ತಿದ್ದು ಇತರರೆಲ್ಲರನ್ನೂ ಪೀಡಿಸುತ್ತಿದ್ದ ವಂದಿನ್ ಬಾಲಕ ಅಷ್ಟಾವಕ್ರನ ಅಂಕುಶಸದೃಶ ಪ್ರಶ್ನೆಗಳಿಗೆ ಬಲಿಯಾದನು ಎನ್ನುವುದು ಶಾಸ್ತ್ರಜ್ಞಾನ, ವಿಚಾರ ವಿಮರ್ಶೆ ಮತ್ತು ತುಲನಾತ್ಮಕ ಪ್ರಜ್ಞೆ ವ್ಯವಸ್ಥಿತ ರೀತಿಯಲ್ಲಿ ಮುಂದುವರಿದಾಗ ಹೇಗೆ ವ್ಯಕ್ತಿಯನ್ನು ಕೀರ್ತಿಶಿಖರಕ್ಕೆ

---

1. ಇಂದ್ರನು ಪ್ರಜಾಪತಿಯ ಬಳಿ ೧೦೧ ವರ್ಷಗಳು ವಿದ್ಯಾರ್ಥಿಯಾಗಿದ್ದನೆಂದು ಛಾಂದೋಗ್ಯ ಹೇಳುತ್ತದೆ. —ಛಾಂದೋಗ್ಯ ಉಪನಿಷತ್ತು-III.

2. 'ಬ್ರಹ್ಮವರ್ಚಸ'ಕ್ಕೆ ಜಾತಿ, ಕುಲ, ಮತ, ಅನ್ನ, ಪಾನ, ನಿದ್ರೆ, ದೇಹಸೌಖ್ಯ, ಕಾಯ ಸೌಂದರ್ಯ, ಕೀರ್ತಿ, ಕಾಮ, ಕ್ರೋಧ, ಮಾತ್ಸರ್ಯಗಳೆಲ್ಲ ಶತ್ರುಗಳೆಂದು ಗೋಪಥ ಬ್ರಾಹ್ಮಣ ತಿಳಿಸುತ್ತದೆ. —ಗೋಪಥ ಬ್ರಾಹ್ಮಣ I. 1, 2, I. 1–9

3. ಪ್ರಶ್ನೋಪನಿಷತ್ತು-IV-1.

ಒಯ್ಯಬಲ್ಲದು ಎನ್ನುವುದಕ್ಕೆ ಸಾಧಾರ ನಿದರ್ಶನ. ತೈತ್ತಿರೀಯ ಪ್ರತಿಶಾಖ್ಯೆ[1] ಮತ್ತು ಐತರೇಯ ಆರಣ್ಯಕ[2]ಗಳು ಹೇಳುವ 'ಕಾಯಾ ವಾಚಾ ಮನಸಾ' ಶಿಕ್ಷೆಯ ಫಲ, ಅಷ್ಟಾವಕ್ರನ ಪಾಂಡಿತ್ಯ ಮತ್ತು ವಾದಕಲಾ ಚಾತುರ್ಯತೆ. ಇದಕ್ಕಿಂತಲೂ ಮಿಗಿಲಾದ ಮತ್ತೊಂದು ಅಂಶವೆಂದರೆ ವಾದ ಕೇವಲ ಪಾಂಡಿತ್ಯ ಪ್ರದರ್ಶನ ಮಾತ್ರವಲ್ಲ, ವಿಷಯ ನಿರೂಪಣೆ ಮತ್ತು ಖಂಡನೆ. ಅನಂತರ ಸಿದ್ಧಾಂತ ಸ್ಥಾಪನೆಗಳು ವಾದದಲ್ಲಿ ಜಯಲಕ್ಷ್ಮಿ ಗಳಿಸಲು ಸಾಲದು. ಯಾವುದೋ ಒಂದು ಶಾಸ್ತ್ರದಲ್ಲಿ ಬಹು ಪರಿಶ್ರಮ, ಅನ್ಯ ಶಾಸ್ತ್ರಗಳಲ್ಲಿ ಸಂಪೂರ್ಣ ಅಜ್ಞಾನ ಸ್ಥಿತಿ ವಾದಕ್ಕೆ ಪುಷ್ಟಿದಾಯಕಗಳಲ್ಲ. ಸಕಲ ಶಾಸ್ತ್ರಗಳಲ್ಲಿಯೂ ಸಾಕಷ್ಟು ಆಳವಾದ ಪ್ರಾವೀಣ್ಯ, ಕ್ಷಣ ಮಾತ್ರದಲ್ಲಿ ಪ್ರತಿವಾದಿಯ ಇಂಗಿತವನ್ನು ತಿಳಿದು ಅವನು ಪ್ರಶ್ನೆ ಕೇಳಿ ಪೂರ್ತಿ ಮಾಡುವುದರಲ್ಲಿಯೇ ಅದಕ್ಕೆ ಸಮಂಜಸವಾದ ಉತ್ತರವನ್ನು ಮನಸ್ಸಿನಲ್ಲಿ ರೂಪಿಸಿ ಕೊಳ್ಳುವ ವಿಚಾರಕ್ರಮ ಸಾಮರ್ಥ್ಯ, ಸಿದ್ಧ ಸಾಹಿತ್ಯ, ಭಾಷಾಪರಿಜ್ಞಾನ, ಅರ್ಥ ಸ್ಪಷ್ಟತೆ ಮತ್ತು ರಾಗದ್ವೇಷಾಸೂಯೆಗಳಿಗೆ ತುತ್ತಾಗದೆ ಸಮಚಿತ್ತತೆಯಿಂದ ಕೂಡಿದ ಆಕರ್ಷಕ (ಚಿತ್ತಾಪಹಾರಕ ಎಂದು ಹೇಳಿದರೆ ತಪ್ಪಾಗಲಾರದು) ನಿರೂಪಣಾ ಸಾಮರ್ಥ್ಯ ಅದರ ಅತ್ಯಂತ ಉಪಯುಕ್ತಾಂಶಗಳು. ಇವುಗಳಲ್ಲಿ ಯಾವುದೊಂದು ಕಡಿಮೆಯಾದರೂ ಚರ್ಚೆ ಕುಂಠಿತವಾಗುತ್ತದೆ. ವಾದ ಕಲೆಯಾಗದೆ ಕೊಲೆ ಯಾಗುತ್ತದೆ. ವಾದಕಲೆಯ ಸರ್ವಾಧಾರಸ್ತಂಭದಂತಿರುವ ಸಂಕಲ್ಪ ಸಿಷ್ಟೆ. ಕ್ರಮಬದ್ಧ ಮುಂದುವರಿಸುವಿಕೆ, ಮಾನಸಿಕ ಜಾಗ್ರತೆ ಮತ್ತು ನಮ್ರತೆ ವಿನಯಗಳು ಮಾನವನ ಮನಸ್ಸಿಗೆ ತರ್ಕದ ಕೊಡುಗೆಗಳು ಎಂಬುದನ್ನು ತನ್ನ ವಾದಚಾತುರ್ಯ ದಿಂದ ಅಷ್ಟಾವಕ್ರ ತೋರಿಸಿದ್ದಾನೆ.

ಮೇಧಾತಿಥಿ ಗೌತಮ

ಗೌತಮನ ಕಾಲದ ವರೆವಿಗೆ ತರ್ಕಶಾಸ್ತ್ರವು ಒಂದು ಸ್ವತಂತ್ರ ಶಾಸ್ತ್ರವಾಗಿಲ್ಲದೆ ಯಾವುದೋ ಶಾಸ್ತ್ರದ ಅಂಗವಾಗಿ ಬೆಳೆದುಬಂದಿತೆಂದರೆ ತಪ್ಪಾಗಲಾರದು. ಅದಕ್ಕೆ ಒಂದು ವಿಶೇಷ ವೈಶಿಷ್ಟ್ಯ ತೋರಿಸಿ ಅದನ್ನು ಒಂದು ಪ್ರತ್ಯೇಕ ಶಾಸ್ತ್ರವನ್ನಾಗಿ

1. ತೈತ್ತಿರೀಯ ಪ್ರತಿಶಾಖ್ಯ-XXIV.

2. ಐತರೇಯ ಆರಣ್ಯಕ, ending section of V.

ಬೆಳೆಸಿದ ಗೌರವ ಗೌತಮ ಮಹರ್ಷಿಗೆ ಸಲ್ಲುತ್ತದೆ. ಪದ್ಮಪುರಾಣ,[1] ಸ್ಕಂಧಪುರಾಣ,[2] ಗಂಧರ್ವತಂತ್ರ,[3] ಕುಸುಮಾಂಜಲಿ, ನೈಷಧಚರಿತ್ರೆ,[4] ನ್ಯಾಯಸೂತ್ರವೃತ್ತಿ ಮುಂತಾದ ಗ್ರಂಥಗಳು ಗೌತಮನನ್ನು ಆನ್ವೀಕ್ಷಿಕಿಯ ಪ್ರಥಮಾಚಾರ್ಯನೆಂದು ಹೇಳುತ್ತವೆ. ಇಂದಿಗೂ ಮಿಥಿಲಾ ನಗರದ ಜನರು ಗೌತಮ ಸ್ಥಾನ ಎಂಬ ಸ್ಥಳವನ್ನು ಗೌತಮನ ಜನ್ಮಸ್ಥಳವೆಂದು ನಂಬುತ್ತಾರೆ. ಆ ಹಳ್ಳಿ ದರ್ಭಾಂಗ ಜಿಲ್ಲೆಯ ಹತ್ತಿರದಲ್ಲಿರುವ ಮಿಥಿಲೆಯ ಬಳಿ ಇದೆ. ಅಲ್ಲಿ ಗೌತಮಮುನಿಯಿದ್ದ ಆಶ್ರಮ ಸ್ಥಳವೆಂದು ಪ್ರತೀತಿ ಪಡೆದ ಒಂದು ಮಣ್ಣುಗುಡ್ಡವಿದೆ. ಆ ಗುಡ್ಡದ ತಪ್ಪಲಲ್ಲಿ ಗೌತಮಕುಂಡವೆಂಬ ಕಲ್ಯಾಣಿಯೊಂದಿದೆ. ಅದು ಬಳಿಯಲ್ಲಿರುವ ಖಿರೋಯಿ ಅಥವಾ ಷಿರೋದಧಿ ಎಂಬ ಉಪನದಿಯ ಜನ್ಮಸ್ಥಳ. ಅದರ ತೀರ್ಥದ ಬಣ್ಣ ಮತ್ತು ರುಚಿ ಹಾಲಿನಂತಿದೆಯಂತೆ. ಆದುದರಿಂದಲೇ ಅದಕ್ಕೆ ಆ ಹೆಸರು. ಕಲ್ಯಾಣಿಯ ಬಳಿ ಇರುವ ಆಶ್ರಮದಲ್ಲಿಯೇ ಗೌತಮನು ತನ್ನ ಪತ್ನಿಯೊಡನೆ ವಾಸಿಸುತ್ತಿದ್ದನೆಂತಲೂ, ಇಂದ್ರನೊಡನೆ ಸರಸ ಸಲ್ಲಾಪ ನಡೆಸಿದುದನ್ನು ಕಂಡು ಋಷಿ ತನ್ನ ಭಾರ್ಯೆಯನ್ನು ಕಲ್ಲಾಗು ಎಂದು ಶಪಿಸಿದನೆಂತಲೂ ಕಥೆಯಿದೆ. ದಶರಥಪುತ್ರ ರಾಮಚಂದ್ರನ ಪಾದಸ್ಪರ್ಶದಿಂದ ಪುನಃ ಅವಳಿಗೆ ಸ್ತ್ರೀ ರೂಪ ಪ್ರಾಪ್ತವಾಯಿತೆಂದೂ ರಾಮಾಯಣದಲ್ಲಿ[5] ಕಥೆಯಿದೆ. ಗೌತಮ ಸ್ಥಾನದಿಂದ ಎರಡು ಮೈಲಿಗಳ ದೂರದಲ್ಲಿ ಅಹಲ್ಯಾ ಸ್ಥಾನ ಎಂದು ಎರಡು ಮರಗಳ ಮಧ್ಯದಲ್ಲಿ ಇಂದಿಗೂ ಇರುವ ಕಲ್ಲು ಅಹಲ್ಯೆಗೆ ಮೋಕ್ಷ ಬಂದ ಸ್ಥಳವೆಂದೂ ಜನ ಹೇಳುತ್ತಾರೆ. ಹತ್ತಿರದಲ್ಲಿಯೇ ಅಹಲ್ಯಾ

---

1. ಕಣಾದೇನ ತು ಸಂಪ್ರೋಕ್ತಂ ಶಾಸ್ತ್ರಂ ವೈಶೇಷಿಕಂ ಮಹತ್ ।
   ಗೋತಮೇನ ತಥಾ ನ್ಯಾಯಂ ಸಾಂಖ್ಯಂತು ಕಪಿಲೇನ ವೈ ॥
   ಪದ್ಮಪುರಾಣ–ಉತ್ತರಕಾಂಡ–ch. 263.

2. ಗೋತಮಃ ಸ್ವೇನತರ್ಕೇಣ........
   ಸ್ಕಂದಪುರಾಣ–ಕಾಳಿಕಾಖಂಡ ch. XVII.

3. ಗೋತಮ ಪ್ರೋಕ್ತ ಶಾಸ್ತ್ರಾರ್ಥ ನಿರತಾಃ........ಸಂದಿಗ್ಧಾಃ ಸರ್ವಕರ್ಮಸು ॥
   —ಗಂಧರ್ವ ತಂತ್ರ.

4. ಮುಕ್ತಯೇ ಯೇ ...... ಮಹಾಮುನಿಃ ।
   ಗೋತಮಂ ತವ ....ತಥೈವ ಸಃ ॥
   ನೈಷಧ ಚರಿತ. Canto XVII.

5. ಗೌತಮಸ್ಯ ನರಶ್ರೇಷ್ಠ ಪೂರ್ವಮಾಸೋನ್ಮಹಾತ್ಮನಃ ।
   ....ಸುರೈರಪಿ ಸುಪೂಜಿತಃ ॥
   —ವಾಲ್ಮೀಕಿ ರಾಮಾಯಣ ಆದಿಕಾಂಡ–ಸರ್ಗ–೪೮–೧೩.

ವಿಮೋಚನೆಯ ಜ್ಞಾಪಕಾರ್ಥವಾಗಿ ಕಟ್ಟಿರುವ ರಾಮಚಂದ್ರನ ದೇವಾಲಯವೂ ಇದೆ. ಇಂದಿಗೂ ಗೌತಮ ಸ್ಥಾನದಲ್ಲಿ ಚೈತ್ರ ಶುಕ್ಲ ನವಮಿಯ ದಿನ ಒಂದು ಜಾತ್ರೆ ನಡೆಯುತ್ತದೆ.

ಮಹಾಭಾರತದಲ್ಲಿ[1] ಅಹಲ್ಯೆಯ ವೃತ್ತಾಂತವು ಬೇರೆ ರೀತಿಯಿದೆ. ಕುಪಿತನಾದ ಗೌತಮನು ತನ್ನ ಮಗ ಚಿರಕಾರಿಯನ್ನು 'ತಾಯಿಯನ್ನು ವಧಿಸು' ಎಂದು ಆಜ್ಞಾಪಿಸಿದನಂತೆ. ಮುಂದಾಲೋಚನೆಯಿಂದ ಕೂಡಿದ್ದ ಮಗ ತಕ್ಷಣವೇ ಆಜ್ಞೆಯನ್ನು ಪಾಲಿಸಲಿಲ್ಲ. ಅನಂತರ ಶಾಂತನಾದ ಮೇಲೆ ಹೆಂಗಸರಿಗೆ ಚಂಚಲಚಿತ್ತ ಸ್ವಭಾವವಾದುದು ಎಂದು ತೀರ್ಮಾನಿಸಿ ಅಹಲ್ಯೆಯನ್ನು ಸ್ವೀಕರಿಸಿ ಬಾಳಿದನಂತೆ.

ಕುಶಾನರ ಕಾಲದಲ್ಲಿದ್ದ[2] ಭಾಸನ ಪ್ರತಿಮಾ ನಾಟಕ[3] ದಲ್ಲಿ ಮೇದಾತಿಥಿ ಎಂಬ ಋಷಿಯು ಮುಂದೆ ಆನ್ವಿಕ್ಷಿಕೀ ಎಂದು ಹೆಸರು ಪಡೆದ ನ್ಯಾಯಶಾಸ್ತ್ರದ ಕರ್ತೃವಿಗೆ ಸಂಬಂಧಿಸಿದ ಉಲ್ಲೇಖವಿದೆ. ಮೇಧಾತಿಥಿ ಮತ್ತು ಗೌತಮಗಳೆರಡೂ ಒಬ್ಬನ ಹೆಸರೇ. ಆದರಲ್ಲಿ ಒಂದು ಭಾಗ ಋಷಿಯ ಹೆಸರೆಂದೂ ಮತ್ತೊಂದು ಅವನ ವಂಶದ ಹೆಸರೆಂದೂ ಮಹಾಭಾರತದಲ್ಲಿ ತಿಳಿಸಿದೆ.[4] ಇದರಿಂದ ಆನ್ವಿಕ್ಷಿಕೀ ಶಾಸ್ತ್ರವನ್ನು ಸ್ವತಂತ್ರವಾಗಿ ಬೆಳೆಸಿದವನು ಮೇದಾತಿಥಿ ಗೌತಮನೆಂದಾಗುತ್ತದೆ. ಅವನು ನಚಿಕೇತ ಗೌತಮನ[5] ವಂಶ ಮತ್ತು ಗುರುಕುಲಕ್ಕೂ ಗೌತಮ ಬುದ್ಧನಂತೆ

---

1. ಮಹಾಭಾರತ-ಶಾಂತಿಪರ್ವ-೨೬೨-೯.
ಮತ್ತು ಅಶ್ವಮೇಧಪರ್ವ ೫೬-೨೬.

2. 'The Dramas of Bhasa a literary study' by Meerworth in J. A. S. B. 1917.

3. "ಭೋ! ಕಾಶ್ಯಪಗೋತ್ರೋಽಸ್ಮಿ। ಸಾಂಗೋಪಾಂಗಂ ವೇದಮಧೀಯೆ।........
ಮೇಧಾತಿಥೇ ನ್ಯಾಯಶಾಸ್ತ್ರಂ, ಪ್ರಾಚೇತಸಂ........
— Bhasa's Pratima Nataka, Act-V.
Page 79 (M. M. Ganapathi Sastri's edition)

4. ಮೇಧಾತಿಥಿರ್ಮಹಾಪ್ರಾಜ್ಞೋ ಗೌತಮಸ್ತಪಸಿಸ್ಥಿತಃ।
........ತೇನ ಕಾಲೇನ........ಜಾತಿಕ್ರಮಂ॥
ಮಹಾಭಾರತ, ಶಾಂತಿಪರ್ವ ೨೬೫-೪೫.

5. ಶಾಂತ ಸಂಕಲ್ಪ ಸುಮನಾ ಯಥಾಸ್ಯಾದ್ವೀತಮನ್ಯುರ್ಗೌತಮೋ........
ಅಯಮುನೇ ವಿಜಾನತ ಆತ್ಮಾ ಭವತಿ ಗೌತಮ........
ಯಥಾ ಚ ಮರಣಂ ಪ್ರಾಪ್ಯ ಆತ್ಮಾ ಭವತಿ ಗೌತಮ.
—ಕಠೋಪನಿಷತ್ತು-I-1-10, II-4-15, II-5-6.

ಆಂಗೀರಸನ ಬುಡಕಟ್ಟಿಗೂ[1] ಸೇರಿರಬೇಕೆಂದೂ ಊಹಿಸಲಾಗಿದೆ. ಮಿಥಿಲೆಯ ಗೌತಮ ಸ್ಥಾನವರ್ಣನೆಯೊಂದಿಗೆ ಹೊಂದಿಕೊಳ್ಳುವ ಋಗ್ವೇದ[2] ಮತ್ತು ಕೃಷ್ಣ ಯಜುರ್ವೇದದ ಶತಪಥ ಬ್ರಾಹ್ಮಣಗಳಲ್ಲಿ[3] ಗೌತಮ ಋಷಿಯು ಅನುವಂಶಿಕನಾದ ನೋಧಾ ಗೌತಮ ವಂಶದಿಂದ ಬಂದವನೆಂದೂ. ಗೋತಮನ ವಂಶಸ್ಥರೆಲ್ಲರಿಗೂ ಗೋತಮ ಸಹ ಅಥವಾ ಗೌತಮ[4]ನೆಂಬ ಹೆಸರು ಬಂದಿತೆಂದೂ ತಿಳಿದುಬಂದಿದೆ.

ಖ್ಯಾತ ನಾಟಕಕರ್ತ ಭಾಸ ತನ್ನ ಪ್ರತಿಮಾ ನಾಟಕದಲ್ಲಿ ಮೇಧಾತಿಥಿಯ ನ್ಯಾಯಶಾಸ್ತ್ರ[5]ಕ್ಕೆ ಓದುಗರ ಗಮನ ಸೆಳೆಯುತ್ತಾನೆ. ಇದರಿಂದ ಅವನ ಕಾಲದ ವೇಳೆಗೇ ನ್ಯಾಯಶಾಸ್ತ್ರವು ಜನಪ್ರಿಯತೆ ಗಳಿಸಿರಬೇಕೆಂದೂ, ನಾಟಕಕರ್ತನು ಆ ಹೆಸರಿನಿಂದ ಆನ್ವೀಕ್ಷಿಕಿಯನ್ನು ಉದ್ದೇಶಿಸಿ ಶಬ್ದ ಬಳಸಿರಬೇಕೆಂದೂ ಊಹಿಸಲಾಗಿದೆ. ಮಹಾಭಾರತದ ಶಾಂತಿಪರ್ವದಲ್ಲಿ[6] ಮೇಧಾತಿಥಿಯೆಂಬ ಋಷಿಯ ಹೆಸರು ಬರುತ್ತದೆ. ಅವನು ಉಪನಿಷತ್ತುಗಳು ತಿಳಿಸುವ ಮೋಕ್ಷ ಮಾರ್ಗವನ್ನು ಜನರಿಗೆ ಬೋಧಿಸಿದನೆಂದು ಅದರಲ್ಲಿ ವ್ಯಕ್ತವಾಗಿದೆ. ಆ ಮೇಧಾತಿಥಿಯೇ ತರ್ಕವನ್ನು ಬೆಳೆಸಿದನೆಂದು ಊಹಿಸಲು ಸಾಕಷ್ಟು ಆಧಾರಗಳಿವೆ.

ಮೇಧಾತಿಥಿ ಗೌತಮನನ್ನು ಗೌತಮನೆಂದೇ ಕರೆಯುವುದು ವಾಡಿಕೆ. ಪದ್ಮ ಪುರಾಣ, ಮತ್ಸ್ಯಪುರಾಣಗಳಲ್ಲಿ ಅವನನ್ನು ಆನ್ವೀಕ್ಷಿಕಿಯ ಸ್ಥಾಪಕಾಚಾರ್ಯನೆಂದು ಹೇಳಿ, ಅವನು ಬೆಳೆಸಿದ ಹೇತುವಿದ್ಯೆಯನ್ನು ಗೌತಮೀವಿದ್ಯಾ ಎಂದು ಕರೆಯಲಾಗಿದೆ. ವಾದಕಲೆಯಲ್ಲಿ ಪ್ರಸಿದ್ಧನಾದ ಅವನ ಹೆಸರು ಪರ್ಷಿಯಾ ದೇಶಕ್ಕೂ ಹರಡಿತ್ತಂತೆ.

---

1. ಅಂಗೀರಸಸ್ಸ ಕಾಯೋ ಅನೇಕವಸ್ಸಾ ಅಬ್ಬಿಯೋ ಹೋಂತಿ–
   –Pali Maharagga edited by Dr. Oldenberg–I–15–7 page 25
2. ಋಗ್ವೇದ ಸಂಹಿತೆ–I–81–3.
3. ಶತಪಥ ಬ್ರಾಹ್ಮಣ- (ಕೃಷ್ಣ ಯಜುರ್ವೇದ) I–4.
4. ಕಾತಂತ್ರ, ಚತುಷ್ಟ್ಯಕಾರಕ ಪ್ರಕರಣ.
5. ಭಾಸ, ಪ್ರತಿಮಾನಾಟಕ, ಅಂಕ V. (ಮ.ಮ. ಗಣಪತಿಶಾಸ್ತ್ರಿಗಳ ಗ್ರಂಥ) P.79.
6. ಚತುರ್ಥ ಔಪನಿಷದೋ........ತತೋನ್ಯೈಃ ಪ್ರವರ್ತತೇ।
   ಅಸ್ಮಿನ್ನೇವಯುಗೇ ತಾತವಿಪ್ರೈಃ ಸರ್ವಾರ್ಥದರ್ಶಿಭಿಃ ಮೇಧಾತಿಥಿಬುಧೈಃ.....
   ಏನಂಧರ್ಮಂ ಕೃತವಂತಃ
   —ಮಹಾಭಾರತ, ಶಾಂತಿಪರ್ವ–243, 14-17.

ಗೌತಮನನ್ನು ವಾದದಲ್ಲಿ ಸೋಲಿಸಲು ಒಬ್ಬ ಮಹಾತ್ಮ ಜನ್ಮ ತಾಳಿ ವಾದಕಲಾ ಚತುರನಾಗಿ ಬರುತ್ತಾನೆಂಬ ನಂಬಿಕೆ ಪರ್ಷಿಯಾ ದೇಶದ ಜನರಲ್ಲಿದ್ದಿತೆಂಬುದನ್ನು ಕ್ರಿ.ಶ. ೨೭೨ರಲ್ಲಿ ರಚಿತವಾದ ಅವೆಸ್ಟ ಗ್ರಂಥದಲ್ಲಿ ನಾವು ಕಾಣುತ್ತೇವೆ.[1]

ಪಾಟಲಿಸುತ್ತಪಿಟಕದ ಅಂಗುತ್ತರ ನಿಕಾಯದಲ್ಲಿ[2] ಬರುವ ಹತ್ತು ಅಬೌದ್ಧ ಏಕಾಂಗಿಗಳಲ್ಲಿ 'ಗೋತಮಕ' ಹೆಸರೂ ಒಂದು. ಆ ಗುಂಪು ಆನ್ವಿಕ್ಷಿಕೀ ಶಾಸ್ತ್ರದ ಸ್ಥಾಪಕನಾದ ಗೌತಮ ಅಥವಾ ಗೋತಮನ ಅನುಯಾಯಿಯಾಗಿರಬೇಕು. ಬ್ರಹ್ಮಜಾಲ ಸತ್ತವು[3] ಜಗದ್ವಸ್ತುಗಳಲ್ಲಿ ಕೆಲವು ವಿನಾಶಿ ಮತ್ತು ಅವಿನಾಶಿ ಎಂದು ಬೋಧಿಸಿದ ಟಕ್ಕಿ (ವಾದಕೋವಿದ) ಮತ್ತು ಮೀಮಂಸಿ (ಕಾರಣವಾದಿ) ಎಂಬ ಪರಿವ್ರಾಜಕನನ್ನು ಹೇಳುತ್ತದೆ. ಅವನು ಆನ್ವಿಕ್ಷಿಕೀ ಶಾಸ್ತ್ರದ ಸ್ಥಾಪಕಾಚಾರ್ಯ ನೆಂದು ಊಹಿಸಲಾಗಿದೆ. ಇದು ನಿಜವಾದರೆ, ಬುದ್ಧಮುನಿಯ ಸಮಕಾಲೀನ ಗೌತಮ ಎನ್ನುವುದರಲ್ಲಿ ಸಂದೇಹವಿಲ್ಲ. ಇದರಿಂದ ಮೇಧಾತಿಥಿಯ ಕಾಲ ಸುಮಾರು ಕ್ರಿ.ಪೂ. ೫೫೦ ಎಂದು ನಿರ್ಧರಿಸಬಹುದು ಎಂದು ಪ್ರೊ|| ವಿದ್ಯಾಭೂಷಣರವರು ಅಭಿಪ್ರಾಯ ಸೂಚಿಸಿದ್ದಾರೆ.[4]

ಆದರೆ ಗೌತಮನ ವಿಚಾರದಲ್ಲಿ ಮೇಲೆ ಹೇಳಿದ ಪ್ರೊ|| ವಿದ್ಯಾಭೂಷಣರವರ ವಾದವನ್ನು ಪ್ರೊ|| ದಾಸಗುಪ್ತರವರು ಒಪ್ಪುವುದಿಲ್ಲ. ಅವು ನಿರಾಧಾರ ಕಲ್ಪನೆಗಳು. ಮೇಧಾತಿಥಿಯ ಹೆಸರು ಕೇವಲ ಪೌರಾಣಿಕ. ಆ ಹೆಸರಿನ ಒಬ್ಬ ಋಷಿ ಇದ್ದ ಮತ್ತು ಅವನು ಆನ್ವಿಕ್ಷಿಕಿಯನ್ನು ಕುರಿತು ಒಂದು ಶಾಸ್ತ್ರಗ್ರಂಥ ಬರೆದಿದ್ದನೆಂಬುವುದಕ್ಕೆ ನಮಗೆ ಯಾವ ಬಗೆಯ ಆಧಾರಗಳೂ ದೊರೆತಿಲ್ಲ ಮಾತ್ರವಲ್ಲ, ಪ್ರೊ|| ವಿದ್ಯಾಭೂಷಣರು ಅಭಿಪ್ರಾಯಪಡುವಂತೆ ಅವನಿಂದ ಸ್ಫೂರ್ತಿ ಪಡೆದು ವಿಷಯಗಳನ್ನು ಉಪಯೋಗಿಸಿ ಚರಕ ಗ್ರಂಥ ರಚಿಸಿದನೆಂದು ಹೇಳಲಿಕ್ಕಾಗಲೀ, ಇಂದು ನಶಿಸಿ ಹೋಗಿದೆ ಎಂದು ಹೇಳಲ್ಪಟ್ಟ ಅಗ್ನಿವೇಶನ ಗ್ರಂಥಭಾಗಗಳಲ್ಲಿ ಚರಕನ ಭಾವನೆ ಗಳಿರಲಿಲ್ಲ ಎಂದು ತೀರ್ಮಾನಿಸಲಾಗಲೀ ನಮಗೆ ಸಾಧಾರ ಪ್ರಮಾಣಗಳಿಲ್ಲ.

---

1. 13th Yasht, para 16.

2. ಅಂಗುತ್ತರ ನಿಕಾಯ. Part III-Ch. 65. (edited by Dr. Morris, Pali Text Society).

3. ಬ್ರಹ್ಮಜಾಲ ಸತ್ತ. I-32. edited by Dr. Rhys Davids and E. Carpenter.

4. Dr. S. Vidyabhushan. History of Indian Logic, P. 21.

ಆನ್ವಿಕ್ಷಿಕೀಶಾಸ್ತ್ರವು ಗೌತಮನಿಂದ ರಚಿತವಾಯಿತೆಂದು ಸ್ಥಾಪಿಸಲು ಪ್ರೊ|| ವಿದ್ಯಾಭೂಷಣರವರು ಉಪಯೋಗಿಸಿರುವ ಕುಸುಮಾಂಜಲಿ, ನೈಷಧಚರಿತೆ ಮತ್ತು ನ್ಯಾಯಸೂತ್ರ ಗ್ರಂಥಗಳಾವುವೂ ಹತ್ತನೆಯ ಶತಮಾನಕ್ಕಿಂತ ಮೊದಲಿನವಲ್ಲ. ಅವರು ತಮ್ಮ ನಿರ್ಣಯ ಸಾಧಿಸಲು ಉದಾಹರಿಸಿರುವ ಪದ್ಮ ಮತ್ತು ಸ್ಕಂದ ಪುರಾಣಗಳೂ, ಗಂಧರ್ವತಂತ್ರ ಗ್ರಂಥವೂ ಸಹ ಅವರ ಅಭಿಪ್ರಾಯವನ್ನು ದೃಢಪಡಿಸುವಷ್ಟು ಪುರಾತನವಾದುವಲ್ಲ. ಮೇಲಾಗಿ ವಾತ್ಸಾಯನನೇ ನ್ಯಾಯಸೂತ್ರವು ಅಕ್ಷಪಾದನದು ಎಂದಿದ್ದಾನೆ.[1] ಉದ್ಯೋತ್ಕರ ಮತ್ತು ವಾಚಸ್ಪತಿಗಳೂ ನ್ಯಾಯಸೂತ್ರದ ಕರ್ತೃ ಅಕ್ಷಪಾದನೇ ಎನ್ನುತ್ತಾರೆ.[2] ಜಯಂತ ಸಹ ನ್ಯಾಯಸೂತ್ರದ ಕರ್ತೃ ಅಕ್ಷಪಾದನೇ ಎಂದು ಒಪ್ಪಿದ್ದಾನೆ.[3] ಅಕ್ಷಪಾದನಲ್ಲದೆ ಅದು ಬೇರೆಯವರಿಂದ ರಚಿಸಲ್ಪಟ್ಟಿದ್ದರೆ ಶಾಸ್ತ್ರಗೌರವಕ್ಕಾದರೂ ಗ್ರಂಥಕರ್ತೃವಿನ ಹೆಸರನ್ನು ಅನ್ಯಶಾಸ್ತ್ರ ಗ್ರಂಥಗಳಲ್ಲಿ ಹೇಳಬೇಕಾಗಿದ್ದಿತು. ಹಾಗಿಲ್ಲದಿರುವುದರಿಂದ ಗೌತಮನನ್ನು ನ್ಯಾಯಸೂತ್ರದ ಕರ್ತೃವೆಂದು ಹೇಳುವುದು ಅನುಚಿತವೆಂದು ಪ್ರೊ|| ದಾಸಗುಪ್ತರವರು ವಾದಿಸಿದ್ದಾರೆ.[4]

ಭಾರತೀಯ ದರ್ಶನ ಸಾಹಿತ್ಯದಲ್ಲಿ ಗೌತಮನೆಂಬ ಹೆಸರು ಬಹು ಪುರಾತನವಾದುದು. ಋಗ್ವೇದದ ಋಷಿಗಳ ಮಂಡಲದಲ್ಲಿ ಶತಪಥ ಬ್ರಾಹ್ಮಣದಲ್ಲಿ, ತೈತ್ತಿರೀಯ ಪ್ರತಿಶಾಖ್ಯ, ಆಶ್ವಲಾಯನ ಶ್ರೌತ ಸೂತ್ರ ಮುಂತಾದುವುಗಳಲ್ಲಿ ಈ ಹೆಸರನ್ನು ಕಾಣುತ್ತೇವೆ. ಆದರೆ ಅವು ಯಾವುದರಲ್ಲಿಯೂ ಗೌತಮ ನ್ಯಾಯಸೂತ್ರದ ಕರ್ತೃವೆಂದು ಹೇಳಿಲ್ಲ. ಮಹಾಭಾರತದಲ್ಲಿಯೂ ಗೌತಮ ಎಂಬ ಹೆಸರು ಅನೇಕ ಸಲ ಪ್ರಯೋಗವಾಗಿದೆ. ಆದರೆ ಎಲ್ಲಿಯೂ ಅದರಲ್ಲಿ ಅವನು ನ್ಯಾಯಸೂತ್ರದ ಗ್ರಂಥಕರ್ತೃ ಎಂದು ಹೇಳಿಲ್ಲ. ಪ್ರೊ|| ವಿದ್ಯಾಭೂಷಣರವರು ಉಲ್ಲೇಖಿಸಿರುವ ಮಹಾಭಾರತ ವಾಕ್ಯಗಳಲ್ಲಿಯೂ ಸಹ ಮೇಧಾತಿಥಿಯು ಆನ್ವೀಕ್ಷಿಕಿಯ ಕರ್ತೃವೆಂದಾಗಲೀ ಮೇಧಾತಿಥಿ ಗೌತಮನೆಂದಾಗಲೀ ಒಂದುಸಲವಾದರೂ ಹೇಳಿಲ್ಲ.

---

1. ಯೋ ಅಕ್ಷಪಾದಂ ಋಷಿಂ ನ್ಯಾಯಃ ಪ್ರತ್ಯಭಾದ್ ವದತಾಂ ವರಂ|
ತಸ್ಯ ವಾತ್ಸಾಯನ ಇದಂ ಭಾಷ್ಯಜಾತಂ ಅವರ್ತಯತ್ ||
—ವಾತ್ಸಾಯನ ಭಾಷ್ಯ II-24.

2. ಯದ್ ಅಕ್ಷಪಾದಃ ಪ್ರವರ ಮುನಿನಾಂ ಶಮಾಯ ಶಾಸ್ತ್ರಂ ಜಗತೋ ಜಗಾದ|
—ಉದ್ಯೋತಕರನ ನ್ಯಾಯವಾರ್ತಿಕ —ಆರಂಭ ವಾಕ್ಯಗಳು.

3. ಅಕ್ಷಪಾದ ಪ್ರಣೀತೋ ಹಿ ವಿತತೋ ನ್ಯಾಯಪಾದಪಃ
—ಜಯಂತಭಟ್ಟನ ನ್ಯಾಯಮಂಜರಿಯ ಆರಂಭ ಶ್ಲೋಕಗಳು.

4. Prof. S. N. Dasagupta. History of Indian Philosophy. Vol. II. P. 395.

ಅಷ್ಟೇ ಅಲ್ಲ, ಪ್ರೊ|| ವಿದ್ಯಾಭೂಷಣರು ಉಲ್ಲೇಖಿಸಿರುವ ಮತ್ತೊಂದು ಗ್ರಂಥವೆಂದರೆ ಭಾಸನ ಪ್ರತಿಮಾ ನಾಟಕ. ಆದರಿಂದ ಅವರು ಉಲ್ಲೇಖಿಸಿರುವ ವಾಕ್ಯವೂ ಸಹ ಮೇಧಾತಿಥಿಯು ಗೌತಮನೆಂದಾಗಲೀ, ಅವನು ನ್ಯಾಯಶಾಸ್ತ್ರದ ಕರ್ತೃವೆಂದಾಗಲೀ ಸ್ಥಾಪಿಸಲು ಅಶಕ್ಯ. ಮೇಧಾತಿಥಿಯ ಹೆಸರೇನೋ ಅದರಲ್ಲಿ ಒಂದಿದೆ. ಆದರೆ ಅದು ಅವನನ್ನು ನ್ಯಾಯಶಾಸ್ತ್ರದ ಬೋಧಕನೆಂದು ಹೇಳುತ್ತದೆಯೇ ವಿನಹ ಕರ್ತೃವೆಂದಲ್ಲ. ಹೆಸರು ಮಾತ್ರವಲ್ಲ, ಮೇಧಾತಿಥಿಯ ಜನ್ಮಸ್ಥಳವೆಂದು ಸಾಧಿಸಲು ವಿದ್ಯಾಭೂಷಣರು ಉಪಯೋಗಿಸುವ ಅಂಗುತ್ತರ ನಿಕಾಯ ಮತ್ತು ಬ್ರಹ್ಮಜಾಲಸತ್ರಗ್ರಂಥಗಳ ಉಲ್ಲೇಖನಗಳೂ ಸಹ ಕೇವಲ ಕಾಲ್ಪನಿಕವಾದುವೇ. ವೈದ್ಯಶಾಸ್ತ್ರದಲ್ಲಿ ಪರಿಶ್ರಮ ಪಡೆಯುತ್ತಿದ್ದ ಸಛಿಕರ ಪೈಕಿ ಆತ್ರೇಯ ಗೌತಮನೆಂಬ ಋಷಿ ಇದ್ದುದೇನೋ ನಿಜ. ಆದರೆ ಅವನೇ ಮೇಧಾತಿಥಿ ಗೌತಮನೆಂದು ಹೇಳುವುದು ಉಚಿತವಲ್ಲ ಎಂದು ಪ್ರೊ|| ದಾಸಗುಪ್ತರವರು[1] ತೀರ್ಮಾನಿಸಿದ್ದಾರೆ.

ಗೌತಮನ ಬಗ್ಗೆ ನಮಗೆ ದೊರೆತಿರುವ ವಿವರಗಳು ಸಾಕಷ್ಟು ಆಧಾರಭೂತವಾದುವಲ್ಲ. ಅವನು ರಚಿಸಿದ ಗ್ರಂಥಗಳಾವುವೂ ಭಾಗಶಹವಾಗಿಯಾಗಲೀ ಪೂರ್ಣವಾಗಿಯಾಗಲೀ ಇನ್ನೂ ಸಿಕ್ಕಿಲ್ಲ. ಅವನೆಂದು ಹೇಳಲ್ಪಟ್ಟ ಆತ್ಮಸ್ವರೂಪ ಮತ್ತು ವಾದವಿಚಾರಗಳೆರಡನ್ನೂ ಅವನು ಒಂದೇ ಗ್ರಂಥದಲ್ಲಿ ನಿರೂಪಿಸಿದ್ದಾನೆ ಎಂಬುದೂ ಸ್ಪಷ್ಟವಾಗಿಲ್ಲ. ಆತನು ಮಂಡಿಸಿದನೆಂದು ಹೇಳಲ್ಪಟ್ಟ ಹೇತುವಾದ ಅವಿರತವಾಗಿಯೇ ಬೆಳೆದು ಮುಂದೆ ನ್ಯಾಯಶಾಸ್ತ್ರ ರೂಪದಲ್ಲಿ ನಮ್ಮನ್ನು ತಲುಪಿದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಅವನದೆಂದು ಹೇಳಲ್ಪಡುವ ಆತ್ಮತತ್ವ ವಿಚಾರವನ್ನು ಪ್ರಾಸಂಗಿಕವಾಗಿ ಅವನ ಹೆಸರಿನ ಋಷಿ ಉಕ್ತಿಯೆಂದು ಮಹಾಭಾರತದಲ್ಲಿಯೂ, ಪಾಲಿ ಭಾಷೆಯಲ್ಲಿರುವ ಬ್ರಹ್ಮಜಾಲಸತ್ರನೆಂಬ ಗ್ರಂಥದಲ್ಲಿಯೂ ಸ್ವಲ್ಪಮಟ್ಟಿಗೆ ಕಾಣಬಹುದು.

---

1. Prof. S. N. Dasagupta. History of Indian Philosophy. Vol. II. P. 395.

ದೇವರ ದಾಸಿಮಯ್ಯನ ಸಾಮಾಜಿಕ ಕ್ರಾಂತಿ

—ಡಿ. ಲಿಂಗಯ್ಯ

ರೂಢಮೂಲವಾದ ಹೀನ ಸಂಪ್ರದಾಯಗಳನ್ನು ಬೇರುಸಹಿತ ಕಿತ್ತುಹಾಕಿ ಸ್ವತಂತ್ರವಾದ ಹೊಸ ಮನೋಧರ್ಮವನ್ನು ಬೆಳೆಸುವುದು ನಿಜವಾದ ಕ್ರಾಂತಿಯ ಉದ್ದೇಶ. ಇಂತಹ ಕ್ರಾಂತಿ ಸುಲಭಸಾಧ್ಯವಲ್ಲ. ಏಕೆಂದರೆ ಇದು ಇಡೀ ಸಮಾಜದ, ಸಾಮಾಜಿಕ ಪರಿವರ್ತನೆಯ ಕಾರ್ಯ. ಇಂತಹ ಪರಿವರ್ತನೆಗೆ ದಕ್ಷನಾಯಕರ ನಿಸ್ವಾರ್ಥವಾದ ಹೋರಾಟ ಅಗತ್ಯ. ಇದನ್ನು ಪೂರೈಸಿದವರು ಶಿವಶರಣರು. ಶಿವಶರಣರು ಕೈಗೊಂಡ ಸಾಮಾಜಿಕ ಕ್ರಾಂತಿ ಅವರ ವಚನಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ:

೧೧-೧೨ನೆಯ ಶತಮಾನದ ಸಮಾಜದಲ್ಲಿ ನೈತಿಕ ಮಟ್ಟ ಇಳಿಮುಖವಾಗಿತ್ತು. ಹಳೆಯ ಸಂಪ್ರದಾಯಗಳ ಹೆಸರಿನಲ್ಲಿ ಅನೇಕ ಅನ್ಯಾಯಗಳು ನಡೆಯುತ್ತಿದ್ದವು. ಅವುಗಳನ್ನು ಖಂಡಿಸಿ, ನಿಲ್ಲಿಸಿ, ಹೊಸ ಸಮಾಜವನ್ನು ಕಲ್ಪಿಸುವ ಕಾರ್ಯ ನಡೆಯಬೇಕಿತ್ತು. ತಲೆತಲಾಂತರದಿಂದ ಸಮಾಜದಲ್ಲಿ ಬೇರುಬಿಟ್ಟಿದ್ದ ಮೌಢ್ಯಮಯವಾದ ರೂಢ ಮೂಲಭಾವನೆಗಳನ್ನು ಅಳಿಸಿ ಸರಿಯಾದ ಪರಿಹಾರವನ್ನು ತೋರಿಸುವಂತಹ ನಿಷ್ಕಾಮ ಸುಧಾರಕರ, ಸದಾಚಾರಿಗಳ, ಧೈರ್ಯವಂತರ ಆಗಮನವನ್ನು ಆ ಸಮಾಜ ನಿರೀಕ್ಷಿಸುತ್ತಿತ್ತು. ಆ ಸಮಯದಲ್ಲಿ ಕಾಯಕವೇ ಕೈಲಾಸವೆಂದು ನಂಬಿ ನುಡಿದಂತೆ ನಡೆಯುವ ಶಿವಶರಣರು ಸಮಾಜ ಸುಧಾರಣೆಗೆ ತೊಡಗಿ ಹೊಸ ಸಮಾಜಕ್ಕೆ ತಳಪಾಯ ಕಟ್ಟಿದರು. ಅವರಿಂದ ಸೃಷ್ಟಿಯಾದ ಜೀವನಾನುಭವದ ವಚನಗಳು ಕೇವಲ ಪುಸ್ತಕದ ಬದನೆಕಾಯಿ ಆಗದೆ ಕಾಯಕ ಹಾಗೂ ಸದಾಚಾರದ ಜೀವನಾಡಿಯನ್ನು ಮಿಡಿಯುತ್ತಾ ಜನಸಾಮಾನ್ಯರ ಬಾಳಿಗೆ ದಾರಿದೀಪಗಳಾದವು. ವಚನ ಸಾಹಿತ್ಯದ ಆದ್ಯ ಪ್ರವರ್ತಕನಾದ ದೇವರ ದಾಸಿಮಯ್ಯನೇ ಆ ದಿಶೆಯಲ್ಲಿ ಶ್ರಮಿಸಿದುದು ಗಮನಾರ್ಹವಾದ ಸಂಗತಿ.

ದೇವರ ದಾಸಿಮಯ್ಯ ಅಂದಿನ ಸಮಾಜದಲ್ಲಿ ಕಂಡ ವೈಲಕ್ಷಣ್ಯ ವೈದೃಶ್ಯಗಳನ್ನು ಕಂಡು ಸಿಟ್ಟಾಗಿ ಅಂಥವುಗಳನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಿ ಜನರಿಗೆ

ನಿಜವಾದ ದಾರಿಯನ್ನು ತೋರಿಸಲು ಅನೇಕ ವಿಧವಾಗಿ ನೀತಿಬೋಧೆ ಮಾಡಿದ್ದಾನೆ. ನೀತಿಯ ಮಾತುಗಳು ಎಂದಾಕ್ಷಣಕ್ಕೆ ಇವು ಮೃದು ಮಾಧುರ್ಯ ಸುಭಗತೆಯಿಂದ ಕೂಡಿರದೆ, ದಾಸಿಮಯ್ಯನ ವ್ಯಕ್ತಿತ್ವಕ್ಕೆ ಸಹಜವಾದ ಒರಟು ನುಡಿಗಳಂತಿವೆ. ಆದರೆ ಆ ಕಟುನುಡಿಗಳ ಹಿಂದಿನ ಮನೋಧರ್ಮ ಅಂದಿನ ಸಾಮಾಜಿಕ ಸ್ಥಿತಿಗತಿಗಳನ್ನು ನಿಚ್ಚಳವಾಗಿ ತೋರಿಸುತ್ತವೆ. ಅವುಗಳಲ್ಲಿ ದಾಸಿಮಯ್ಯನ ಪರಿಶುದ್ಧ ಜೀವನ, ನೂತನ ಸಮಾಜದ ಬಗೆಗೆ ಅವನಿಗಿದ್ದ ಕಳಕಳಿ ಪ್ರಧಾನವಾಗಿ ಕಾಣುತ್ತವೆ. ನೀತಿ ಬೋಧೆಯ ಮೂಲಕ ಸಾಮಾಜಿಕ ಕ್ರಾಂತಿಯನ್ನು ಕೈಗೊಂಡಿರುವುದು ಅವನ ವೈಶಿಷ್ಟ್ಯವಾಗಿದೆ. ಅಂದಿನ ಸಮಾಜಕ್ಕೆ ಅಂಟಿದ್ದ ಅಪರಿಹಾರ್ಯವಾದ ಜಾಡ್ಯ ಗಳಿಗೆ ದಾಸಿಮಯ್ಯ ನೀಡಿರುವ ಮದ್ದು ಇಂದಿಗೂ ಬೆಲೆಯುಳ್ಳದ್ದಾಗಿದೆ. ಇದನ್ನು ಅವನ ವಚನಗಳಲ್ಲಿ ಸ್ಪಷ್ಟವಾಗಿ ಕಾಣಬಹುದು.

ವೇದ ಉಪನಿಷತ್ ಪುರಾಣಗಳ ಕಾಲದಲ್ಲಿ ಪುರುಷರಂತೆಯೇ ಸಮಾನ ಅಧಿಕಾರವನ್ನು ಹೊಂದಿದ್ದ ಸ್ತ್ರೀಯರು, ಮಧ್ಯಮಯುಗದ ಸಮಾಜ ಸುಧಾರಕರ ಸಂಕುಚಿತ ಬುದ್ಧಿಯಿಂದಾಗಿ ತಿರಸ್ಕೃತರಾಗಿ ಹೀನಾಯ ಸ್ಥಿತಿಯಲ್ಲಿದ್ದುದನ್ನು ಕಂಡು ಮರುಕಗೊಂಡು ಅವರಿಗೆ ಮತ್ತೆ ಮೊದಲಿನ ಸ್ಥಾನಮಾನಗಳನ್ನು ನೀಡಿದ ಜನ ಶಿವಶರಣರು. "ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ?" ಎಂದು ಪ್ರಶ್ನಿಸಿ, ಪ್ರಾಣಸ್ಥಿತಿಯಲ್ಲಿ ಎಲ್ಲರೂ ಒಂದೇ ಎಂದು ತಿಳಿಸಿ, ಸ್ತ್ರೀಯರಿಗೂ ಪುರುಷರಂತೆಯೇ ಜೀವನ್ಮುಕ್ತಿ ಪಡೆಯುವ ಹಕ್ಕಿದೆ ಎಂದು ಸಾರಿದರು. ಸಮಾಜದಲ್ಲಿ ಸ್ತ್ರೀಗೆ ಸರಿಯಾದ ಗೌರವವಿರಬೇಕು. ಅವಳನ್ನು ದುರುಪಯೋಗಪಡಿಸಿಕೊಳ್ಳಬಾರದು:

ಗಂಡನುಳ್ಳಮ್ಮನ ಗೌರಿಯೆಂದು ಕಂಡಡೆ ಭೂ-
ಮಂಡಲಕ್ಕೆ ಅರಸಾಗಿ ಹುಟ್ಟುವನಾತನು.
ಗಂಡನುಳ್ಳಮ್ಮನ ಕಂಡು ಒಡವೆರೆದಾತ ನರಕದಲ್ಲಿ
ದಿಂಡುಗೆಡೆದಿಪ್ಪನೈ ರಾಮನಾಥ

ಸ್ತ್ರೀಯ ದುರುಪಯೋಗ ಎಲ್ಲ ಕಾಲದಲ್ಲೂ ಇದ್ದದ್ದೆ. ಹೀಗೆ ಮಾಡುವುದು ಸುಸಂಸ್ಕೃತರ ಲಕ್ಷಣವಲ್ಲ. ಅದಕ್ಕೆಂದೆ ಇಂಥ ನೀಚಕಾರ್ಯವನ್ನು ಕಂಡು ದಾಸಿಮಯ್ಯ ಖಂಡಿಸಿದ್ದಾನೆ. ಪರನಾರಿ ಸೋದರನಿಗೆ ಅರಸುತನ ಬರುವುದೆಂದೂ ಪರದಾರಿಗೆ ನರಕ ತಪ್ಪದೆಂದೂ ಎಚ್ಚರಿಸಿದ್ದಾನೆ. ಶೀಲದ ವಿಷಯದಲ್ಲಿ ರುಚಿಯಿಲ್ಲ ದಿದ್ದರೆ ಸಮಾಜದಲ್ಲಿ ಸ್ವಚ್ಛತೆ ಇರುವುದಿಲ್ಲ. ಅಡಗ ತಿಂದು, ಸುರೆ ಕುಡಿದು, 'ಹಡೆದುಂಟ ವೇಶಿಯರನೊಲ್ಲದೆ ಹೆರರ ಮಡದಿಗಳುಪುವ'ವರು, 'ಸತ್ತ ನಾಯ ತಿಂಬ ಹಡ್ಡಿಗರು' ಎಂದು ತುಚ್ಛವಾಗಿ ನುಡಿದಿದ್ದಾನೆ. 'ಪರವಧುವ ನೆರೆವ'ವರಿಗೆ ಗುರುವೂ ಇಲ್ಲ ಪರವೂ ಇಲ್ಲ. ಶಿವಪೂಜೆಯನ್ನು ಬಿಟ್ಟು 'ವೇಶಿಯರ ಎಂಜಲ ಹೇಸದೆ ತಿಂಬ'ವರು

'ದೋಷಿ'ಗಳು. ಒಂದು ವೇಳೆ, 'ವೇಶಿಯ ಎಂಜಲ ತಿಂದು ಈಶ್ವರ ಪ್ರಸಾದವ ಭುಂಜಿಸಿದರೆ ಓಸರಿಸಿತಯ್ಯ ಲಿಂಗವು ಆ ದ್ರೋಹಿಗೆ'. ಅಂಥವನು ಭಾಷೆಗೆ ತಪ್ಪುತ್ತಾನೆ; ಭವದಲ್ಲಿ ಬಳಲುತ್ತಾನೆ. ಸಮಾಜ ಸುಧಾರಣೆಯಾಗಬೇಕಾದರೆ ಹಲವು ಸಾಮಾಜಿಕ ಅನ್ಯಾಯಗಳಿಗೆ ಕಾರಣವಾಗುವ ಹಾದರತನ ನಿಲ್ಲಬೇಕೆಂದು ನಿಷ್ಠುರವಾಗಿ ಟೀಕಿಸಿದ್ದಾನೆ. ಇಲ್ಲಿ ದಾಸಿಮಯ್ಯನ ಮನಸ್ಸಿಗಾಗಿರುವ ನೋವನ್ನು ಸ್ಪಷ್ಟವಾಗಿ ಗುರ್ತಿಸಬಹುದು. ವೈಚಾರಿಕವಾದ ಹೊಸ ಮನೋಧರ್ಮಕ್ಕೆ ಹೊಂದಿಕೊಳ್ಳುವಂತೆ ಜನಮನವನ್ನು ತಿದ್ದುವ ಇಂಥ ಕೆಲಸ ಸಾಮಾನ್ಯವಾದುದಲ್ಲ. ಬಹುಶಃ ದಾಸಿಮಯ್ಯನಂಥ ಸದಾಚಾರಿಗೆ ಮಾತ್ರ ಇದು ಸಾಧ್ಯ.

> ಸತಿಯರ ಸಂಗವನು, ಅತಿಶಯದ ಗ್ರಾಸವನು
> ಪೃಥಿವಿಗೀಶ್ವರನ ಪೂಜೆಯನು, ಅರಿವುಳ್ಳಡೆ,
> ಹೆರರ ಕೈಯಿಂದ ಮಾಡಿಸುವರೆ, ರಾಮನಾಥ.

ದಾಸಿಮಯ್ಯ ಕಂಡ ನೀಚ ಸಂಪ್ರದಾಯಗಳು ಇವು. ಅಂದಿನ ಸಮಾಜದಲ್ಲಿ ಕಾರಣಾಂತರಗಳಿಂದ ಬೇರೆಯವರಿಂದ ತಮ್ಮ ಸತಿಯ ಸಂಗವನ್ನು ಮಾಡಿಸುತ್ತಿದ್ದರು. ಶ್ರೀಮಂತರು ಧನಮದದಿಂದ ಅಥವಾ ಬೇಜವಾಬ್ದಾರಿಯಿಂದ ಪರರಿಂದ ಶಿವಪೂಜೆ ಮಾಡಿಸುತ್ತಿದ್ದರು. ಇದರಿಂದ ಫಲವಿಲ್ಲ. ಇದು ಕೂಡದು ಎಂದಿದ್ದಾನೆ ದಾಸಿಮಯ್ಯ.

> ಮುಂಡೆಗೆ ಮುಡಿಕಟ್ಟೇಕೋ ?
> ಗುಂಡಂಗೇಕೋ ಗುರುಪದಭಕ್ತಿ ?
> ಚಂಡಿಕೆ ತಲೆಯ ಚಂಡಾಲಂಗೆ
> ಅಖಂಡಿತ ಲಿಂಗವದು ಏಕೆ ಹೇಳಾ ರಾಮನಾಥ ?

ದುರ್ದೈವವಶಾತ್ ವಿಧವೆ ಮುಡಿಯಿಟ್ಟುಕೊಳ್ಳಬಾರದು. ತನ್ನ ಸ್ವಭಾವಕ್ಕೆ ವಿರುದ್ಧವಾಗಿ ದಾಸಿಮಯ್ಯ ಈ ಸಂಪ್ರದಾಯವನ್ನು ಒಪ್ಪಿಕೊಂಡಿರುವಂತಿದೆ. ಉಂಡಾಡಿಗುಂಡನಿಗೆ ಗುರುಪದ ಭಕ್ತಿ ಸಾಧ್ಯವಿಲ್ಲ. ಸಂಸ್ಕಾರವನ್ನು ರೂಢಿಸಿಕೊಳ್ಳದಿದ್ದರೆ ಚಂಡಾಲನಿಗೆ ಲಿಂಗದ ಅನುವಿನಿಂದ ಪ್ರಯೋಜನವಿಲ್ಲ. ಇಂಥ ಜನರಿಂದ ಸಮಾಜಕ್ಕೆ ಕೇಡುಕೇ ಹೊರತು ಒಳಿತಿಲ್ಲ. ನಿಜಕ್ಕೂ ಜ್ಞಾನಿಯಾಗಿದ್ದು ಅಜ್ಞಾನಿಯಂತೆ ಕಷ್ಟಪಟ್ಟರೆ ಫಲವಿಲ್ಲ. ಅದರಿಂದ ಅವನಿಗೂ ಸುಖವಿಲ್ಲ; ಸಮಾಜಕ್ಕೂ ಉದ್ಧಾರವಿಲ್ಲ. ಸಾಧಕ ಹೇಡಿಯಾದರೆ ವ್ಯರ್ಥ. ಸಾಮಾಜಿಕ ಕ್ರಾಂತಿ ಫಲಿಸಲು ಸಾಧಕರು ಧೈರ್ಯಶಾಲಿಗಳಾಗಿರಬೇಕೆಂಬುದು ದಾಸಿಮಯ್ಯನ ಅಭಿಪ್ರಾಯ.

ಇಂದಿಗೆಂತು ನಾಳಿಂಗೆಂತೆಂದು ಚಿಂತಿಸಲೇಕೆ?
ತಂದಿಕ್ಕುವ ಶಿವಂಗೆ ಬಡತನವೆ ರಾಮನಾಥ?

ಕೇವಲ ಹೊಟ್ಟೆಪಾಡಿಗಾಗಿಯೇ ಹಗಲಿರುಳೂ ಚಿಂತಿಸಬಾರದು. ಹುಟ್ಟಿಸಿದ ದೇವರು ಸದಾಚಾರಿಗೆ ಹುಲ್ಲುಮೇಯಿಸುವುದಿಲ್ಲ. ಇಲ್ಲಿ ಸೂಕ್ಷ್ಮಾರ್ಥವಡಗಿದೆ. ಬಡವರಿಗೆ ನೀಡಿದ ಸಂಜೀವಿನಿ ತತ್ವವಿದು. ನಿರ್ಗತಿಕರಿಂದಲೇ ಜಗದ ಉದ್ಧಾರವಾಗಿರತಕ್ಕದ್ದು. ಉದರಂಭರಣಕ್ಕಾಗಿ ನೀಚತನಕ್ಕಿಳಿಯಬಾರದು. ಎಲ್ಲವನ್ನೂ ಶಿವನಿಗರ್ಪಿಸಿದ ಮಹನೀಯ ಎಂಥ ಸಮಯದಲ್ಲೂ ಅಶಿವವನ್ನು ಮಾಡಬಾರದು.

ಮಂಡೆಯ ಬೋಳಿಸಿಕೊಂಡು
ನುಡಿದು ಗೋಷ್ಠಿಯ ಕಟ್ಟಿದಡೇನು?
ಕಂಡ ಕಂಡವರಿಗೆ ಕೈಯೊಡ್ಡಿ ಬೇಡುವ
ಭಂಡರನೊಲ್ಲ ರಾಮನಾಥ.

ಶಿವಭಕ್ತನ ವೇಷ ಧರಿಸಿ, ಮಠ ಸ್ಥಾಪಿಸಿ, ಸಿಕ್ಕಿದವರನ್ನು ಕಾಡಿ ಬೇಡಿ ಜೀವಿಸುವುದು ಅಧರ್ಮ. ಭಿಕ್ಷೆಗೆ ಇರುವ ಪಾವಿತ್ರ್ಯ ಇಂಥವರಿಂದ ನಾಶವಾಗುತ್ತದೆ. ಸ್ವಂತ ವ್ಯಕ್ತಿತ್ವವೇ ಇಲ್ಲವೆಂದಮೇಲೆ ಇವರಿಗೆ ಆತ್ಮಸಾಕ್ಷಿ ಎಲ್ಲಿಂದ ಬರಬೇಕು? ಸಮಾಜದ ಪೂಜ್ಯ ವ್ಯಕ್ತಿಗಳು ಆದರ್ಶ ಜೀವಿಗಳಾಗಬೇಕೆಂಬುದು ದಾಸಿಮಯ್ಯನ ಹಂಬಲ.

ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ
ಗೋರಿಗೊಳಿಸಿ ಕುರಿಯ ಕೊರಳಗೆ ಕೊಯ್ವುದೆಂಬ
ಕ್ರೂರ ಕರ್ಮಿಗಳನವರ ಶಿವಭಕ್ತರೆನ್ನಬಹುದೆ?
ಆರಯ್ಯದೇ ಅವರ ಮನೆಯಲುಂಡ ಭಕ್ತನು
ಅಘೋರ ನರಕಕ್ಕಿಳಿವ ಕಾಣಾ ರಾಮನಾಥ.

ಅಂದಿನ ಸಮಾಜದಲ್ಲಿ ಶಿವಭಕ್ತರು ಮಾರಿಯನ್ನು ಪೂಜಿಸಿ, ಮಾಂಸ ತಿಂದು, ಹೆಂಡ ಕುಡಿಯುತ್ತಿದ್ದರು. (ನರ ಮಾಂಸ ತಿನ್ನುತ್ತಿದ್ದ ಕಾಪಾಲಿಕ ಪಂಗಡದ ಭಕ್ತರು ಶಿವನಿಗೆ ನರಬಲಿ ಕೊಡುತ್ತಿದ್ದುದೂ ಉಂಟು.) ಏಕದೇವೋಪಾಸನೆ ಬಿಟ್ಟು ಮಾರಿ ಮಸಣಿಯರನ್ನು ಪೂಜಿಸುತ್ತಿದ್ದರು. ಇದು ಮೌಢ್ಯದ ಪರಮಾವಧಿ. ಇಂಥವನ್ನೆಲ್ಲ ಉಗ್ರವಾಗಿ ಪ್ರತಿಭಟಿಸಿದ ದಾಸಿಮಯ್ಯ. ಭಕ್ತರು ಲಿಂಗವನ್ನು ಮಾರಿ ಉಣ್ಣುವುದು, ತಮ್ಮ ತಳಿಗೆ ಸಹಿತ ಅನ್ಯರ ಮನೆಯಲ್ಲಿ ಉಣ್ಣುವುದು--ಈ ಕ್ರಿಯೆಗಳು ನಾಯಿಗಳಿಗೆ ಸಮಾನವೆಂದು ಟೀಕಿಸಿದ. ಇಂಥದನ್ನು ನಿರ್ದಾಕ್ಷಿಣ್ಯವಾಗಿ

ಜರಿದು ಅದೇ ಸಮಾಜದಲ್ಲಿ ಮಹನೀಯನಾಗಿ ಬಾಳಿದ ದಾಸಿಮಯ್ಯನ ವ್ಯಕ್ತಿತ್ವ ಅನುಪಮವಾದುದು.

ಜಂಬೂದ್ವೀಪವನೆಲ್ಲಾ ತಿರುಗಿದಡೇನು
ಜಂಬುಕ ಶಂಭುಧ್ಯಾನದಲ್ಲಿ ಸೈವೆರಗಪ್ಪುದೆ?
ಕುಂಭಿನಿಯ ತಿರುಗಿ ಕೋಟಿ ತೀರ್ಥವ ಮಿಂದಡೇನು?
ಕುಂಭಿನಿಯ ತಿರುಗಿದ ಡೊಂಬನಂತೆ ಕಾಣಾ ರಾಮನಾಥ.

ಇಂದಿನಂತೆ ಅಂದಿನ ಶರಣರೂ ದರ್ಶನಾರ್ಥಿಗಳಾಗಿ ಕ್ಷೇತ್ರಗಳಿಗೆ ಹೋಗುತ್ತಿದ್ದರು. ಅಂಥವರಿಂದ ಸಮಾಜಕ್ಕೆ ಯಾವ ಲಾಭವೂ ಆಗದುದನ್ನು ಕಂಡು ದಾಸಿಮಯ್ಯ ಹೀಗೆ ಟೀಕಿಸಿದ್ದಾನೆ. ಕ್ಷೇತ್ರಕ್ಕೆ ಹೋಗಿಬಂದಮೇಲಾದರೂ ಗುಣ ಶುದ್ಧವಾಗಬೇಕು; ಆಚಾರದಲ್ಲಿ ಸದಾಚಾರ ಕಾಣಿಸಬೇಕು. ಇಲ್ಲದಿದ್ದರೇಕೆ ಕ್ಷೇತ್ರದರ್ಶನ? 'ಉಣ್ಣೆ ಕೆಚ್ಚಲ ಹತ್ತಿ ಉಂಬುದೆ ನೊರೆ ಹಾಲ?' ಹಾಗೆಯೇ ವ್ಯರ್ಥ. 'ಪುಣ್ಯ ಕ್ಷೇತ್ರದಲ್ಲಿ ಹುಟ್ಟಿ ಉಣ್ಣದವನು ಆ ಉಣ್ಣೆಯಿಂದ ಕರಕಷ್ಟ. ಅಂಥವನು ಉಣ್ಣೆಗಿಂತಲೂ ಕೀಳು. ದಾಸಿಮಯ್ಯನಿಗೆ ಸೋಗಿನ ಜೀವನ ಸ್ವಲ್ಪವೂ ಹಿಡಿಸುವುದಿಲ್ಲ.

ವೇಷವ ಹೊತ್ತ ಹಿರಿಯರು ಈಶ್ವರ ಧ್ಯಾನದಲಿರಬೇಕು
ವೇಷವ ತೋರಿ, ಗ್ರಾಸಕ್ಕಾಗಿ ಆಸೆ ಮಾಡಿ
ಲೋಗರ ಮನೆಯ ಕಾದು, ಗ್ರಾಸವ ಪಡೆದು
ಉದರವ ಹೊರೆವ ವೇಷವು
ವೇಶಿಯಿಂದಲೂ ಕರಕಷ್ಟ ಕಾಣಾ ರಾಮನಾಥ.

ಮಹನೀಯರೆನಿಸಿಕೊಂಡವರಲ್ಲಿ ವೇಷಕ್ಕೆ ತಕ್ಕ ಆಚಾರವಿರಬೇಕು. ಹೊಟ್ಟೆ ಹೊರೆಯುವುದಕ್ಕಾಗಿಯೇ ವೇಷ ಕಟ್ಟಬಾರದು. ಕೆಟ್ಟ ಸ್ವಾಮಿ ಸೂಳೆಗಿಂತ ಕಡೆ. ಇಂಥ ವಿಷಯಗಳಲ್ಲಿ ಕಟ್ಟುನಿಟ್ಟಾದ ನಿಷ್ಠುರ ವ್ಯಕ್ತಿ ದಾಸಿಮಯ್ಯ. ಕೆಟ್ಟದ್ದನ್ನು ಸಹಿಸುವುದಕ್ಕೆ ಅವನಿಂದಾಗದು. 'ವೇಷಕ್ಕಂಜುವೆ, ದೋಷಕ್ಕೆ ಹೇಸುವೆ.' ಈಶ್ವರ ಸದೃಶನಾದ ಶರಣ ನಿಜವಾದ ಭಕ್ತನಿಂದ ಮಾತ್ರ ಆರೋಗಣೆ ಪಡೆಯಬೇಕು.

ವೇಷವ ಹೊತ್ತು ದೋಷದಲ್ಲಿ ನಡೆವಡೆ
ವೇಷಕ್ಕೆ ದೋಷ ಭಂಡ ಮೊದಲು
ವೇಷವ ಕಂಡು ಲೇಸೆಂದು ಕೊಂಡಾಡುವ
ದೋಷಿಗಳ ನರಕದಲ್ಲಿಕ್ಕುವ ಕಾಣಾ ರಾಮನಾಥ.

ಮೋಸ ಮಾಡುವವನಿಗೆ ಮತ್ತು ಮೋಸ ಹೋಗುವವನಿಗೆ ಇಬ್ಬರಿಗೂ ಸಮಾಜದಲ್ಲಿ ಅವಕಾಶ ಉಂಟು. ಇಂಥ ಇಬ್ಬರಿಂದಲೂ ಸಮಾಜ ನಾರುತ್ತದೆ. ಆದ್ದರಿಂದಲೇ ದಾಸಿಮಯ್ಯ ಇಂಥವರಿಗೆ ಛೀಮಾರಿ ಹಾಕುವುದು. ಒಳ್ಳೆಯದು ಕೆಟ್ಟದ್ದು ಎಲ್ಲಕ್ಕೂ ಈ ಭೂಮಿಯೇ ಮಾತೃಸ್ಥಾನ. ಒಳ್ಳೆಯದನ್ನೇ ಬೆಳೆದು ಪಡೆಯುವುದು ಬುದ್ಧಿಜೀವಿಗಳ ಜಾಣ್ಮೆಯ ಲಕ್ಷಣ. 'ವೇಷವು ಲೋಕವ ಹಾರುವುದು, ವೇಶಿಯು ಲೋಕವ ಹಾರುವಳು. ವೇಷವ ಹೊತ್ತು ಲೋಕವ ಹಾರದಿದ್ದರೆ ಆತನ ಈಶ್ವರನೆಂಬೆ.' ಸದಾಚಾರಕ್ಕೆ ಅಗ್ರಾಸನ ಇತ್ತವನು ದಾಸಿಮಯ್ಯ.

ಸುವ್ಯವಸ್ಥಿತ ಸಮಾಜದಲ್ಲಿ ಪ್ರತಿಯೊಬ್ಬನಿಗೂ ಆರ್ಥಿಕ ವ್ಯವಸ್ಥೆ ಉತ್ತಮವಾಗಿರಬೇಕು. ಆದರೆ ಸಂಪಾದನೆಯ ಮಾರ್ಗದಿಂದ ಪರರಿಗೆ ಕೇಡುಂಟಾಗಬಾರದು. 'ಕಳ್ಳ ಹಾದರಿಗರ ಸಂಪಾದನೆ ಹೊಳ್ಳ ಕುಟ್ಟಿ ಕೈ ಕೋಟಿಯಾದಂತೆ.'

ತನು ತನ್ನ ಹೊರೆಯಲೇಸುದಿನವಿದ್ದಡೇನು
ಮನ ತನ್ನ ಹರಿದತ್ತ ಹರಿದ ಬಳಿಕ?
ಕೆನೆಯಿಲ್ಲದ ಮೊಸರ ಕಡೆದರೆ ಅಲ್ಲಿ
ಒಂದು ಹನಿ ತುಪ್ಪವಿಲ್ಲ ಕಾಣಾ ರಾಮನಾಥ.

ದೇಹ ಸ್ಥೂಲ; ಮನ ಸೂಕ್ಷ್ಮ. ಮನುಷ್ಯ ಜಡ; ಭಗವಂತ ಚೇತನ ಸ್ವರೂಪಿ. ಇವು ಭಿನ್ನವಾಗಿರದೆ ದೇಹ ಮನಸ್ಸು ಸದಾ ಒಟ್ಟಾಗಿರಬೇಕು. ಚೇತನದ ಅಭಿವ್ಯಕ್ತಿಗೆ ಜಡವೇ ಮಾಧ್ಯಮ. ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಂಡ ಮನುಷ್ಯ ಅನುಭಾವಿಯಾಗಬೇಕು. ಏಕೆಂದರೆ, 'ಅನುಭಾವದ ಅನುಭಾವವನು ಮನವಾರ ವೇದಿಸಿದವರಿಗೆ ಜನನವಿಲ್ಲ.'

ಒರತೆಗಳ ಕಂಡಿಂತು ಕೆಲರು ಬಾವಿಯ ತೋಡೆಂಬರು
ಅರವಟ್ಟಿಗೆ ಛತ್ರವು ತಮ್ಮದೆಂಬರು
ಎಲೆ ಪೈರೈದದಿರಾಗೆ
ಸುರಿವ ಮಳೆ ಸುರಿಯದಿರ್ದಡೆ
ಅವರೇತರಲ್ಲಿ ನೀಡುವರಯ್ಯ ರಾಮನಾಥ?

ಪುರುಷ ಪ್ರಯತ್ನದಿಂದ ಹಲವು ಕೆಲಸಗಳಾಗುತ್ತವೆ ನಿಜ. ಆದರೆ ಅದಕ್ಕೆ ದೈವ ಸಹಾಯವೂ ಬೇಕೆಂಬುದನ್ನು ಯಾರೂ ಅಲ್ಲಗಳೆಯಲಾರರು. ಇರುವವನು ಇಲ್ಲದವನಿಗೆ ಕೊಡಬೇಕಾದುದು ಧರ್ಮ. ಇಲ್ಲದಿದ್ದರೆ ಸಮಾಜದಲ್ಲಿ ಏನೆಲ್ಲ ಆಂದೋಳನಗಳು ನಡೆಯುತ್ತವೆ.

ಹೀಗೆ, ದೇವರ ದಾಸಿಮಯ್ಯ ತನ್ನ ಸಮಕಾಲೀನ ಸಮಾಜದಲ್ಲಿ ಕಂಡ ವೈಪರೀತ್ಯಗಳನ್ನು ಕಟುವಾಗಿ ಖಂಡಿಸಿ, ಸರಿಯಾದ ಮಾರ್ಗವನ್ನು ತೋರಿಸಿ, ಅಂದಿನ ಶಿವಶರಣರು ಬಯಸಿದ ನೂತನ ಸಮಾಜದ ಸ್ಥಾಪನೆಗೆ ನಾಂದಿ ಹಾಡಿದ್ದಾನೆ. ಸಾಮಾಜಿಕ ಸುಧಾರಣೆಯ ಕಾರ್ಯದಲ್ಲಿ ದಾಸಿಮಯ್ಯನ ಪಾತ್ರ ವಿಶಿಷ್ಟವಾದುದು. ದೇವರ ದಾಸಿಮಯ್ಯ ಹಾಕಿಕೊಟ್ಟ ಸಾಮಾಜಿಕ ಕ್ರಾಂತಿಯ ಹೆದ್ದಾರಿಯಲ್ಲಿ ಮುಂದಿನ ವಚನಕಾರರು ನಡೆದಿದ್ದಾರೆ.

ಪವಣಂಜಯ : ಜಾಗತಿಕ ಪಂದ್ಯಾಳು

(ಒಂದು ಲಾವಣಿ ಹಾಡಿನ ವಿವೇಚನೆ)

—ಭುಜೇಂದ್ರ ಮಹೀಶವಾಡಿ

ಪವಣಂಜಯನು ಓರ್ವ ಜಾಗತಿಕ ಪಂದ್ಯಾಳು (Olympic Sportsman); ಅವನು ಭಾರತದ ಒರ್ವ ಸುಪ್ರಸಿದ್ಧ ಓಟಗಾರ; ಅವನು ಕನ್ನಡ ನಾಡಿನವ; ಬೆಳಗಾವಿಯುವ; ಅಚ್ಚಕನ್ನಡಿಗ; ಸುಮಾರು ೫೫ ವರ್ಷಗಳ ಪೂರ್ವದಲ್ಲಿ ಇಂಗ್ಲೆಂಡಿನಲ್ಲಿ ನಡೆದ ಸ್ಪರ್ಧೆಗಳಲ್ಲಿಯೂ ಬೆಲ್ಜಿಯಮ್ಮಿನಲ್ಲಿ ನಡೆದ ಜಾಗತಿಕ ಪಂದ್ಯ (Olympic Sports Meet) ದಲ್ಲಿಯೂ ಭಾಗವಹಿಸಿ ಓಡುವುದರಲ್ಲಿ ವಿಜಯಶಾಲಿಯಾಗಿ ಭಾರತಕ್ಕೆ ಕೀರ್ತಿ ತಂದನು. ಅವನ ಕಥೆ ರೋಮಾಂಚಕಾರಿಯಾಗಿದೆ.

ಪವಣಂಜಯನ ಪೂರ್ಣ ಹೆಸರು—ಪವಣಂಜಯ ಫಡೆಚ್ಚ ಚೌಗುಲೆ. ಅವನ ಸಂಬಂಧಿಕರು ಇಂದಿಗೂ ಬೆಳಗಾವಿಯ ಮಠಗಲ್ಲಿಯಲ್ಲಿ ಇದ್ದಾರೆ. ಇಂದಿಗೆ ೫೫ ವರ್ಷಗಳ ಪೂರ್ವದಲ್ಲಿ ಅಂದರೆ ೧೯೨೦ನೆಯ ಇಸವಿಯಲ್ಲಿ ಮುಂಬಯಿಯ ಗವರ್ನರನು ಪವಣಂಜಯನನ್ನು ಆಯ್ಕೆ ಮಾಡಿ ಇಂಗ್ಲೆಂಡಿಗೆ ಕಳಿಸಿದನು. ಅಲ್ಲಿ ೩-೪ ಸ್ಪರ್ಧೆಗಳಲ್ಲಿ ಅವನನ್ನು ಟೆಸ್ಟ್ ಮಾಡಿ ಅವನನ್ನು ಬೆಲ್ಜಿಯಮ್ಮಿಗೆ ಕಳಿಸಿದರು. ಅಲ್ಲಿ ಓಡುವ ಜಾಗತಿಕ ಪಂದ್ಯದಲ್ಲಿ ಗೆಲುವು ಪಡೆದು, ಭಾರತಕ್ಕೆ, ಬೆಳಗಾವಿಗೆ ಮರಳಿ ಬಂದು, ಸರಕಾರದಿಂದ ಜನತೆಯಿಂದ ಮಹಾ ಮರ್ಯಾದೆಯನ್ನು ಹೊಂದಿ ಪವಣಂಜಯನು ಕೀರ್ತಿಶಾಲಿಯಾದನು.

ಇಷ್ಟೇ ಆಗಿದ್ದರೆ ಪವಣಂಜಯನನ್ನು ಜನತೆ ಎಂದೋ ಮರೆತುಬಿಡುತ್ತಿತ್ತು. ಇಂದಿನವರೆಗೂ ಅವನ ಕೀರ್ತಿಯ ಕಥೆ ಉಳಿದುಬರುತ್ತಿರಲಿಲ್ಲ. ಪವಣಂಜಯನ ಸಮಕಾಲೀನನಾದ ಬೆಳಗಾವಿಯ ಜನಪದ ಕವಿ ದ್ವಾರಪಾಲನು 'ಲಾವಣಿ'—ಹಾಡಿನ ಶಿಲ್ಪದಲ್ಲಿ ಪವಣಂಜಯನ ಮೂರ್ತಿಯನ್ನು ಸುಂದರವಾಗಿ ಕೆತ್ತಿ ಇಟ್ಟಿದ್ದಾನೆ. ಆದ್ದರಿಂದಲೇ ನಾವು ಇಂದು ಜಾಗತಿಕ ಪಂದ್ಯಾಳು ಒಬ್ಬನ ಚರಿತ್ರೆಯನ್ನು

ತಿಳಿದುಕೊಂಡು ಸ್ಫೂರ್ತಿ ಹೊಂದಲು ಸಾಧ್ಯವಾಗಿದೆ. (ಜಾನಪದ ಕವಿಯೊಬ್ಬನ ಹಾಡನ್ನು ಹಾಡಿಕೊಂಡು ರಸಾಮೃತ ಪಾನದಿಂದ ಆನಂದವನ್ನು ಹೊಂದಲು ಸಾಧ್ಯವಾಗಿದೆ.)

ಕವಿ ದ್ವಾರಪಾಲನ ಹಾಡುಗಳನ್ನು ಸಂಗ್ರಹಿಸಲು ತೊಡಗಿದ ನನಗೆ ಅವನು ಬರೆದ 'ಪವಣಂಜಯನ ಲಾವಣಿ' ತೀರ ಆಕಸ್ಮಿಕವಾಗಿ ಬೆಳಗಾವಿಯಲ್ಲಿ ದೊರೆಯಿತು. ಈ ಲಾವಣಿ ಇನ್ನೂ ಎಲ್ಲಿಯೂ ಅಚ್ಚಾಗಿಲ್ಲ. ದ್ವಾರಪಾಲ ಕವಿಯ ಕೆಲವು ಹಾಡುಗಳು ಕಿರಿಯ ಹೊತ್ತಿಗೆಗಳ ರೂಪದಲ್ಲಿ ಅಚ್ಚಾಗಿದ್ದುದನ್ನು ಕಂಡಿದ್ದೇವೆ. ಅವುಗಳಲ್ಲಿ ಎಲ್ಲಿಯೂ ನನಗೆ ಪವಣಂಜಯನ ಲಾವಣಿ ಅಚ್ಚಾದುದು ಕಾಣಲಿಲ್ಲ. ಪ್ರಸ್ತುತ ಲಾವಣಿಯನ್ನು ಓದಿ ನೋಡಿದಾಗಲೆಲ್ಲ ನನಗೆ ಆದ ಆನಂದ ಅಪಾರ. ಅದು ಚಿರನೂತನ ಚಿಲುಮೆಯಾಗಿದೆ. ಅದನ್ನೀಗ ಸಹೃದಯರಿಗೆ ಪರಿಚಯ ಮಾಡಿಕೊಡುತ್ತಿದ್ದೇನೆ. ಕರ್ನಾಟಕ ವಿಶ್ವವಿದ್ಯಾಲಯ ಪ್ರಚಾರೋಪನ್ಯಾಸ ಮಾಲಿಯಲ್ಲಿ ನನ್ನ ಪುಟ್ಟ ಪುಸ್ತಕ 'ಜಾನಪದ ವೀರಗೀತೆಗಳು' ೧೯೭೦ರಲ್ಲಿ ಬೆಳಕು ಕಂಡಿತು. ಅದರಲ್ಲಿ ಪವಣಂಜಯನ ಲಾವಣಿಯನ್ನು ಪ್ರಥಮಸಲ (ಸ್ವಲ್ಪ ಭಾಗ) ಪರಿಚಯ ಮಾಡಿಕೊಟ್ಟಿದ್ದೇನೆ. ಅದು ಬಹಳ ಜನರ ಚಿತ್ತವನ್ನು ಸೆಳೆದುದರಿಂದ ಇದೀಗ ಮತ್ತೊಮ್ಮೆ ಪವಣಂಜಯನ ಚರಿತ್ರೆಯನ್ನು ಪೂರ್ಣವಾಗಿ ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಿದ್ದೇನೆ.

ಪುಣ್ಯವಿರಬೇಕು ಹಿಂದಿಂದಾ |
ಪುಣ್ಯದಿಂದ ಬರತಾರ ಮುಂದಾ ||
ಪುಣ್ಯದ ಫಲಾ ನಿಮಗ ಹೇಳತೇನಿ |
ಶಾಂತಕುಂತ ಕೇಳಿರಿ ಇಂದಾ ||

—ಹೀಗೆ ಹಾಡು ಪ್ರಾರಂಭವಾಗುತ್ತದೆ. ಆಮೇಲೆ ಕ್ರಮದಿಂದ ಪವಣಂಜಯನ ಕಥೆ ಸುಂದರ ಸರಳ ವರ್ಣನೆಯೊಂದಿಗೆ ಸುರುಳಿಯುಚ್ಚುತ್ತ ಹೋಗುತ್ತದೆ.

ದೇಶದೊಳಗ ಬೆಳಗಾವಿ ನಗರಾ |
ಜನ್ಮತಗೊಂಡಾನಲ್ಲಿ ಕುವರಾ ||
ಪವಣಂಜಯ ಫಡೆಪ್ಪ ಚೌಗಲಾ |
ಮಾಡಿಕೊಂಡಿದಾನ ತನ್ನ ಹೆಸರಾ ||

ಓಡುವುದಕ ಆದಾನ ಶೂರಾ |
ಯಾವ ನಿಲ್ಲಲಿಲ್ಲ ಅವನಿದಿರಾ ||

ಮೂರ ತಾಸಿನಾಗ ಹತ್ತ ಹರದಾರಿ |
ಓಡಿ ಬರತಾನಿಲ್ಲದ ಬ್ಯಾಸರಾ ||

ಬೆಳಗಾವಿಯ ಚೌಗಲೆ ಫಡೆಪ್ಪನ ಮಗನಾದ ಪವಣಂಜಯನು ಓಡುವುದರಲ್ಲಿ ಶೂರನೆನಿಸಿಕೊಂಡು ಹೆಸರುವಾಸಿಯಾದನು. ಮೂರು ತಾಸಿನಲ್ಲಿ ಹತ್ತು ಹರದಾರಿ ಅಂದರೆ ಸುಮಾರು ೨೦-೨೫ ಮೈಲು ನಿರಾಯಾಸವಾಗಿ ಓಡಿಬರುತ್ತಿದ್ದನಂತೆ; ಅವನ ಕೂಡ ಸ್ಪರ್ಧೆ ಮಾಡುವುದು ಯಾರಿಗೂ ಸಾಧ್ಯವಿರಲಿಲ್ಲ; ಅವನ ಓಟದ ವೇಗವನ್ನು ಕವಿಯು ಬಹಳ ಚಮತ್ಕಾರಿಕವಾಗಿಯೂ ಅತಿಶಯೋಕ್ತಿಯಿಂದಲೂ ವರ್ಣಿಸುತ್ತಾನೆ; ಆದರೂ ಕೇಳಲು ಬೇಸರವಾಗದು; ಅವನ ಮಾತಿನ ಮಾಯೆಗೆ ಹಿಗ್ಗುತ್ತೇವೆ.

ಸೋತಾವ ಕುದುರಿ-ಮೋಟಾರಾ |
ರೇಲ್ವೆಗಾಡೀದ ಹಾರಿತ ಖಬರಾ ||
ಪಕ್ಕ ಇಲ್ಲದ ಪಕ್ಷಿ ನೋಡರಿ |
ಒಲದಾನವಗ ಜಿನೇಶ್ವರಾ ||

ಸ್ಪರ್ಧೆಗೆ ನಿಂತರೆ ಕುದುರೆ ಮೋಟಾರುಗಳೂ ಅವನಿಗೆ ಸೋಲುತ್ತಿದ್ದುವಂತೆ ರೈಲುಗಾಡಿ ಸಹ ಎಚ್ಚರ ಕಳೆದುಕೊಳ್ಳುತ್ತಿತ್ತಂತೆ; ಪಕ್ಷಿಗೂ ಪವಣಂಜಯನಿಗೂ ಅಂತರವೇ ಇರಲಿಲ್ಲ; ಪವಣಂಜಯನು ಪಕ್ಕವಿಲ್ಲದ ಪಕ್ಷಿಯಾಗಿದ್ದನು, ಅಷ್ಟೆ; ಜಿನೇಶ್ವರನು ಅವನಿಗೆ ಒಲಿದಿದ್ದುದರಿಂದ ಓಡುವ ಕಲೆಯಲ್ಲಿ ಅವನಿಗೆ ಸಿದ್ಧಿ ಲಭಿಸಿತ್ತು; ಎಂದು ಭಾವುಕನಾಗಿ ಹೇಳಿಬಿಡುತ್ತಾನೆ;

ಹಿಂದುಸ್ತಾನದಾಗ ಇಲ್ಲಯಾರಾ |
ನೋಡೀದ ಮುಂಬಯಿ ಗವರ್ನರಾ ||
ಮುಸ್ತಮುಂದಿ ಬಂದ ಓಡ್ಯಾರ ಹಿಂಬಾಲಿ |
ತಾಳಲಿಲ್ಲ ಸೋತಾರು ಅವರಾ ||

ಭಾರತದಲ್ಲಿ ಓಡುವ ಶರ್ಯತ್ತು ನಡೆದು ಪವಣಂಜಯನು ಎಲ್ಲರನ್ನು ಸೋಲಿಸಿ ಪ್ರಥಮ ಮರ್ಯಾದೆಯನ್ನು ಪಡೆದ ಘಟನೆ ಮುಂಬಯಿ ಗವರ್ನರನ ಸಮಕ್ಷಮದಲ್ಲಿ ನಡೆದಿರಬೇಕು. ಅಂದರೆ ಪವಣಂಜಯನ ಆಯ್ಕೆ ಆಗಿರಬೇಕು.

ಇನಾಮುದ ಮ್ಯಾಲಿ ಇನಾಮು ಕೊಟ್ಟ |
ಕಳಿಸ್ಯಾರೇನ ಕಮ್ಮಾ? ||

ಅವನಿಗೆ ಗವರ್ನರನು ಬಹುಮಾನ ಕೊಟ್ಟು ಕಳಿಸಿರಬೇಕೆಂದು ತೋರುತ್ತದೆ.

ಹುಟ್ಟಬಂದ ಹುಣ್ಣಿವಿ ಚಂದ್ರಮಾ |
ರೂಪದಲ್ಲಿ ನೋಡ್ರಿ ಕಾಮಾ ||
ಒಪ್ಪೀತ ಪವಣಂಜಯ ನಾಮಾ |
ಬ್ರಹ್ಮಚರ್ಯದಲ್ಲಿ ಭೀಷ್ಮಾ ||

ಆದೇತಾನೆ ಹುಟ್ಟಬಂದ ಚಂದ್ರನಂತೆ ಅವನು ಕಾಂತಿಯುಳ್ಳವನಾಗಿದ್ದ ನೆಂದೂ, ಕಾಮನಂತೆ ಅವನು ಅತಿ ಸುಂದರ ರೂಪವುಳ್ಳವನಾಗಿದ್ದನೆಂದೂ, ಗಾಳಿಯನ್ನು ಮೀರಿದ ವೇಗದಿಂದ ಓಡಬಲ್ಲವನಾಗಿದ್ದುದರಿಂದ 'ಪವಣಂಜಯ' ಎಂಬ ಹೆಸರು ಅವನಿಗೆ ಒಪ್ಪಿದ್ದಿತೆಂದೂ, ಭೀಷ್ಮನಂತೆ ಅವನು ಬ್ರಹ್ಮಚಾರಿಯಾಗಿದ್ದ ನೇದೂ ಕವಿಯು ವರ್ಣಿಸುವುದನ್ನು ನೋಡಿಪರೆ—ಪವಣಂಜಯನ ವ್ಯಕ್ತಿತ್ವ ಕಣ್ಣು ಮುಂದೆ ಕಲ್ಲಿನ ಕೊರೆದ ಪುತ್ಥಳಿಯಂತೆ ನಿಂತುಬಿಡುತ್ತದೆ.

ಪತ್ರಗಳು ಒದಗಿದಾವ ಹೋಗಿ |
ಸುದ್ದಿ ಮುಟ್ಟಿತು ವಿಲಾಯತಿಗಿ ||
ಬೆಲ್ಜಿಯಮ್ ದೇಶದೊಳಗ ದೊಡ್ಡ ಶರ್ತ ಇದೆ |
ಕಳಸ ಅಂದಾರ ಪವಣಂಜಯಗ ||

ಮುಂಬಯಿ ಗವರ್ನರನು ಗ್ರೇಟ್ ಬ್ರಿಟನ್ನಿಗೆ ಪವಣಂಜಯನ ಹೆಸರನ್ನು ಶಿಫಾರಸು ಮಾಡಿ ಕಳಿಸಿರಬಹುದು. ಪತ್ರ ವ್ಯವಹಾರಗಳು ನಡೆದಿರಬಹುದು. ವಿಲಾಯತಿ ಸರಕಾರದಿಂದ ಸಿಫಾರಸು ಮಾನ್ಯ ಮಾಡಲ್ಪಟ್ಟು, ಬೆಲ್ಜಿಯಮ್ ಶರ್ತಿಗೆ ಪವಣಂಜಯನನ್ನು ಕಳಿಸುವುದಕ್ಕಾಗಿ ಗವರ್ನರನಿಗೆ ತಿಳಿಸಿರಬೇಕು. (ಆಗ ಭಾರತ ದಾಸ್ಯ ರಾಷ್ಟ್ರವಾಗಿದ್ದುದರಿಂದ ನೇರವಾಗಿ ಜಾಗತಿಕ ಪಂದ್ಯದಲ್ಲಿ ಭಾಗವಹಿಸಲು ಬರುತ್ತಿರಲಿಲ್ಲ. ಇಂಗ್ಲೆಂಡಿನ ಅಥವಾ ಗ್ರೇಟ್ ಬ್ರಿಟನ್ನಿನ ಪ್ರತಿನಿಧಿಯಾಗಿ ಅದರ ವಸಾಹತು ಪ್ರಜರು ಸಹ ಭಾಗವಹಿಸಬಹುದಾಗಿತ್ತು. ಆದ್ದರಿಂದಲೇ ಪವಣಂಜಯ ನನ್ನು ಮೊದಲು ಇಂಗ್ಲೆಂಡಿಗೆ ಕಳಿಸಿ, ಅಲ್ಲಿ ಟೆಸ್ಟ್ ಮಾಡಿ, ಅಲ್ಲಿಂದ ಬೆಲ್ಜಿಯಮ್ಮಿಗೆ ಕಳಿಸುವ ಏರ್ಪಾಡು ಆಯಿತು).

ಸರಕಾರಿ ಹಡಗ ತಯಾರಾಗಿ |
ಬಂದಿತ ಮುಂಬಯಿಕ ಸಾಗಿ ||
ಸೂರ್ಯನ ಹಾದಿ ಕಮಲ ನೋಡಿಧಾಂಗ |
ನೋಡತೈತಿ ಬೆಳಗಾವಿ ಗಾಡಿಗಿ ||

ಸರಕಾರಿ ಹಡಗು ಪವಣಂಜಯನನ್ನು ಇಂಗ್ಲೆಂಡಿಗೆ ಕರೆದುಕೊಂಡು ಹೋಗಲು ಸಿದ್ಧವಾಗಿ ಮುಂಬಯಿ ಬಂದರಿನಲ್ಲಿ ಬಂದು ನಿಂತಿತು. ಸೂರ್ಯನು ಬರುವ

ದಾರಿಯನ್ನು ಕಮಲವು ಹೇಗೆ ಕಾತರಭಾವದಿಂದ ಎದುರು ನೋಡುತ್ತ ನಿಲ್ಲುತ್ತದೆಯೋ ಹಾಗೆ, ಹಡಗವೆಂಬ ಕಮಲವು ಬೆಳಗಾವಿಯ ರೈಲುಗಾಡಿಯಿಂದ ಮುಂಬಯಿಗೆ ಬರಲಿರುವ ಪವಣಂಜಯನೆಂಬ ಸೂರ್ಯನನ್ನು ಎದುರು ನೋಡುತ್ತಿದ್ದಿತಂತೆ; (ಕ್ಲಿಷ್ಟವಾಗಿರುವಂತೆ ಕಂಡರೂ) ಹೋಲಿಕೆ ಬಹಳ ಸುಂದರವಾಗಿದೆ: ಹೊಸ ರೀತಿಯದಾಗಿದೆ.

ಹೊರಡೋದು ಆತ ಜೂನ್ ತಿಂಗಳಿಗಿ |
ಹುಕುಂ ಕಳಿವಿದಾರೋವರ್ದಿ ಎಕ್ಸ್ಪ್ರೆಸ್ವೀಸಾ ||
ತಾರೀಖ ಪಾಚಾ ಹತ್ತೀದ ಗಾಡಿ ಏಕಾಂಗಿ |
ಬಂಧುಬಳಗ ಬಂದೀತ ಭೆಟ್ಟೀಗಿ ||

ಅಂದರೆ—೧೯೨೦ನೇ ಇಸವಿ ಜೂನ್ ತಿಂಗಳ ೫ನೆಯ ತಾರೀಖಿಗೆ ಪವಣಂಜಯನು ಹೊರಡುವುದು ನಿಶ್ಚಯವಾಯ್ತು. ಹಾಗೆಂದು ಹುಕುಂ ಬಂದಿತು. ಏಕೈಕ ವೀರನಂತೆ ಒಬ್ಬೊಂಟಿಗನಾಗಿ ಗಾಡಿ ಹತ್ತಿದನು. ಬಂಧುಬಳಗ ಕಳಿಸಲು ಬಂದಿತ್ತು.

೧೯೨೦ ಜೂನ್ ೫ರಂದು ಬೆಳಗಾವಿ ರೈಲು ನಿಲ್ದಾಣದಲ್ಲಿ ಪವಣಂಜಯನನ್ನು ಬೀಳ್ಕೊಡುವುದಕ್ಕೆ ಕೂಡಿದ ಬಂಧುಬಳಗದವರೂ, ಮಿತ್ರರೂ, ಅಭಿಮಾನಿಗಳೂ ಅವನಿಗೆ ಕೊರಳ ತುಂಬ ಹೂವಿನ ಹಾರ ಹಾಕಿ ಅಭಿನಂದಿಸಿ ಅಕ್ಕರೆಯಿಂದ ಕಳಿಸಿಕೊಡುವ ಸನ್ನಿವೇಶ ಹೃದಯದ್ರಾವಕವಾಗಿ ಚಿತ್ರಿತವಾಗಿದೆ:

ಬಂಧು ಬಳಗ ಬಂದಿತ ಭೆಟ್ಟೀಗಿ |
ದುಃಖ ಮಾಡತಾರ ಹೋಗಿ ಬದಿಗಿ ||
ಕೊರಳ ತುಂಬ ಮಾಲಿ ಹಾಕ್ಕೊಂಡ ನಿಂತ |
ಹೋಗಿ ಬರತೀನಿ ಅಂತಾನ ಎಲ್ಲಾರಿಗಿ ||

ಚಿಕ್ಕ ವಯಸ್ಸಿನ ತರುಣ ಏಕಾಂಗಿಯಾಗಿ ಸಾವಿರಾರು ಮೈಲು ಪ್ರವಾಸ ಹೊರಟಿದ್ದಾನೆ; ಮುಂದೆ ಹೇಗೋ ಏನೋ ಎಂದು ಅವರಿಗೆ ದುಃಖವಾಗಿರುವುದು ಸಹಜವಾಗಿದೆ.

ಕಂಡಾನು ನೋಡುವ ಜನಕ್ಕ
ಅಭಿಮನ್ಯು ಹೊಂಟಾಂಗ ರಣಕ್ಕ !

ಹ್ಯಾಂಗ ಜಯಿಸಿ ಬರತೀ ಬಾಲಕ ?
ಅಲ್ಲಿ ಯಾರು ನಿನ್ನ ಪಾಲಕ ?

ಅದ ಐತಿ ಸ್ವರ್ಗದಾ ಲೋಕ!
ಎಂದ ಬರತೀ ಬಾಳಾ ಹಿಂದಕ?

ಗದ್ಗದಿತ ಕಂಠದಿಂದ ಕಳಿಸಿಕೊಡಲು ಬಂದ ಬಳಗದ ಅಕ್ಕರೆಯ ಮಾತುಗಳು ಅಂತಃಕರಣವನ್ನು ತುಳುಕಾಡಿಸಿ, ಕಣ್ಣೀರ ಮುತ್ತುಗಳನ್ನು ಹೊರಚೆಲ್ಲಿಸುತ್ತವೆ! ಕವಿಯ ಹೃದಯವಂತಿಕೆ ಕೇಳಿದವರ ಎದೆಯಲ್ಲಿ ನೆಲೆ ನಿಲ್ಲುತ್ತದೆ. ಮರ್ಮದ ಮಾತು ಮರ್ಮಕ್ಕೆ ತಾಗುತ್ತದೆ. (ಬೆಳಗಾವಿಯಿಂದ ರೈಲು ಹೊರಟೇಬಿಡುತ್ತದೆ, ಅಗಲಿಕೆಯಿಂದ ಬಂಧುಬಳಗಕ್ಕೆ ತಳಮಳವಾಗುತ್ತದೆ).

ಮುಂಬಯಿಗೆ ಮುಟ್ಟೇದ ಪವಣಂಜಯಾ |
ಕಂಡ ಜನರಿಗೆ ಅನಿಸಿತ ಭಯಾ ||
ಹರೋ ಸಮುದ್ರ ಕರವೀರ ನೀರಾ ||
ಹೊಳೀತೈತಿ ರತ್ನದಾ ಕಾಯಾ ||

ಭೆಟ್ಟಿ ತಗೊಂಡ ಇಟ್ಟೆದಯಾ |
ಮುದ್ದಕೊಟ್ಟ ಮಾಡತಾರ ಮಾಯಾ ||
ಮಾನಪತ್ರ ಕೊಟ್ಟ ಅಂತಾರ ಬಾಳಾಗ |
ಹೋಗಿಬರಬೇಕೋ ಮಹಾರಾಯ ||

ಬೆಳಗಾವಿಯಿಂದ ರೈಲು ಪ್ರವಾಸ ಮಾಡಿ ಪವಣಂಜಯ ಮುಂಬೈ ಮುಟ್ಟಿದ. ಅವನ ಕೀರ್ತಿ ಆಗಲೇ ಹಬ್ಬಿತ್ತು. ಅವನನ್ನು ನೋಡಲು ಮತ್ತು ಅಭಿನಂದಿಸಿ ಕಳಿಸಿಕೊಡಲು ಮುಂಬೈ ಜನರು ಬಂದು ಸೇರಿದರು. ಬೆಳಗಾವಿ-ಕೊಲ್ಲಾಪುರದ ನಾಡನ್ನು ಕರವೀರ ನಾಡೆಂದು ಕರೆಯುತ್ತಿದ್ದರು. ಹಾಗೆ ಕರೆಯುವುದು ಇಂದಿಗೂ ಹಳ್ಳಿಗಾಡಿನಲ್ಲಿ ರೂಢಿಯಲ್ಲಿದೆ. ಕರವೀರನಾಡಿನ ನೀರುಂಡು ಬೆಳೆದ ರತ್ನದಂತೆ ಹೊಳೆಯುವ ಅವನ ಅಂಗ ಸೌಷ್ಠವವನ್ನು ಕಂಡು ಮುಂಬೈ ಜನ ಹಿಗ್ಗಿದರು. ಹರವಾದ ಸಮುದ್ರದ ನೀರನ್ನು ಈ ಕರವೀರ ನೀರು ಹೇಗೆ ಹೊಂದಿಕೊಳ್ಳುವುದೋ ಎಂಬ ಭೀತಿಯು ಆಯಿತು; ಆದರೂ ಮುದ್ದುಕೊಟ್ಟು ಮಾಯೆ ಮಾಡಿ ಸನ್ಮಾನದೊಂದಿಗೆ ಹೋಗಿಬಾರೆಂದು ಮುಂಬಯಿ ಜನರು ಪವಣಂಜಯನನ್ನು ಕಳಿಸಿಕೊಟ್ಟರು.

ಆಗಲಿಲ್ಲ ಏನ ಅಪಾಯ |
ಕೈಗೂಡೀತ ಆಗ ಉಪಾಯಾ ||
ಪೂರ್ವದಿಕ್ಕಿನಿಂದ ಉದಯ ಆಧಾಂಗ
ವಿಲಾಯತಿಗೆ ಮುಟ್ಟೇದ ಸೂರ್ಯ ||

ಪೂರ್ವದಿಕ್ಕಿನ ಸೂರ್ಯನಂತಿರುವ ಪವಣಂಜಯನು, ಯಾವ ಅಪಾಯವಿಲ್ಲದೆ ಸುರಕ್ಷಿತವಾಗಿ ಪಶ್ಚಿಮ ದೇಶದ ಇಂಗ್ಲೆಂಡಿಗೆ ಮುಟ್ಟಿದನು; ಅಲ್ಲಿ ಸೂರ್ಯೋದಯವಾದಂತೆ ಕಾಣಿಸಿಕೊಂಡನು. ಆದರೂ ಅವನಿಗೆ ಪ್ರವಾಸದಿಂದ ಸ್ವಲ್ಪ ಅನಾನುಕೂಲತೆಗಳೂ ಸಂಭವಿಸಿದವು.

ಹಡಗದಾಗ ಕುಂತ ಅಪ್ಪಯ್ಯಾ |
ಒಳಗೆ ನೋಡಿ ಆನಲಿಲ್ಲ ಹಾಯಾ ||
ಸಾಗರ ಶೋಭಾ ಎಂದು ಕಂಡೀತು |
ಸುತ್ತೂಕಡೆ ಎಲ್ಲಾ ಜಲಮಯಾ ||

ಹೊರಬಿದ್ದ ಹೋತರಿ ಕೂಸಾ |
ಹತ್ತೀತ ಬಾವೀಸ ದಿವಸಾ ||
ಸಮುದ್ರದಾಗ ಆತರಿ ವಾಸಾ |
ಕೊಳನೀರ ಇಲ್ಲ ಉಪವಾಸಾ ||

ಒಳಗಿತ್ತ ಓದುವ ಧ್ಯಾಸಾ |
ಅವ ಆದಾನಾ ಮನದ ದಾಸಾ ||
ಹೋದ ಬಂಟ ಹಿಂದುಸ್ಥಾನದಿಂದಾ |
ಬೆಳಕು ಬಿತ್ತ ಅಲ್ಲೆ ಸೂರ್ಯಂದಾ ||

೨೨ ದಿವಸಗಳ ಜಲಪರ್ಯಟನ ಕಣ್ಣಿಗೆ ಶೋಭೆಯನ್ನು ತಂದರೂ ಹೃದಯಕ್ಕೆ ಹಿಗ್ಗು ತರಲಿಲ್ಲ. ಕೊಳು ನೀರು ಇಲ್ಲದೆ ಉಪವಾಸ ಕಳೆಯಬೇಕಾಯಿತು. ಹೃದಯದಲ್ಲಿ ಚಿಂತೆ ಹುಟ್ಟಿತು. ಶರ್ತಿನಲ್ಲಿ ನಂಬರು ಪಡೆಯಲೇಬೇಕೆಂದು. ಅಂತೂ ಹೋಗಿ ಮುಟ್ಟಿದನು. ಅಲ್ಲಿ ಅವನ ಕೀರ್ತಿ ಹರಡಿತು. ಅಂದರೆ, ಹಿಂದೂಸ್ಥಾನದಿಂದ ಹೋದ ಈ ಬಂಟನೆಂಬ ಸೂರ್ಯನ ಬೆಳಕು ಅಲ್ಲಿ ಹರಡಿತು, ಎಂದು ಅಭಿಮಾನದಿಂದ ಕವಿ ಉತ್ಪ್ರೇಕ್ಷೆಗೊಳಿಸಿ ವರ್ಣಿಸಿದ್ದಾನೆ.

ಲಂಡನ ಕತೀ ಕೇಳರಿ ಕುಂತಾ |
ಅಲ್ಲಿ ಇಟ್ಟಾರ ನಾಲ್ಕು ಶರ್ತಾ ||
ಮೂರು ಶರ್ತಿನೊಳು ಜಯ ಹೊಂದ್ಯಾನೋ |
ಪವಣಂಜಯ ಪುಣ್ಯವಂತಾ ||

ಯೂರೋಪಿಯನ್ನರು ಕೂಡ್ಯಾರ ಮಸ್ತ |
ನೋಡಿದಾರ ಓದುವ ಹಿಡಿತಾ ||

ಫಳ್‌ಫಳಾ ಚಪ್ಪಾಳಿ ಬಾರಿಸೋರು |
ಹೆಣ್‌ಗಂಡ ಹೌದ್ ಹೌದಂತಾ ||

ಗಾಳಿಗಿಂತ ಮುಂದ ಜಿಗಿತಾ |
ನಡದಾರವನ ನೋಡುತಾ ||
ಮೋಟರ-ಸೈಕಲ್ ಕುಣತಿರತಾವೊ |
ಓಡುವ ಬಂಟರ ಸುತ ಮುತ್ತಾ ||

ಪವಣಂಜಯನ ಶಾಮರ್ತಾ |
ವಿಲಾಯತಿಗಿ ಹಬ್ಬಿತ ಶುರ್ತಾ ||
ಯುರೋಪೆಲ್ಲಾ ಗಮುಗಮಿಸಿ ಬಿಟ್ಟಾ |
ಅದ ಹ್ಯಾಂಗ್ ಹೋದೀತೋ ಮರ್ತಾ ||

ಇಂಗ್ಲೆಂಡ್ ದೇಶದ ಲಂಡನ್ ಪಟ್ಟಣ ಸೇರಿದ ಪವಣಂಜಯನು ಅಲ್ಲಿ ಏರ್ಪಡಿಸಿದ ನಾಲ್ಕು ಸ್ಪರ್ಧೆಗಳಲ್ಲಿ ಭಾಗವಹಿಸುವ ಪ್ರಸಂಗ ಬಂತು. ಮೂರರಲ್ಲಿ ಅವನಿಗೆ ಜಯ ಲಭಿಸಿತು. ಆದರೂ ಅದೇನು ಕಡಿಮೆಯದಲ್ಲ. ಅವನ ಓಡುವ ಕಲೆಯನ್ನು ಯುರೋಪಿಯನ್ನರು ಬಹಳ ಮೆಚ್ಚಿದರಂತೆ! ಹೆಣ್‌ಗಂಡು ಪ್ರೇಕ್ಷಕ ವರ್ಗ ಚಪ್ಪಾಳೆ ತಟ್ಟಿ ಪ್ರಶಂಸೆ ಮಾಡಿದರಂತೆ! ಗಾಳಿಗಿಂತ ಮುಂದೆ ಜಿಗಿಯುತ್ತ ಓಡುವ ಅವನ ಬೆನ್ನು ಹತ್ತಿ ಸೈಕಲ್ಲು-ಮೋಟಾರುಗಳು ಕುಣಿಯುತ್ತ ಅವನ ಓಡುವ ಕಲೆಯನ್ನು ನೋಡಿದರಂತೆ! ಪವಣಂಜಯನ ಸಾಮರ್ಥ್ಯದ ಕೀರ್ತಿ ವಿಲಾಯತಿಯ ತುಂಬೆಲ್ಲ ಹಬ್ಬಿತು. ಯುರೋಪ ಖಂಡವನ್ನೇ ಗಮುಗಮಿಸಿಬಿಟ್ಟ! ಇಂಥ ಅಪೂರ್ವ ಘಟನೆಯನ್ನು ಕವಿ 'ಅದ ಹ್ಯಾಂಗ ಹೋದೀತೊ ಮರ್ತಾ?' ಎಂದು ಹೇಳುವುದು ಸಹಜವಾಗಿದೆ.

ದಾವ ತಾಯಿ ಹಡದಾಳಿವನಾ |
ಆಕೀಗಿ ಒಲದಾನ ಭಗವಾನಾ ||
ಹಡೀಬೇಕ ಇಂಥ ಮಕ್ಕಳನಾ |
ಇಲ್ಲದಿದ್ರ ಚಲೋ ಬಂಜತನಾ ||
ಧನ್ಯ ಆದೀತ ಮೃತ್ಯುಂಜಯನಾ |
ಹಿಂದುಸ್ಥಾನಕ ಬಂದೀತ ಮಾನಾ ||

ಹಡೆದರೆ ಇಂಥ ಮಕ್ಕಳನ್ನು ಹಡೆಯಬೇಕು, ಇಲ್ಲದಿದ್ದರೆ ಬಂಜೆ ಇದ್ದರೂ ಒಳ್ಳೆಯದೇ! ಆದರೆ ಹೇಡಿ ಮಕ್ಕಳನ್ನು ಎಂದಿಗೂ ಹಡೆಯಬಾರದು ಎಂದು ಕವಿ ಭಾರತೀಯರ ಅಭಿಮಾನವನ್ನು ಕೆರಳಿಸುತ್ತಾನೆ; ಕ್ಷಾತ್ರತೇಜವನ್ನು

ಹೃದಯದಲ್ಲಿ ಜನರಿಗೆ ಪ್ರಥಮ ಸ್ಥಾನ ಕೊಡಬೇಕೆಂಬ ಭಾವ ಮೂಡುತ್ತದೆ! ಇರಲಿ, ಅಂತೂ ಭಾರತದ ಓಟಗಾರ ವಿಜಯಶಾಲಿಯಾದ!

ಉಂಗುರ ಕೊಟ್ಟಾನ ಇಲ್ಲಿ ನೋಡಾ |
ನೋಡಿ ಥಕ್ ಆದ ಚಿನಿವಾಲಾ ||
ಬೆಳ್ಳಿಬಂಗಾರ ಪೆಟ್ಟಿಗೆ ತುಂಬಿಕೊಂಡ |
ನಗನಗತ ಬರತಾನ ಸಣ್ಣ ಬಾಲಾ ||

ಬೆಳಗಾವಿಗಿ ಬಂದ ಮುಟ್ಟೀದಾ |
ಅಂತಾರ ಮಾತ್ರನ್ನ ಮುಟ್ಟೀದಾ ||
ವೀರಶೂರ ಕರ್ಮ ಸುಟ್ಟೀದಾ |
ಇನಾಮದ ರಾಶಿ ಒಟ್ಟೀದಾ ||
ದ್ವಾರಪಾಲ ಕವಿ ಕಟ್ಟೀದಾ |
ನಾಡಮ್ಯಾಲ ಅವನ ಬಿಟ್ಟೀದಾ ||

ಜೆಲ್ಲಿಯರ್ ಸಂಪತ್ತನ್ನು ಗಳಿಸಿಕೊಂಡು ಉಂಗುರ, ಬೆಳ್ಳಿ, ಬಂಗಾರ ಮುಂತಾದ ಬಹುಮಾನಗಳನ್ನು ಪೆಟ್ಟಿಗೆ ತುಂಬಿಕೊಂಡು ಧನಂಜಯನು ಮರಳಿ ನಮ್ಮ ದೇಶಕ್ಕೆ ಬಂದನು: ಬೆಳಗಾವಿಯನ್ನು ಮುಟ್ಟಿದನು. ಆಗ ಅವನನ್ನು ಕಂಡ ಜನತೆಗೆ ಆನಂದ ಅಭಿಮಾನ ಉಕ್ಕೇರಿ ಬಂತು. ಅವನು ಪುನರ್ಜನ್ಮ ತಳೆದು ಬಂದನೋ ಎಂಬಂತಹ ಸಂತೋಷವನ್ನು ಜನರು ಅನುಭವಿಸಿದರು. ತಾನು ತಂದ ಉಂಗುರವನ್ನು ಚಿನಿವಾಲನಿಗೆ ತೋರಿಸಿದಾಗ ಅದರ ಜೊತೆ ಚಿನ್ನವನ್ನು ಕಂಡು ಚಿನಿವಾಲ ಥಕ್ ಆದನಂತೆ! ಶೂರ ಧೀರನು, ಇನಾಮದ ರಾಶಿಯನ್ನು ಒಟ್ಟಿ ಕರ್ಮವನ್ನು ಸುಟ್ಟ ಧನಂಜಯನು ಪವಿತ್ರ ಜೀವಿಯಾದ ನೆಂದು ಕವಿ ವರ್ಣಿಸುತ್ತಾನೆ. ಪೂರ್ವಜನ್ಮದ ಪುಣ್ಯದ ಫಲದಿಂದ ಇಂಥ ಭಾಗ್ಯ ಅವನಿಗೆ ಲಭಿಸಿತೆಂದು ಕವಿಯು ಭಾವಿಸಿದ್ದಾನೆ.

ಬೆಳಗಾವಿಯ ದ್ವಾರಪಾಲ ಕವಿ ಬೆಳಗಾವಿಯವನೇ ಆದ ಧನಂಜಯನ ಶೌರ್ಯ ಸಾಹಸಗಳನ್ನು ಹೃದಯ-ತುಂಬಿ ಕೊಂಡಾಡಿದ್ದಾನೆ. ಕವಿ ಮತ್ತು ಕಲಿ ಇಬ್ಬರೂ ಧನ್ಯರಾಗಿದ್ದಾರೆ. ಕವಿತೆ ಬಹಳ ಆಪ್ಯಾಯಮಾನಕಾರಿಯಾಗಿದೆ. ಕವಿತಾ ಶಕ್ತಿ ಶ್ರೀಮಂತವಾಗಿದೆ. ಸತ್ಯವನ್ನು ಮರೆಮಾಚದ ಒಂದು ಸುಂದರ ಐತಿಹಾಸಿಕ ಘಟನೆ ಇಲ್ಲಿ ಚಿರಂತನತ್ವವನ್ನು ಪಡೆದಿದೆ. ಉತ್ಸಾಹ ಉಲ್ಲಾಸಗಳೊಂದಿಗೆ ಜನತೆಗೆ ಆನಂದ ಉಣಿಸಿ ಬಾಳಿನಲ್ಲಿ ಹೊಸ ಹುರುಪನ್ನು ಕಲಿಸುತ್ತದೆ. ಇಂಥ ವಸ್ತು, ಇಂಥ ಅಭಿವ್ಯಕ್ತಿ ಇನ್ನೆಲ್ಲಿದೆ?—ಎನ್ನುವಂತಹ ಉತ್ಕೃಷ್ಟತೆಯಿಂದ ಧನಂಜಯನ ಹಾಡು ಸಾರ್ಥಕ್ಯ ಹೊಂದಿದೆ.

ಪರ್ವತ ಶಿವಯೋಗಿ: ಕಾಲ ವಿಚಾರ ಮತ್ತು ಕವಿಚರಿತೆಯ ಕೆಲವು ಅನುಕ್ತ ಕೃತಿಗಳು

—ಎಸ್. ಶಿವಣ್ಣ

ಕಾಲ—

ಪರ್ವತ ಶಿವಯೋಗಿ ಸಿದ್ಧಲಿಂಗಸ್ವಾಮಿಗಳ ಜ್ಞಾನೋಪದೇಶಪಾತ್ರ ಹಾಗೂ ಬಾಲೇಂದುಪುರದ (ಇಂದಿನ ಮೈಸೂರು ಜಿಲ್ಲೆಯ ಯಳಂದೂರು) ಹರೀಶ್ವರ-ಶಾಂತವೀರೇಶ್ವರ ಕರಸರಸಿಜಾತ.

ಈತನ ಕಾಲ ನಿರ್ಣಯದ ಬಗೆಗೆ ಆರ್. ನರಸಿಂಹಾಚಾರ್ಯರು ಕರ್ಣಾಟಕ ಕವಿಚರಿತೆಯ ದ್ವಿತೀಯ ಸಂಪುಟ (೧೯೧೯) ಪುಟ ೩೭೭ರಲ್ಲಿ 'ಮುರಿಗೆಯ ಶಾಂತವೀರೇಶನ (ಸು. ೧೫೩೦) ಗ್ರಂಥಕ್ಕೆ ಇವನು ಟೀಕೆಯನ್ನು ಬರೆದಿರುವುದರಿಂದ ಅವನ ಕಾಲಕ್ಕಿಂತ ಈಚೆಯವನು ಎಂಬುದು ಸ್ಪಷ್ಟವಾಗಿದೆ. ಇವನ ಕಾಲವು ಸುಮಾರು ೧೬೫೦ ಆಗಬಹುದೆಂದು ತೋರುತ್ತದೆ' ಎಂದಿದ್ದಾರೆ.

ಮುಂದೆ ಅವರೇ 'ಕರ್ಣಾಟಕ ಕವಿಚರಿತೆ'ಯ ತೃತೀಯ ಸಂಪುಟವನ್ನು ಕ್ರಿ.ಶ. ೧೯೨೯ರಲ್ಲಿ ಪ್ರಕಟಿಸಿದಾಗ, ಮುರಿಗೆಯ ಶಾಂತವೀರನ ಶಿಷ್ಯ ಇಮ್ಮಡಿ ಮುರಿಗೆಯಸ್ವಾಮಿ (= ಇಮ್ಮಡಿ ಗುರುಸಿದ್ಧ) ವಿರಚಿತ 'ಹಾಲಾಸ್ಯ ಪುರಾಣ ಚಂಪೂ'ವಿನ ಗ್ರಂಥೋಕ್ತ ಕಾಲವಾದ ಕ್ರಿ.ಶ. ೧೭೨೦ನ್ನು ಆಧರಿಸಿ, ಮುರಿಗೆಯ ಶಾಂತವೀರ ಮುಂತಾದವರ ಕಾಲವನ್ನು ಯಥೋಚಿತವಾಗಿ ಈಚೆಗೆ ಹಾಕಬೇಕಾಗುತ್ತದೆ.[1] ಎಂದು ತಮ್ಮ ಮೊದಲಿನ ಅಭಿಪ್ರಾಯವನ್ನು ತಿದ್ದಿಕೊಂಡಿರುವರು. ಆದರೆ ಮುರಿಗೆ ಶಾಂತವೀರನ ತಿದ್ದುಪಡಿಯಾದ ಕಾಲವಾವುದೆಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸಿಲ್ಲ.

---

1. ಆರ್. ನರಸಿಂಹಾಚಾರ್ಯ, ಕರ್ಣಾಟಕ ಕವಿಚರಿತೆ (ತೃತೀಯ ಸಂಪುಟ), ಪುಟ ೨೫೨.

ಇಮ್ಮಡಿ ಗುರುಸಿದ್ಧ ತನ್ನ ಗುರು ಮುರಿಗೆ ಶಾಂತವೀರನು ಲಿಂಗೈಕ್ಯನಾದ ಮೇಲೆ ಅವನ ಜೀವನ ಚರಿತ್ರಾತ್ಮಕ ಅಂಶಗಳ ನಿರೂಪಣೆಯುಳ್ಳ 'ಮುರಿಗಾ ಶಾಂತವೀರೇಶ್ವರನ ತಾರಾವಳಿ'ಯನ್ನು[2] ರಚಿಸಿದ್ದಾನೆ. ಅದರಲ್ಲಿ ಶಾಂತವೀರನು ಸ್ವಭಾನು ಸಂ| ಅಧಿಕ ಶ್ರಾವಣ ಶುದ್ಧ ಬಿದಿಗೆ ಸೋಮವಾರ ರಾತ್ರಿ ಮೂರೂವರೆ ತಾಸಿನಲ್ಲಿ (ಅಂದರೆ ಕ್ರಿ.ಶ. ೫-೫-೧೭೭೩ರಲ್ಲಿ) ಶಿವಲಿಂಗದಲ್ಲಿ ಬೆರೆದ'ನೆಂದು ತಿಳಿಸಿದ್ದಾನೆ.[3]

ಈ ಮೇಲಿನ ಹೇಳಿಕೆಯಿಂದ ಮುರಿಗಾ ಶಾಂತವೀರನ ಕಾಲ ಕ್ರಿ.ಶ. ೧೭೦೦ರ ಹಿಂದುಮುಂದೆಂಬ ಸಂಗತಿ ಖಚಿತವಾಗುತ್ತದೆ.

ಹೀಗಾಗಿ ಶಾಂತವೀರನ 'ಪ್ರಭುಲಿಂಗದ ಕಂದ'ಕ್ಕೆ ಟೀಕೆ ಬರೆದ ಪರ್ವತ ಶಿವಯೋಗಿಯು ಕ್ರಿ.ಶ. ೧೭೦೦ಕ್ಕಿಂತ ಪ್ರಾಚೀನನಲ್ಲವೆಂಬ ಸಂಗತಿ ಸಿದ್ಧವಾಗುವುದು. ಪ್ರಕೃತದಲ್ಲಿ ಪರ್ವತ ಶಿವಯೋಗಿಯು ಕಾಲದ ಬಗೆಗೆ ಮೇಲಿನ ಪರಿಮಿತಿಯೊಂದರ ವಿನಃ ಮತ್ತೇನನ್ನು ಹೇಳಲು ಸಾಧ್ಯವಿಲ್ಲ.

ಕೃತಿಗಳು

ಭೋಜದೇವನ್ನಪತಿ ಕೃತ 'ತತ್ತ್ವಪ್ರಕಾಶಿಕಾ' (ಶ್ರೀ ಪರ್ವತೇಶಕೃತ, ಕರ್ಣಾಟಕ ಟೀಕಾ ಸಹಿತ) ಎಂಬ ಕೃತಿಯು 'ಪೀಠಿಕೆ' ಪುಟ ೨೮ರಲ್ಲಿ ಅದರ ಸಂಪಾದಕರು[4] ಪರ್ವತ ಶಿವಯೋಗಿಯು ಈ ಕೆಳಕಂಡ ೬ ಕೃತಿಗಳನ್ನು ಹೆಸರಿಸಿದ್ದಾರೆ.

೧) ಪ್ರಭುಲಿಂಗ ಕಂದದ ಟೀಕೆ.

೨) ಏಕೋತ್ತರ ಶತಸ್ಥಲೀ ಟೀಕೆ.

೩) ನಾಗಲಿಂಗ ದೇವರ ತ್ರಿವಿಧಿಯ ಟೀಕೆ.

೪) ಮರುಳದೇವರ ಕಂದದ ಟೀಕೆ

೫) ಗುರುಸ್ತೋತ್ರ ತ್ರಿವಿಧಿಯ ಟೀಕೆ.

೬) ಷಡ್ವಕ್ತ್ರ ಸ್ತೋತ್ರದ ಟೀಕೆ.

---

2. 'ಕನ್ನಡ ಅಧ್ಯಯನ ಸಂಸ್ಥೆ' (ಮೈಸೂರು ವಿಶ್ವವಿದ್ಯಾನಿಲಯ) ಸಂಗ್ರಹ.

3. ಬಸವರಾಜಯ್ಯ, ಎಂ. ಎಸ್. 'ಶ್ರೀ ಗುರುಮುರುಘ ಶಾಂತವೀರ ದೇಶಿಕೇಂದ್ರ ಮಹಾಸ್ವಾಮಿಗಳವರು'.

4. ವೀರಶೈವ ಗ್ರಂಥ ಪ್ರಕಾಶಿಕಾ ವಿದ್ವನ್ಮಂಡಲಿಯಿಂದ ಪರಿಷ್ಕೃತವಾದ ಕೃತಿ. ಮೈಸೂರು (೧೯೦೮).

ಆರ್. ನರಸಿಂಹಾಚಾರ್ಯರು ಮೇಲಿನ ೬ ಕೃತಿಗಳಲ್ಲಿ ಕ್ರಮಾಂಕ ೧, ೩ ಮತ್ತು ೫ನೆಯ ಕೃತಿಗಳನ್ನು ಹೆಸರಿಸಿದ್ದಾರೆ. ಉಳಿದ ೨, ೪ ಮತ್ತು ೬ನೆಯ ಕೃತಿಗಳನ್ನು ಹೆಸರಿಸಿಲ್ಲ. ಅಲ್ಲದೆ ಈ ಕೆಳಕಂಡ ೩ ಕೃತಿಗಳು ಪರ್ವತ ಶಿವಯೋಗಿಯ ರಚನೆಗಳೆಂದು ತಿಳಿಸಿದ್ದಾರೆ.[5]

೧) ಬಸವೇಶ್ವರ ದೇವರ ವಚನಸಾರಾರ್ಥ.

೨) ಚೆನ್ನಬಸವನ ಕರಣಹಸುಗೆಯ ಟೀಕೆ.

೩) ಚೆನ್ನಬಸವನ ಮಿಶ್ರಾರ್ಪಣದ ಟೀಕೆ.

೪೨ ತ್ರಿಪದಿಗಳ 'ಸಂಗಮೇಶ್ವರಾಂಕಿತ'ದ 'ಗುರು ಸ್ತೋತ್ರ ತ್ರಿಪದಿ'[6]ಗೆ ಪರ್ವತ ಶಿವಯೋಗಿ ಟೀಕೆ[7]ಯನ್ನು ಬರೆದಿರುವ ಸಂಗತಿ ಇತ್ತೀಚೆಗೆ ತಿಳಿದುಬಂದಿದೆ.

ಪ್ರೊ|| ಸಿ. ಮಹದೇವಪ್ಪನವರು ಪರ್ವತ ಶಿವಯೋಗಿ 'ತ್ರಿವಿದ ಮೂರರ ಸಾರದ ಟೀಕೆ' ಎಂಬ ಕೃತಿಯನ್ನು[8] ರಚಿಸಿರುವ ಸಂಗತಿಯನ್ನು ಮೊದಲ ಬಾರಿಗೆ ಬೆಳಕಿಗೆ ತಂದಿದ್ದಾರೆ.

ಆದರೆ ಮಹದೇವಪ್ಪನವರು ತಿಳಿಸಿರುವ ಕೃತಿ ಸ್ವತಂತ್ರ ಕೃತಿಯಾಗಿರದೆ ಈ ಮೊದಲೆ ಹೆಸರಿಸಿರುವ ೧) ನಾಗಲಿಂಗದೇವರ ತ್ರಿವಿದಿಯ ಟೀಕೆ, ೨) ಗುರು ಸ್ತೋತ್ರ ತ್ರಿವಿದಿಯ (ಚೆನ್ನಮಲ್ಲಕೃತ) ಟೀಕೆ, ೩) ಗುರುಸ್ತೋತ್ರ ತ್ರಿವಿಧಿಯ (ಅಂ / ಸಂಗಮೇಶ್ವರ) ಟೀಕೆಗಳ ಸಂಕಲನವೋ ಅಥವಾ ಅವುಗಳ ಸಾರ ಸಂಗ್ರಹವೋ ಆಗಿರುವ ಸಾಧ್ಯತೆ ಇದೆ. ಕೃತಿ ಪ್ರಕಟವಾಗದೆ ಅದರ ಬಗೆಗೆ ಏನನ್ನೂ ಖಚಿತವಾಗಿ ಹೇಳಲಾಗುವುದಿಲ್ಲ.

---

5. ಆರ್. ನರಸಿಂಹಾಚಾರ್ಯ, ಕರ್ನಾಟಕ ಕವಿಚರಿತೆ (ದ್ವಿತೀಯ ಸಂಪುಟ) ಪುಟ ೪೯೭.

6. ಈ ಕೃತಿಯ ೪೧ ತ್ರಿಪದಿಗಳನ್ನು ಶ್ರೀ ಚೆನ್ನಮಲ್ಲಿಕಾರ್ಜುನರು 'ಸದ್ಧರ್ಮ ದೀಪಿಕೆ' ಮಾಸಪತ್ರಿಕೆಯ ೭೦-೭೧ನೆಯ ಸಂಚಿಕೆಗಳಲ್ಲಿ ಪ್ರಕಟಿಸಿದ್ದಾರೆ.

7. ಟೀಕಾ ಸಹಿತವಾದ ೨ ಓಲೆ ಕೃತಿಗಳು 'ಕನ್ನಡ ಅಧ್ಯಯನ ಕೇಂದ್ರ' (ಬೆಂಗಳೂರು ವಿಶ್ವವಿದ್ಯಾಲಯ)ದ ಸಂಗ್ರಹದಲ್ಲಿವೆ.

8. ಸಿ. ಮಹಾದೇವಪ್ಪ, 'ಶಿದ್ಧಲಿಂಗ ಶಿವಯೋಗಿ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, (೧೯೭೪) ಪುಟ ೯೭.

(೨೮) ಸುಬೋಧ, ಬೆಂಗಳೂರು (೨೯) ಪ್ರದೀಪ, ಧಾರವಾಡ (೩೦) ಸಪ್ತಗಿರಿ, ತಿರುಪತಿ (೩೧) ಪುಸ್ತಕ ಪ್ರಪಂಚ, ಮೈಸೂರು (೩೨) ಕ್ರೀಡಾಂಗಣ, ಬೆಳಗಾವಿ (೩೩) ತುಷಾರ, ಮಣಿಪಾಲ್ (೩೪) ಜೀವನ ವಿಕಾಸ, ಕಲಬುರ್ಗಿ (೩೫) ರಾಷ್ಟ್ರೋತ್ಥಾನ ವಾರ್ತಾ, ಬೆಂಗಳೂರು (೩೬) ವಿಚಾರಮಂಥನ, ಧಾರವಾಡ.

ತ್ರೈಮಾಸಿಕ: (೧) ಕರ್ಣಾಟಕ ಭಾರತಿ, ಧಾರವಾಡ (೨) ಪ್ರಬುದ್ಧ ಕರ್ನಾಟಕ, ಮೈಸೂರು (೩) ಸಾಕ್ಷಿ, ಸಾಗರ (೪) ಸಂಕ್ರಮಣ, ಧಾರವಾಡ (೫) ಜ್ಞಾನಸುಧಾ, ಬೆಂಗಳೂರು (೬) ಸಾಧನೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. (೭) ಕರ್ನಾಟಕ ಗ್ರಂಥಾಲಯ, ಧಾರವಾಡ (೮) ಆಹಾರ ವಿಜ್ಞಾನ (೯) ವಾಹಿನಿ (೧೦) ಪ್ರಕೃತಿ ಜೀವನ (೧೧) ಮೈಸೂರು ಸಕ್ಕರೆ.

Bi-Monthly: (1) The Journal of the University of Bombay.

Monthly: (1) Cultural & Life, U.S.S.R. (2) Dasajyothi, Bangalore (3) Soviet Literature, Leningrad, U. S. S. R. (4) Public Affairs, G. I. P. A., Bangalore (5) Indian, P.E.N., Bombay (6) The Journal of Mysore State Education Federation, Bangalore (7) Mysore Information Bulletin, Bangalore (8) Soviet Land, New Delhi (9) "Parkh," Punjab University, Chandigarh (10) The Sahitya Academy of Letters, New Delhi (11) The American Reporter, New Delhi (12) Bulletin–Institute for the Study of the U. S. S. R., Germany.

Quarterly: (1) J.urnal of the Mythic Society, Bangalore (2) Bulletin of the Deccan College Research Institute, Poona (3) Bulletin of the School of Oriental and African Studies, London University, London (4) Journal of the Shivaji University, Kolhapur.

Half-Yearly: (1) Half-Yearly Journal of the Mysore University, Mysore.

Fortnightly: (1) Democratic Germany, New Delhi (2) Indian Libertarian, Bangalore (3) News from Isreil, Bombay (4) Pigmy, Manipal (S.K.)

B. M. Srikantia Press, Kannada Sahitya Parishat, Bangalore–18

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೧೮

ಪ್ರಕಟಣೆಗಳು

೧.	ಕನ್ನಡದ ಬಾವುಟ	೩-೦೦
೨.	ಕರ್ನಾಟಕ ವೀರಯೋಧರು	೫-೦೦
೩.	ಕುಸುಮಾವಳಿ	೧೦-೦೦
೪.	ಕನ್ನಡ ನಾಡಿನ ಚರಿತ್ರೆ: ಭಾಗ ೧	೩-೦೦
	ಭಾಗ ೨	೨-೭೫
	ಭಾಗ ೩	೨-೦೦
೫.	ಗಾಳಿಯಲ್ಲಿನ ಅಗೋಚರ ಶತ್ರುಗಳು	೧-೨೫
೬.	ನಕ್ಷತ್ರ ದರ್ಶನ	೧-೫೦
೭.	ಹರಿದಾಸ ಕೃತಿಮಂಜರಿ	೧-೨೫
೮.	ಪ್ಲೇಟೋವಿನ ಆದರ್ಶ ರಾಜ್ಯ	೧-೩೮
೯.	ಚೇರಮ ಕಾವ್ಯಂ	೨-೦೦
೧೦.	ಕನ್ನಡದ ಅತ್ಯುತ್ತಮ ಸಣ್ಣಕತೆಗಳು	೮-೦೦
೧೧.	ಕನ್ನಡದ ಅತ್ಯುತ್ತಮ ಸಣ್ಣಕತೆಗಳು (೧೨ ಕತೆಗಳ ಸಂಗ್ರಹ)	೩-೨೫
೧೨.	ಕಾದಂಬರಿ–ಸಾಮಾನ್ಯ ಮನುಷ್ಯ	೧-೦೦
೧೩.	ಮಧುರಚೆನ್ನರ ಜೀವನ ಮತ್ತು ಕಾರ್ಯ.	೨-೦೦
೧೪.	ಆಲರ್ಜಿ	೨-೦೦
೧೫.	ಉದ್ಭಟದೇವ ಚರಿತೆ	೧-೫೦
೧೬.	ತ್ರಿಪುರದಹನ ಸಾಂಗತ್ಯ	೦-೭೫
೧೭.	ಕರ್ಣಾಟಕ ಕವಿಚರಿತೆ	೧೫-೦೦
೧೮.	ಜನಪದ ಸಾಹಿತ್ಯ	೩-೫೦
೧೯.	ಕಾಳಿದಾಸನ ದೃಷ್ಟಿ–ಸೃಷ್ಟಿ	೨-೦೦
೨೦.	ಆಧುನಿಕ ಗದ್ಯಸಾಹಿತ್ಯ: ಭಾಗ ೧	೩-೦೦
	,, ಭಾಗ ೨	೩-೦೦
೨೧.	ಸೋಬಾನೆ ಚಿಕ್ಕಮ್ಮನ ಪದಗಳು	೬-೦೦
೨೨.	ಕರ್ನಾಟಕದ ಯಾತ್ರೆ	೧೫-೦೦
೨೩.	ಕಾವ್ಯಸೌರಭ	೨-೦೦
೨೪.	ಮಲೆಯಾಳರ ಕಥೆಗಳು	೨-೭೫
೨೫.	ಕರ್ಣ ಕರ್ಣಾಮೃತ	೨-೫೦
೨೬.	ಕವಿಹೃದಯ	೨-೫೦
೨೭.	ಚಂದ್ರಹಾಸೋಪಾಖ್ಯಾನ	೧-೭೫
೨೮.	ಸೋಮೇಶ್ವರ ಶತಕ	೨-೨೫
೨೯.	ಸೀತಾ ಪರಿತ್ಯಾಗ	೧-೨೫
೩೦.	ಬಸವೇಶ್ವರ ವಚನಗಾನ ಮಂಜರಿ	೨-೦೦
೩೧.	ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು, ಸಂಪುಟ–೧,೨,೩	೩೦-೦೦
೩೨.	ಕನ್ನಡ ಸ್ವಯಂಬೋಧಿನಿ: ಭಾಗ ೧	೧-೨೫
	,, ಭಾಗ ೨	೧-೭೫
೩೩.	ಕಾವ್ಯಗಾಯನ ಕಲಾಸಂಗ್ರಹ	೨-೦೦
೩೪.	Kannada through English	೩-೦೦
೩೫.	ಚಿನ್ನದ ಬೆಳಸು	೮-೦೦
೩೬.	ಆಲೂರ ವೆಂಕಟರಾಯರ ಜೀವನ ಮತ್ತು ಕಾರ್ಯ	೨-೦೦
೩೭.	ಕಾವ್ಯಸಾರ	೧೫-೦೦
೩೮.	ನಮ್ಮ ಸೂರ್ಯ	೧-೨೫
೩೯.	ಶಬ್ದಾವರ್ತ ನಿರುಕ್ತ	೩-೦೦
೪೦.	ಆಧುನಿಕ ವ್ಯವಸಾಯ	೨-೫೦
೪೧.	ತಿರುಳುಗನ್ನಡ ತಿರುಕ	೧-೭೫
೪೨.	ಗಳಗನಾಥ ಮಾಸ್ತರರು	೨-೦೦
೪೩.	ಗಮಕ ಚಂದ್ರಿಕೆ	೨-೦೦
೪೪.	ಗಮಕ ರಸಾಯನ	೨-೦೦
೪೫.	ಸಾಹಿತ್ಯ ಶಾಸ್ತ್ರ	೨-೫೦
೪೬.	ಭಕ್ತವಾಣಿ	೨-೦೦
೪೭.	ಎಚ್. ವಿ. ನಂಜುಂಡಯ್ಯನವರ ಜೀವನ ಮತ್ತು ಕಾರ್ಯ	೧-೨೫
೪೮.	ಆರ್. ನರಸಿಂಹಾಚಾರ್ಯರ ಜೀವನ ಮತ್ತು ಕಾರ್ಯ	೧-೨೫
೪೯.	ಚಾರಿತ್ರಿಕ ದಾಖಲೆಗಳು	೨-೨೫
೫೦.	ಗಾಂಧಿ ಸಾಹಿತ್ಯ	೨-೦೦
೫೧.	ಸ್ವಸ್ಥ ಜೀವನ	೨-೫
೫೨.	ದ್ವಿತೀಯ ಮಹಾಯುದ್ಧ	೨-೫
೫೩.	ನಾಟಕಕಾರನರಹರಿಶಾಸ್ತ್ರಿ	೨-೦
೫೪.	ಮುಳಿಯ ತಿಮ್ಮಪ್ಪಯ್ಯ	೧-೫
೫೫.	ಮನಮಂಥನ	೧೫-೦
೫೬.	ಹಾಸ್ಯದರ್ಶನ	೧-೭

೫ ರೂ. ಗಳಿಗೆ ಕಡಮೆಯಿಲ್ಲದೆ ಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇ. ೨೫ರಂತೆ ರಿಯಾಯಿತಿ (ಕಮಿಷನ ಕೊಡಲಾಗುವುದು. ಪಠ್ಯಪುಸ್ತಕಗಳಿಗೆ ಶೇ. ೧೫ ಮಾತ್ರ.